
ಪ್ರಚೋದನೆ

ಲಂಕೇಶ್

ಮೇ 23, 2012 ಪುಟ 20 ರೂ. 14/-

ನಾಗೇಶ್ ಹೆಗಡೆ
ಸಿಂಥೆಟಿಕ್ ಸೆಗಣಿಗೆ ಹುಡುಕಾಟ



ಲಿಂಗಾಯತ ಸಚಿವರಿಗೆ ಬರೆ!
ಗೇಟ್ ಪಾಸ್!



ಕುರುಬರ ಕಹಳೆ
ಸಿದ್ದು ಮೇಲುಗೈ


ಶಿರಸಿ: ಟಿಕೆಟ್ ಗದ್ದಲ

ರಿ-ಕಿರಿ ಸ್ವಾಮಿಗಳ ಪ್ರೇಯಸಿಯರ ಕಿತ್ತಾಟ



ಬಳ್ಳಾರಿ
ಇನ್ನೂ ಇದೆ ರೆಡ್ಡಿ ಹವಾ

ಖ್ಯಾತ ಪರಿಸರ ತಜ್ಞ ನಾಗೇಶ್ ಹೆಗಡೆ ಬರೆದಿರುವ 'ಹಳ್ಳೀಮುಕ್ಕ ಎಲ್ಲೆಲ್ ಹೊಕ್ಕ' ಎಂಬ ಪುಸ್ತಕ ಕೆಲವು ತಿಂಗಳುಗಳ ಹಿಂದೆ ಪ್ರಕಟವಾಗಿದೆ. ಈಗ ಬೆಂಗಳೂರಿನ 'ಹೊರವಲಯ'ದಲ್ಲಿರುವ ಕೆಂಗೇರಿ ಎಂಬ 'ಹಳ್ಳಿ'ಯಲ್ಲಿ ತೋಟ ಮಾಡಿಕೊಂಡು ವಾಸಿಸುತ್ತಿರುವ ಹೆಗಡೆಯವರು ತಮ್ಮ ಸುತ್ತಲೂ ಕಂಡ ಹಳ್ಳಿ ಬದುಕಿನ ಹಲವು ಸ್ವಾರಸ್ಯಕರ ಸಂಗತಿಗಳನ್ನು ಈ ಪುಸ್ತಕದಲ್ಲಿ ತುಂಬಾ ಚೆಂದಾಗಿ ಬಿಡಿಸಿದ್ದಾರೆ. ಆ ಪುಸ್ತಕದಲ್ಲಿನ ಒಂದು ಲೇಖನವನ್ನು ಇಲ್ಲಿ ಪರಿಚಯಾತ್ಮಕವಾಗಿ ಪ್ರಕಟಿಸುತ್ತಿದ್ದೇವೆ.




ಸಿಂಥೆಟಿಕ್ ಸೆಗಣಿಗೆ ಹುಡುಕಾಟ

• ನಾಗೇಶ ಹೆಗಡೆ

ನಮ್ಮ ನಾಯಿ 'ಕಾಫಿ'ಯ ಜತೆ ದಿನಾ ಸಂಜೆ ಗೋಧೂಳಿ ವೇಳೆಗೆ ಹಳ್ಳಿಯ ಪಕ್ಕದ ಕೆರೆಯ ಅಂಚಿನಲ್ಲಿ ವಾಕಿಂಗ್ ಹೋಗುವುದು ಅಭ್ಯಾಸವಾಗಿತ್ತು. ನಮಗಲ್ಲ, ಕಾಫಿಗೆ ಅದು ಅಭ್ಯಾಸವಾಗಿತ್ತು. ಸಂಜೆ ಐದಾದರೂ ಮನೆಯಿಂದ ಹೊರಡದೇ ಇದ್ದರೆ ಕಾಫಿಗೆ ಚಡಪಡಿಕೆ ಆರಂಭವಾಗಿ ಹಿಂದಕ್ಕೂಮುಂದಕ್ಕೂ ಠಳಾಯಿಸುತ್ತ ಕೊನೆಗೆ ಕಂಪ್ಯೂಟರ್ ಎದುರು ನನ್ನ ಕೈಯಲ್ಲಿರುವ ಮೌಸನ್ನೇ ಕಿತ್ತು ರಾಮಾರಂಪ ಮಾಡುತ್ತಿತ್ತು.

ವಾಕಿಂಗ್ ಹೋಗಲು ನನ್ನ ಒಂದು ಸ್ವಾರ್ಥವೂ ಇತ್ತೆನ್ನಿ. ಪಾಳೇಕರ್ ಎಂಬ ಒಬ್ಬ ಮರಾಠಿ ಕೃಷಿಕ ಅದೇನೋ ಜೀವಾಮೃತ, ಬೀಜಾಮೃತ ಎಂಬ ಎರಡು ಬೀಜಮಂತ್ರಗಳ ಬಗ್ಗೆ ಭಾರೀ ಪ್ರಚಾರ ಮಾಡಿದ್ದ. ವಿಷರಹಿತ 'ಸಾವಯವ ಕೃಷಿ' ಮಾಡುವವರು ಬೆಲ್ಲ, ಗೋಧಿ ಹಿಟ್ಟು, ಹಿಡಿಮಣ್ಣು ಸೆಗಣಿ ಇತ್ಯಾದಿ ಸೇರಿಸಿ ಒಂಥರಾ ಕಷಾಯ ಮಾಡಿ ಇಟ್ಟುಕೊಳ್ಳಬೇಕೆಂದು ಬೋಧಿಸಿದ್ದ. ಉಳಿದವೆಲ್ಲ ಸರಿ ಆದರೆ ಬೆಂಗಳೂರಿನ ಯಾವ ಮಾಲ್‌ನಲ್ಲೂ ಸಿಗದ ಈ ಸೆಗಣಿಯನ್ನು ಎಲ್ಲಿಂದ ತರೋಣ? ಗೇಟ್ ಎದುರು ಮಟಮಟ ಮಧ್ಯಾಹ್ನದಲ್ಲಿ ಗಂಟೆ ಬಾರಿಸುತ್ತ ಆಗೀಗ ಬರುವ ತಳ್ಳುಗಾಡಿಯಲ್ಲೂ ಐಸ್‌ಕ್ಯಾಂಡಿ, ಬೋಟ-ಗೀಟ ಇರುತ್ತವೆ ವಿನಾ ಸೆಗಣಿ ಇಲ್ಲ. ಸೆಗಣಿ ಹಾಕುವ ದನಗಳು ಗೇಟ್ ಬಳಿ ಬಂದರೆ ನಮ್ಮ ಕಾಫಿ ಅಬ್ಬರಿಸಿ ದೂರ ಓಡಿಸಿಬಿಡುತ್ತಾಳೆ. ಸೆಗಣಿ ಎಲ್ಲಿ ದೊರಕೀತು? ಅದಕ್ಕೇ ಒಂದೆರಡು ಪ್ಲಾಸ್ಟಿಕ್ ಚೀಲಗಳನ್ನೂ ಮಡಚಿ ಕಿಸೆಯಲ್ಲಿ ಬಚ್ಚಿಟ್ಟುಕೊಂಡು ವಾಕಿಂಗ್ ಹೋಗುವುದು ರೂಢಿಯಾಗಿತ್ತು.



ಹಳ್ಳೀಮುಕ್ಕ ಎಲ್ಲೆಲ್ ಹೊಕ್ಕ
ಲೇಖಕ: ನಾಗೇಶ್ ಹೆಗಡೆ
ಪುಟ: 92, ಬೆಲೆ: 75 ರೂ.
ಪ್ರಕಾಶಕರು: ಭೂಮಿ ಬುಕ್ಸ್, 150, ಶೇಷಾದ್ರಿಪುರಂ ಮೊದಲ ಮುಖ್ಯ ರಸ್ತೆ ಬೆಂಗಳೂರು: 560020, ಫೋನ್: 080-23565885

ಬಯಲು ಪ್ರದೇಶದಿಂದ ಸೆಗಣಿಯನ್ನು ಬಾಚಿ ತರಲು ಸೂಕ್ಷ್ಮ ಗ್ರಹಿಕೆಯೊಂದೇ ಸಾಲದು, ಪಾರಂಪರಿಕ ಜ್ಞಾನವೂ ಬೇಕು. ಅದರಲ್ಲೂ ಜರ್ಸಿ, ಎಚ್ಚೆಫ್ ಅಥವಾ ಮಿಶ್ರತಳಿ ಹಸುಗಳ ಸೆಗಣಿ 'ಸುತರಾಂ ಕೂಡದು' ಎಂದು ಪಾಳೇಕರ್ ಹೇಳಿದ್ದರಿಂದ, ಅಪ್ಪಟ ದೇಸೀ ತಳಿಯ ಸೆಗಣಿಯನ್ನೇ ಹೆಕ್ಕಬೇಕು. ಅದೇನು ಸುಲಭದ ಮಾತೆ, ಎಲ್ಲಿದ್ದಾಳೆ ಅಪ್ಪಟ ಗೋಮಾತೆ? ಹಗಲುಹೊತ್ತಿನಲ್ಲೇ ಮನೆಯ ಛಾವಣಿ ಏರಿ ದುರ್ಬೀನ್ ಹಿಡಿದು, ಯಾವ ಗೋವು ಎಲ್ಲಿ ಮೇಯುತ್ತಿದೆ, ಅದು ಯಾವ ತಳಿಯದ್ದು ಎಂದೆಲ್ಲ ಲೆಕ್ಕ ಹಾಕಿಟ್ಟುಕೊಳ್ಳಬೇಕು. ಸಂಜೆ ವಾಕಿಂಗ್ ಹೋದಾಗ, ಹುಲ್ಲಿನ ನಡುವೆ ಅದನ್ನು ಹುಡುಕುವುದಾದರೂ ಬಣವೆಯಲ್ಲಿ ಸೂಜಿ ಹುಡುಕಿದಷ್ಟು ಕಾಳಜಿ ಇರಬೇಕು. ಅದು ತೀರಾ ತಾಜಾ ಇದ್ದರೆ ಬಾಚುವುದು ಕಷ್ಟ. ಒಣಗಿದ್ದರಂತೂ ಗೆದ್ದಲು ಹತ್ತಿ ಮಣ್ಣಿನ ಮುದ್ದೆ ಆಗಿರುತ್ತದೆ. ಇನ್ನು ಆ ಗೋಮಾತೆಗೆ ಅಜೀರ್ಣವಾಗಿದ್ದರಂತೂ ತೀರಿತು.

ಅಂತೂಇಂತೂ ಹುಡುಕಾಡಿ ಸೂಕ್ತವಾದದ್ದನ್ನು ಗುರುತಿಸಿ, ಅತ್ತಿತ್ತ ನೋಡಿ, ಯಾರೂ ನಮ್ಮನ್ನು ಹಿಂಬಾಲಿಸುತ್ತಿಲ್ಲ ಎಂಬುದನ್ನು ಖಾತ್ರಿ ಮಾಡಿಕೊಂಡು, ಮೆಲ್ಲಗೆ ಜೇಬಿನಿಂದ ಪ್ಲಾಸ್ಟಿಕ್ ಚೀಲ ತೆಗೆದು ಒಂದೆರಡು ಬೆರಣಿಯನ್ನು ಅದರಲ್ಲಿ ತುಂಬಿಕೊಂಡರೆ ಅಂದಿನ ಪಯಣ ಸಾರ್ಥಕ.

ಎಲ್ಲವೂ ಲೆಕ್ಕಾಚಾರದಂತೆ ನಡೆಯುತ್ತಿದ್ದಾಗ, ಒಂದು ದಿನ ನಮ್ಮ ಸೆಗಣಿ ಸಂಗ್ರಹಕ್ಕೆ ಕಲ್ಲು ಬಿತ್ತು. ಅಕ್ಷರಶಃ ಕಲ್ಲು ಬಿತ್ತು ಎನ್ನಿ. ಅದ್ಯಾವುದೋ ಫಲಭರಿತ ಹಲಸಿನ ಮರದ ಕೆಳಗೆ ನಮ್ಮ ಕಾಯಕ ನಡೆಸಿದ್ದೆವು. ಸೆಗಣಿ ಹೆಕ್ಕುತ್ತಿದ್ದ ನಮ್ಮನ್ನು ಹಲಸಿನ ಕಾಯಿ ಕದಿಯಲು ಬಂದ ಖದೀಮರೆಂದೇ ಭಾವಿಸಿ ದೂರದಿಂದಲೇ ಕಲ್ಲು ಬೀಸಿ, ಕೂಗಾಡುತ್ತ ಹೈದನೊಬ್ಬ ಓಡಿಬಂದ. ನಮ್ಮ ಕಾಯಕವನ್ನು ನೋಡಿ ಅವನಿಗೆ ಏನನ್ನಿಸಿತೊ ಗೊತ್ತಿಲ್ಲ, ನಮಗಂತೂ ಈಚಲಮರದ ಕೆಳಗೆ ಮಜ್ಜಿಗೆ ಹುಲ್ಲು ಕಡಿದಂತಾಯಿತು.

'ಇನ್ನು ಮೇಲೆ ಪಬ್ಲಿಕ್ ಸೆಗಣಿ ಸಂಗ್ರಹ ಬೇಡವೇ ಬೇಡ' -ಮನೆಯಾಕೆಯಿಂದ ತಡೆಯಾಜ್ಞೆ ಬಂತು. ಸೆಗಣಿಗೆ ಬೇಕಿದ್ದರೆ ದನ ಕಟ್ಟಿಕೊಳ್ಳೋಣ. ಸೆಗಣಿಯ ಜತೆ ಗಂಜಲಾನೂ ಸಿಗುತ್ತದೆ ಎಂದಳು ಈಕೆ.

ಕಾಫಿಯನ್ನು ಸಾಕಿಕೊಂಡಿದ್ದಕ್ಕೇ ನಮಗೆ ಕೆಲವೊಮ್ಮೆ ಸಾಕೋಬೇಕೋ ಎನ್ನಿಸಿತ್ತು. ನಾವಿಬ್ಬರೂ ಎಲ್ಲೋ ಸಿಟಿ ಕಡೆ ಪ್ರಯಾಣ ಹೋಗುವುದಾದರೆ ಹಿಂದಿನ ಸೀಟ್‌ನಲ್ಲಿ ಕಾಫಿಯೂ ವಿರಾಜಮಾನ ಆಗಿಬಿಡುತ್ತಿದ್ದಳು. ದನವನ್ನು ಸಾಕಿಕೊಂಡರೆ ಹಾಗೆಲ್ಲ ಕಾರಿನ ಹಿಂದೆ ಕೂರಿಸಿ ಒಯ್ಯುವಂತಿಲ್ಲ. ಮನೆಗೆ ಬೀಗ ಹಾಕಿ ದೂರ ಹೋಗುವಂತೆಯೂ ಇಲ್ಲ. 'ಕೋಳಿ ಸಾಕಿಕೊಳ್ಳಿ; ಸೆಗಣಿಗಿಂತ ಕೋಳಿ ಗೊಬ್ಬರ ಉತ್ತಮ' ಎಂದಿದ್ದರು ನಾಡೋಜ ಕೃಷಿಕ ನಾರಾಯಣ ರೆಡ್ಡಿ. ಅದನ್ನೇ ಮಾಡಿದರೆ ಹೇಗೆ? ಕೋಳಿ ಇದ್ದರೆ ಗೆದ್ದಲನ್ನೂ ತಿಂದು ಕಂಟ್ರೋಲ್ ಮಾಡ್ತವೆ ಎಂತಲೂ ಹೇಳಿದ್ದರು. ಸರಿ, ಪಾಳೇಕರ್‌ಗೆ ಗೊತ್ತಾಗದ ಹಾಗೆ, ಕೋಳಿ ಹಿಕ್ಕೆಯಲ್ಲೇ ಜೀವಾಮೃತ ತಯಾರಿಸೋಣ ಎಂದು ನಿರ್ಧರಿಸಿದೆವು.


ಕೋಳಿ ತಂದೆವು. ಅವಕ್ಕೆಂದು ಸಜ್ಜೆ ನವಣೆ, ಜೋಳ, ರಾಗಿ ಎಲ್ಲವನ್ನೂ ತಂದೆವು. ಆದರೆ ಅವಕ್ಕೆ ಕಾಳುಕಡ್ಡಿಗಿಂತ ಹುಳುಗಳು ಹೆಚ್ಚು ಪ್ರಿಯ. ರೇಶನ್ ಕಾರ್ಡ್ ಇದ್ದಿದ್ದರೆ ಕಾಳುಕಡ್ಡಿಯಲ್ಲೇ ಅವೂ ಸಿಗುತ್ತಿದ್ದುವೇನೊ. ನಮ್ಮ ಕೋಳಿಗಳಿಗೆ ಆ ಅದೃಷ್ಟವೂ ಇಲ್ಲ. ಅದಕ್ಕೇ ಅವು ತರಕಾರಿ ಸಸಿಗಳಿದ್ದಲ್ಲಿ ಹೋಗಿ ಮಣ್ಣು ಕೆದಕಿ ಗೆದ್ದಲನ್ನು ಹುಡುಕುತ್ತಿದ್ದವು. ಕ್ರಮೇಣ ಅವಕ್ಕೆಂದು ನಾವೇ ಗೆದ್ದಲು ಹುಡುಕುವ ಕಾಯಕ ಆರಂಭಿಸಿದೆವು. ಮೊದಮೊದಲು ಸನಿಕೆ ಹಿಡಿದು ಹುತ್ತಗಳನ್ನು ಒಡೆದು ಗೆದ್ದಲನ್ನು ಅವಕ್ಕೆ ತಿನ್ನಲು ಕೊಟ್ಟಿದ್ದೇ ತಪ್ಪಾಗಿತ್ತು. ಈಗ ನಾವು ಎಲ್ಲೇ ಪಾತಿ ಮಾಡಲೆಂದು ಸನಿಕೆ ಹಿಡಿದು ಹೊರಟರೂ ಅವು ಹಿಂದೆ ಹಿಂದೆ ಬರತೊಡಗಿದವು. ತೋಟದಲ್ಲಿ ಎಲ್ಲೇ ನೆಲಕ್ಕೆ ಸನಿಕೆ ಏಟು ಕೊಟ್ಟರೂ ಅಲ್ಲಿಗೇ ನುಗ್ಗಿ ಪೈಪೋಟಿಯಲ್ಲಿ ಈ ಕೋಳಿ ಗಳು ಕತ್ತು ಬಾಗಿಸಿ, ಹುಡುಕುತ್ತಿದ್ದವು. ತೋಟದಲ್ಲಿದ್ದ ಜೇಡ, ಚಿಟ್ಟೆಮೊಟ್ಟೆ, ಕಾಡು ಜಿರಳೆ, ಚೇಳಿನ ಮರಿ, ಹಾವಿನ ಮರಿ ಎಲ್ಲವನ್ನೂ ಸ್ವಾಹಾ ಮಾಡಿ ಮತ್ತೆ ಗೆದ್ದಲು ಬೇಕೆಂದು ನಮ್ಮನ್ನು ಪೀಡಿಸುತ್ತಿದ್ದವು.

ಸರಿ, ಕೋಳಿಗಳಿಗೆಂದು ಗೆದ್ದಲು ಸಾಕಿದರೆ ಹೇಗೆಂದು -ನನ್ನ ಶ್ರೀಮತಿ ಕೇಳಿದಳು. ಹೇಗೆ ಎಂಬ ಮಾಹಿತಿಗಾಗಿ ಇಂಟರ್‌ನೆಟ್‌ನಲ್ಲಿ ಹುಡುಕಿದೆವು. ಅಲ್ಲಿ ಗೆದ್ದಲನ್ನು ನಾಶ ಮಾಡುವ ನಾನಾಬಗೆಯ ವಿಷದ ಪುಡಿಗಳ ಬಗ್ಗೆ ಮಾಹಿತಿ ಇದ್ದುವೇ ವಿನಾ ಗೆದ್ದಲು ಸಾಕಣೆ ಹೇಗೆಂದು ಎಲ್ಲೂ ಬರೆದಿಲ್ಲ. ಅಕ್ಕಪಕ್ಕದ ಹಳ್ಳಿಯ ರೈತರನ್ನು ಕೇಳಿದ್ದಾಯಿತು. "ಐ ಅದ್ಯಾಕ್ರಾ? ಕಾಡಿಗೆ ಹೋದ್ರೆ ಎಷ್ಟೆಲ್ಲ ಹುತ್ತ ಇರ್ತವೆ, ಬೇಕಾದಷ್ಟು ತಗಂಡ್‌ಬನ್ನಿ' ಎಂದರು. ಆದರೆ ಸೆಗಣಿ ಹೆಕ್ಕಲು ಹೋದಾಗಿನ ಪ್ರಕರಣವನ್ನು ನಾವು ಮರೆತಿರಲಿಲ್ಲ. ಇನ್ನು ಹಾರೆ ಗುದ್ದಲಿ ಹಿಡಿದು ಅತ್ತ ಹೋದರೆ ತೀರಿತು.

ಕೆಲವು ವರ್ಷಗಳ ಹಿಂದೆ ಉತ್ತರ ಕನ್ನಡ ಜಿಲ್ಲೆಯ ಪರಿಚಿತ ಕೃಷಿಕರೊಬ್ಬರು ಗೆದ್ದಲು ಹಿಡಿದಿದ್ದ ಅರ್ಧ ಕಿಲೊ ಕರೆನ್ಸಿ ನೋಟುಗಳನ್ನು ತಂದು ಬೆಂಗಳೂರಿನ ನಮ್ಮ ಡೈನಿಂಗ್ ಟೇಬಲ್ ಮೇಲೆ ಸುರಿದಿದ್ದರು. ನೋಟುಗಳ ತುಂಬ ಗೆದ್ದಲು ರಂಧ್ರಗಳೇ ತುಂಬಿದ್ದವು. ಅವರ ಮನೆತನದ ಹಿರಿಯರೊಬ್ಬರು ನೂರು ರೂಪಾಯಿಗಳ ನೂರಾರು ನೋಟುಗಳನ್ನು ಒಂದು ಮಡಕೆಯಲ್ಲಿ ತುಂಬಿ ಕೊಟ್ಟಿಗೆಯ ಹಿಂಭಾಗದಲ್ಲಿ ಹೂತಿಟ್ಟಿದ್ದರಂತೆ. ಕೊಟ್ಟಿಗೆಯ ವಿಸ್ತರಣೆಗೆಂದು ನೆಲ ಅಗೆಯುತ್ತಿದ್ದಾಗ ಮಡಕೆ ಸಿಕ್ಕಿತಂತೆ; ಚಿನ್ನಾಭರಣ ಏನಾದರೂ ಇದ್ದೀತೆಂದು ಕಾತರದಿಂದ ಮಣ್ಣಿನ ಮುಚ್ಚಳವನ್ನು ತೆರೆದು ನೋಡಿದಾಗ ಅದರಲ್ಲಿ ಇಷ್ಟೆಲ್ಲ ಚಿಂದಿ ನೋಟುಗಳೂ ಸಿಕ್ಕಿದ್ದವು. ರಿಸರ್ವ್ ಬ್ಯಾಂಕ್‌ಗೆ ಕೊಟ್ಟರೆ ಏನಾದರೂ ಪರಿಹಾರ ಸಿಕ್ಕೀತೆ ಎಂದು ವಿಚಾರಿಸಲೆಂದು ಅವರು ಬಂದಿದ್ದರು. ನೋಟುಗಳೇನೊ ಸಾಚಾ ಇದ್ದವು. ಅವುಗಳ ಮೇಲಿನ ವಾಟರ್‌ಮಾರ್ಕ್ ನೋಡಲೆಂದು ಎತ್ತಿದರೆ ಆಚೆ ಕೂತವನ ಮುಖವೇ ಕಾಣುವಂತಿತ್ತು, ನೋಟಿನ ಮೇಲಿನ ಕ್ರಮಸಂಖ್ಯೆಗಳ ಮೇಲೂ ರಂಧ್ರಗಳಿದ್ದುದರಿಂದ ನೂರಕ್ಕೆ 99ರಷ್ಟು ನೋಟುಗಳು ಹಾಳಾಗಿದ್ದವು. ತೂಕಕ್ಕೆ ಹಾಕುವಂತೆಯೂ ಇರಲಿಲ್ಲ. 'ಬೇಜಾರು ಮಾಡ್ಕೊಬೇಡಿ, ಇದರ ಬದಲಿಗೆ ಹೊಸ ನೋಟುಗಳು ಸಿಗೋದು ಕಷ್ಟ. ಸಿಕ್ಕರೂ ಅಷ್ಟೊಂದು ಹಣಕ್ಕೆ ಈಗಿನ ದಿನಗಳಲ್ಲಿ ಬೈಸಿಕಲ್ಲೂ ಬರೋದಿಲ್ಲ' ಎಂದು ಸಮಾಧಾನ ಮಾಡಿ ಕಳಿಸಿದ್ದೆವು.

ಅರೆ! ನಾವೂ ಒಂದಿಷ್ಟು ನೋಟುಗಳನ್ನು ಮಡಕೆಯಲ್ಲಿಟ್ಟು ಹೂತಿಟ್ಟರೆ ಹೇಗೆ? ಹೊಸ ಐಡಿಯಾವನ್ನು ಶ್ರೀಮತಿಗೆ ಹೇಳಿದೆ. ಅವಳು ರೇಗಿದಳು: 'ಸರಿ ಹೋಯ್ತು! ನಿಮಗೆ ಸಿಗುವ ಪಿಂಚಣಿ ಹಣದ... ಕೋಳಿಗೆ ಕಾಳು ತರೋಕೂ ಆಗ್ತಾ ಇಲ್ಲ. ಬೇಕಿದ್ದ... ನೋಟಿನ ಬದಲು ಹತ್ತಾರು ಸಾವಿರ ರೂಪಾಯಿ ಚೆ... ಬರೆದು ಕ್ರಾಸ್ ಮಾಡಿ ಮಡಕೆಯಲ್ಲಿ ಇಡಿ' ಎಂದಳು.

ಅಷ್ಟು ಹೇಳುತ್ತಲೇ ಅವಳಿಗೇ ಮತ್ತೊಂಥದ್ದೋ ನೆನಪು ಬಂತು. 'ಗೆದ್ದಲು ಸಾಕೋಕೆ ನಿಜಕ್ಕೂ ಮಡಕೆ ವಿಧಾನ ಅಂತ ಒಂದಿದೆ. ನಿಮ್ಮ ಹಳೇ ಕೃಷಿಪತ್ರಿಕೆಯ ಕಂ... ತೆಗೀರಿ ತೋರಿಸ್ತೇನೆ' ಎಂದಳು. ಅದರಲ್ಲೇನಿರುತ್ತದೆ, ... ಪತ್ರಿಕೆಗಳನ್ನು ಆಗಲೇ ಗೆದ್ದಲುಗಳೇ ತಿಂದು ಹಾಕಿರಬಹುದು ಎಂದು ನಾನು ಗೊಣಗಿದರೂ ಹ... ಬಿಡಲಿಲ್ಲ. ಕೊನೆಗೂ ಏಣಿ ತಂದು, ಅಟ್ಟಣಿಗೆ ಏ... ಹಳೇ ಪತ್ರಿಕೆಗಳ ಕಂತೆಗಳನ್ನು ಇಳಿಸಿ ಹುಡುಕಿದರೆ ಅದ... ಸಿಕ್ಕೇ ಬಿಡ್ತು, 'ಗೆದ್ದಲು ಸಾಕಣೆ ವಿಧಿವಿಧಾನ'.



'ತೂತಾದ ಮಡಕೆಯನ್ನು ನೆಲದಲ್ಲಿ ಹೂಳಬೇಕು. ಅದಕ್ಕೆ ನಾಲ್ಕಾರು ಚೂರು ಹಳೇ ಕಟ್ಟಿಗೆ ಇಲ್ಲವೆ ಪ್ಲೈವುಡ್ ಚೂರುಪಾರು, ವೇಸ್ಟ್‌ಪೇಪರ್ ಹಾಕಬೇಕು. ಒಂದಿಷ್ಟು ಸೆಗಣಿ ಹಾಕಿ ನೀರು ಚಿಮುಕಿಸಿ ನಾಲ್ಕು ದಿನ ಇಡಬೇಕು. ಸೆಗಣಿ ತೀರಾ ಮುಖ್ಯ' ಎಂದು ಅದರಲ್ಲಿ ಬರೆದಿತ್ತು!

ಸೆಗಣಿಯಿಂದಾಗಿಯೇ ಆರಂಭವಾದ ಈ ಡಂಗುರ... ಕೊನೆಗೆ ಸೆಗಣಿಯವರೆಗೇ ನಮ್ಮನ್ನು ಎಳೆದು ತಂದಿತ್ತು. ಈಗ 'ಸಿಂಥೆಟಿಕ್ ಸೆಗಣಿ'ಗಾಗಿ ಇಂಟರ್‌ನೆಟ್‌ನಲ್ಲಿ ಹುಡುಕಬೇಕೆಂದು ನನ್ನಾಕೆ ಆಜ್ಞೆ ಮಾಡಿದ್ದಾಳೆ.

ಸೂಚನೆ: ಅಂಕಣಕಾರ ಶಿವಸುಂದರ್ ಅವರು ಮಲೆನಾಡು ಪ್ರದೇಶಗಳಲ್ಲಿ ಜನರ ಬದುಕಿನ ಸ್ಥಿತಿಗತಿಗಳನ್ನು 'ಸ್ಟಡಿ' ಮಾಡಲು ತಮ್ಮ ಹಲವಾರು ಮಿತ್ರರೊಂದಿಗೆ ಆ ಪ್ರದೇಶಗಳಲ್ಲಿ ಸುತ್ತಾಡುತ್ತಿರುವುದರಿಂದ ಮತ್ತು ಅಲ್ಲಿ ಇಂಟರ್‌ನೆಟ್ ಹಾಗು ಕಂಪ್ಯೂಟರ್ ಸೌಲಭ್ಯಗಳು ಇಲ್ಲವಾದ್ದರಿಂದ ಈ ವಾರ ಅವರ 'ಚಾರ್ವಾಕ' ಅಂಕಣ ಪ್ರಕಟವಾಗುತ್ತಿಲ್ಲ. ಮುಂದಿನವಾರದಿಂದ ಎಂದಿನಂತೆ ಅವರ ಅಂಕಣ ಇರುತ್ತದೆ.


– ವ್ಯವಸ್ಥಾಪಕ

ರಸ್ತೆ ಅಪಘಾತ ಕುರಿತು ಒಂದು ಕತೆ

ಕಂಡಹಾಗೆ



• ಗೌರಿ ಲಂಕೇಶ್



ಪ್ರತಿನಿತ್ಯ ನಾವು ಪತ್ರಿಕೆಗಳಲ್ಲಿ ರಸ್ತೆ ಅಪಘಾತಗಳನ್ನು ...ಿತ ಸುದ್ದಿಗಳನ್ನು ಓದುತ್ತಿರುತ್ತೇವೆ. ಮದುವೆ ಮಂಟಪಕ್ಕೊ ...ದುವೆ ಮುಗಿಸಿಕೊಂಡೋ, ಪೂಜಾ ಸ್ಥಳಗಳಿಂದಲೋ, ...ಯಾದ ನಂತರವೋ ಹೋಗುತ್ತಿದ್ದ ಕಾರಿಗೋ, ಬಸ್ಸಿಗೋ, ...ಪೊಗೋ ಮತ್ತೊಂದು ವಾಹನ ಡಿಕ್ಕಿ ಹೊಡೆದು ...ತ್ತು, ಇಪ್ಪತ್ತು, ನಲವತ್ತು ಮಂದಿ ಸತ್ತರೆಂಬ ಸುದ್ದಿಯನ್ನು ...ಿದ ನಂತರ ನಾವೆಲ್ಲ ಒಮ್ಮೆ ಲೊಚಗುಟ್ಟಿ, ಪುಟವನ್ನು ...ವಿಹಾಕಿ ಆದರ ಬಗ್ಗೆ ಮರೆತೇ ಹೋಗುತ್ತೇವೆ. ಆದರೆ ...ತಹ ಅಪಘಾತದಲ್ಲಿ ಒಂದು ಜೀವ, ಅದು ಕಟ್ಟಿಕೊಂಡಿದ್ದ ...ಸು, ಬದುಕಲೆಂದು ಪಡುತ್ತಿದ್ದ ಕಷ್ಟ, ಭವಿಷ್ಯದ ಬಗ್ಗೆ ...ದ್ದ ಕಾತರ, ಎಲ್ಲವೂ ಆ ಅಪಘಾತದಲ್ಲಿ ನುಚ್ಚುನೂರಾದವು ...ಬ ಕಲ್ಪನೆಯೂ ನಮಗೆ ಬರುವುದಿಲ್ಲ. ಯಾಕೆಂದರೆ ...ಗೆ ಸತ್ತವರು ನಮಗೆ ಅಪರಿಚಿತರು. ಅವರೆಲ್ಲ ನಮಗೆ ...ಕೆಯ ವರಧಿಯಲ್ಲಿ ಪ್ರಕಟಗೊಂಡ ಅನಾಮಿಕ ಹೆಸರು ...ತ್ತು ಸಂಖ್ಯೆ ಮಾತ್ರ.

ಆದರೆ ಅಂತಹ ಅಪಘಾತದಲ್ಲಿ ಸತ್ತವರಲ್ಲಿ ನಮ್ಮ ...ಚಿತರಿದ್ದರೆ? ಹತ್ತಿರದವರಿದ್ದರೆ? ಹೆತ್ತವರಿದ್ದರೆ? ಗಂಡ, ...ಡತಿ, ಪ್ರಿಯತಮೆ, ಪ್ರಿಯಕರ... ಇದ್ದರೆ? ಆಗ ಆ ...ಪಘಾತವು ನಮಗೆ 'ಎಲ್ಲೋ, ಯಾವಾಗಲೋ' ...ಭವಿಸಿದ ಒಂದು ಘಟನೆಯಾಗಿ ಮಾತ್ರ ಉಳಿಯುವುದಿಲ್ಲ ...ದಲಾಗಿ ಅದು ನಮ್ಮ ಬದುಕನ್ನೇ ಛಿದ್ರಗೊಳಿಸುವ ...ದು ದಾರುಣ ದುರಂತವಾಗುತ್ತದೆ. ಅಂತಹ ಒಂದು ...ರಂತವನ್ನು 'ಎಲ್ಲೋ, ಯಾವಾಗಲೋ' (ENGE ...UM EPPODHUM) ಎಂಬ ತಮಿಳು ಸಿನಿಮಾ ...ಹಿಡಿದಿದೆ.

ಕಳೆದ ವರ್ಷ ಬಿಡುಗಡೆಗೊಂಡ ಈ ಚಿತ್ರ ...ಮಿಳುನಾಡಿನಲ್ಲಿ ಸೂಪರ್ ಹಿಟ್ ಆಯಿತು. ...ೂಪರ್‌ಸ್ಟಾರ್‌ಗಳಿಲ್ಲದ ಈ ಚಿತ್ರಕ್ಕೆ ಹೂಡಿದ್ದ ...ಂಡವಾಳ ಕೇವಲ ಐದು ಕೋಟಿ ...ೂಪಾಯಿಗಳು. ಆದರೆ ಇದು ಗಲ್ಲಾಪೆಟ್ಟಿಗೆಯಲ್ಲಿ ...ಸಿದ್ದು ಇಪ್ಪತ್ತು ಕೋಟಿ ರೂಪಾಯಿಗಳಿಗಿಂತಲೂ ...ಚ್ಚು. ಇದನ್ನು ಈಗಾಗಲೇ ತೆಲುಗು ಭಾಷೆಗೆ ...ಬ್ ಮಾಡಲಾಗಿದ್ದು ಆಂಧ್ರದಲ್ಲೂ ಸಾಕಷ್ಟು ...ಭ ಕಂಡಿದೆ. ಸದ್ಯದಲ್ಲೇ ಈ ಚಿತ್ರ ಹಿಂದಿಗೂ, ...ನ್ನಡಕ್ಕೂ ರೀಮೇಕ್ ಆಗಲಿದೆ. ಇದರ ಕತೆಯನ್ನು ...ರೆದು ನಿರ್ದೇಶಿಸಿರುವವರು ಎಂ. ಸರವನನ್. ...ಮು ಅವರ ಚೊಚ್ಚಲ ಸಿನಿಮಾ.


ಎರಡು ಬಸ್ಸುಗಳು ಹೈವೇಯಲ್ಲಿ ರಭಸವಾಗಿ ಪರಸ್ಪರ ...ಕ್ಕಿ ಹೊಡೆಯುವ ಅಪಘಾತದ ದೃಶ್ಯದಿಂದ ಪ್ರಾರಂಭ ...ಗುವ 'ಎಲ್ಲೋ, ಯಾವಾಗಲೋ' ಮೂಲಭೂತವಾಗಿ ...ಲ್ಲರೂ ಹುಷಾರಾಗಿ ವಾಹನಗಳನ್ನು ಚಲಿಸಬೇಕೆಂದು ...ಚ್ಚರಿಸುವ ಸಿನಿಮಾ. ಇಂತಹ ಒಂದು ನೀತಿಯನ್ನು ಬೋಧಿಸುವ ಚಿತ್ರವನ್ನು ತುಂಬಾ ಚೆನ್ನಾಗಿ ನಿರೂಪಿಸಲಾಗಿದೆ.

ಈ ಸಿನಿಮಾದಲ್ಲಿ ಎರಡು ಪ್ರೇಮಕತೆಗಳಿವೆ. ಮೊದಲನೆಯದು ಅಮುಧ ಮತ್ತು ಓರ್ವ ಯುವಕನ ನಡುವಿನದ್ದು. ಅಮುಧ ತಿರುಚ್ಚಿ ಎಂಬ ಚಿಕ್ಕಪಟ್ಟಣದಲ್ಲಿ ಬೆಳೆದಿರುವ, ಎಂಜಿನಿಯರಿಂಗ್ ಓದಿರುವ ಯುವತಿ. ಆಕೆ ಎಂಜಿನಿಯರಿಂಗ್ ಹುದ್ದೆಗೆ ಇಂಟರ್‌ವ್ಯೂ ಎದುರಿಸಲು ಚೆನ್ನೈಗೆ ಬರುತ್ತಾಳೆ. ತಿರುಚ್ಚಿ ತರಹದ ಸಣ್ಣಪಟ್ಟಣದ ಆಕೆಗೆ ಚೆನ್ನೈ ಅಪರಿಚಿತ ನಗರ. ಅಲ್ಲಿ ಎಲ್ಲರೂ ಆಕೆಗೆ ಸಂಶಯಾಸ್ಪದರಾಗಿ ಕಾಣಿಸುತ್ತಾರೆ. ಎತ್ತ ಹೋಗಲೂ ಹೆದರಿಕೆ. ಯಾರನ್ನು ನಂಬಲೂ ಹಿಂಜರಿಕೆ.

ಬಸ್‌ಸ್ಟಾಂಡಿನಿಂದ ತನ್ನನ್ನು ಇಂಟರ್‌ವ್ಯೂ ಸ್ಥಳಕ್ಕೆ ಕರೆದುಕೊಂಡು ಹೋಗಲು ವಿಧಿ ಇಲ್ಲದೆ ಅಪರಿಚಿತ ಯುವಕನನ್ನು ವಿನಂತಿಸಿಕೊಳ್ಳುತ್ತಾಳೆ. ಆತ ಮನಸ್ಸಿಲ್ಲದ ಮನಸ್ಸಿನಿಂದಲೇ ಒಪ್ಪುತ್ತಾನೆ. ಯುವಕನ ಸಹಾಯದಿಂದಲೇ ಅಮುಧಳಿಗೆ ಇಂಟರ್‌ವ್ಯೂ ಕೊಡಲು ಸಾಧ್ಯವಾಗುತ್ತದೆ. ಇಡೀ ದಿನವನ್ನು ಆತನೊಂದಿಗೆ ಕಳೆಯುತ್ತಾಳೆ, ಸಂಜೆ ಹೊತ್ತಿಗೆ ಸುರಕ್ಷಿತವಾಗಿ ತನ್ನ ಅಕ್ಕನ ಮನೆಯನ್ನು ಸೇರುತ್ತಾಳೆ. ಆದರೆ ಆ ಯುವಕನನ್ನು ಸಂಪೂರ್ಣವಾಗಿ ನಂಬಲಾಗದೆ ಅಮುಧ ಆತನ ಹೆಸರನ್ನಾಗಲಿ, ಇತರೆ ವಿವರಗಳನ್ನಾಗಲಿ ಕೇಳುವುದಿಲ್ಲ, ಹಾಗೆಯೇ ತನ್ನ ಹೆಸರನ್ನಲ್ಲದೆ ಬೇರೆ ಯಾವ ಮಾಹಿತಿಯನ್ನೂ ಅವನಿಗೆ ಕೊಡುವುದಿಲ್ಲ. ಆತ ಗೋಲ್ಡ್ ಫ್ಲೇಕ್ ಸಿಗರೇಟ್ ಸೇದುತ್ತಾನೆಂಬುದು ಮಾತ್ರ ಆಕೆಗೆ ಗೊತ್ತು!

ಬೆಳಗ್ಗೆ ಬಸ್‌ಸ್ಟಾಂಡ್‌ನಲ್ಲಿ ಪ್ರಾರಂಭವಾಗುವ ಅವರ ಪರಿಚಯ ಸಂಜೆಯ ಹೊತ್ತಿಗೆ ಬೇರೆಯದೇ ಆಯಾಮವನ್ನು ಪಡೆದಿರುತ್ತದೆ. ಆ ಯುವಕನ ಸಹಾಯ ಪ್ರವೃತ್ತಿ ಆಕೆಗೆ ಇಷ್ಟವಾದರೆ, ಅಮುಧಾಳ ಮುಗ್ಧತೆ ಆತನಿಗೆ ಹಿತವೆನಿಸುತ್ತದೆ. ಆತ ಹೊರಟುಹೋದ ನಂತರ ಆತ ಒಳ್ಳೆಯ ಹುಡುಗ ಎಂದೂ, ತಾನು ಆತನನ್ನು ಪ್ರೀತಿಸುತ್ತಿದ್ದೇನೆ ಎಂದೂ ಅಮುಧಳಿಗೆ ಅರ್ಥವಾಗುತ್ತದೆ. ಆತನಿಗೂ ಅಷ್ಟೆ. ಆದರೆ ಪರಸ್ಪರರನ್ನು ಹುಡುಕುವುದು ಎಲ್ಲಿ? ಹೇಗೆ?

ಇನ್ನೊಂದು ಪ್ರೇಮಕತೆ ತಿರುಚ್ಚಿ ನಗರದ ನಿವಾಸಿಗಳಾದ ಕದಿರೇಸ ಮತ್ತು ಮಣಿ ಎಂಬಿಬ್ಬರ ನಡುವಿನದ್ದು. ತಿರುಚ್ಚಿ ಹತ್ತಿರದ ಹಳ್ಳಿಯವನಾದ ಕದಿರೇಸ ನಮ್ಮ ಗ್ರಾಮೀಣ ಯುವಕರ ಸರಳತೆ, ಮುಗ್ಧತೆ ಮತ್ತು ಅಮಾಯಕತೆಗೆ ಸಂಕೇತ. ಆತ ಪ್ರೀತಿಸುವ ಮಣಿ ನಮ್ಮ ಸಣ್ಣಪುಟ್ಟ ಊರುಗಳಲ್ಲಿ ಕೆಲಸ ಮಾಡುತ್ತಾ, ಬದುಕನ್ನು ಕಟ್ಟಿಕೊಳ್ಳುತ್ತಾ ತಮ್ಮತನವನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಿರುವ ಎಲ್ಲ ದಿಟ್ಟ ಯುವತಿಯರ ಪ್ರತೀಕ. ಇವರಿಬ್ಬರ ಪ್ರೇಮಕಥನವು ಮನಮುಟ್ಟುವಂತೆ ಮೂಡಿಬಂದಿದೆ.



ಅಪಘಾತ ಸಂಭವಿಸುವ ದಿನ ಅಮುಧ ತನ್ನ ಪ್ರೀತಿಯ ಯುವಕನನ್ನು ಹುಡುಕಿಕೊಂಡು ಚೆನ್ನೈಗೆ ಹೋಗಿದ್ದಾಳೆ. ಆತ ಸಿಗದಿರುವುದರಿಂದ ನಿರಾಶಳಾಗಿ ತಿರುಚ್ಚಿಗೆ ಹೋಗುವ ಬಸ್ ಹತ್ತುತ್ತಾಳೆ. ಅದೇದಿನ ಆಕೆಯನ್ನು ಹುಡುಕಿಕೊಂಡು ಆ ಯುವಕ ತಿರುಚ್ಚಿಗೆ ಹೋಗಿರುತ್ತಾನೆ. ಅಲ್ಲಿ ಆಕೆ ಸಿಗದೆ ಆತನಿಗೂ ನಿರಾಶೆಯಾಗಿ ಆತ ಚೆನ್ನೈಗೆ ಹೋಗುವ ಬಸ್ ಹತ್ತುತ್ತಾನೆ.

ವಿಲ್ಲಾಪುರಂ ಹತ್ತಿರದಲ್ಲಿರುವ ಹಳ್ಳಿಯಲ್ಲಿ ವಾಸಿಸುತ್ತಿರುವ ತನ್ನ ತಂದೆತಾಯಂದಿರಿಗೆ ತನ್ನ ಭಾವಿ ಪತ್ನಿಯನ್ನು ಪರಿಚಯಿಸಲು ಕದಿರೇಸ ಮಣಿಯೊಂದಿಗೆ ಹೊರಡುತ್ತಾನೆ. ಅವರಿಬ್ಬರು ತಿರುಚ್ಚಿಯಿಂದ ಚೆನ್ನೈಗೆ ಹೋಗುವ ಬಸ್‌ಅನ್ನು ಹತ್ತುತ್ತಾರೆ.

ಅಮುಧ ಹತ್ತಿರುವ ಬಸ್ಸಿನಲ್ಲಿ ಒಬ್ಬ ತಂದೆ ಇದ್ದಾನೆ. ತನ್ನ ಮಗಳು ಇನ್ನೂ ತನ್ನ ಪತ್ನಿಯ ಗರ್ಭದಲ್ಲಿರುವಾಗಲೇ ದುಡಿಮೆ ಮಾಡಲು ಆ ತಂದೆ ದೂರದ ದೇಶಕ್ಕೆ ಹೋಗಿರುತ್ತಾನೆ. ಕೆಲಸ, ದುಡಿಮೆ ಎಂದೆಲ್ಲಾ ಆತ ಅಲ್ಲೇ ಐದು ವರ್ಷಗಳನ್ನು ಕಳೆದಿರುತ್ತಾನೆ. ಕೊನೆಗೂ ತನ್ನ ಐದು ವರ್ಷದ ಮಗಳನ್ನು ಕಣ್ಣಾರೆ ನೋಡಬೇಕೆಂದು ಆತ ತನ್ನ ಕೆಲಸವನ್ನು ತೊರೆದು ತನ್ನ ಊರಿಗೆ ಮರಳುತ್ತಿದ್ದಾನೆ. ಆತನ ಮೊಬೈಲಿಗೆ ಪದೇಪದೇ ಫೋನ್ ಮಾಡುವ ಅವನ ಮಗಳು "ನಿಜವಾಗಲೂ ನೀನು ಮನೆಗೆ ಬರುತ್ತಿದ್ದಿಯಲ್ಲಪ್ಪಾ?" ಎಂದು ಕೇಳುತ್ತಿರುತ್ತಾಳೆ.

ಅದೇ ಬಸ್ಸಿನಲ್ಲಿ ಹೊಸದಾಗಿ ಮದುವೆಯಾಗಿರುವ ದಂಪತಿಗಳಿದ್ದಾರೆ. ತನ್ನ ತವರಿಗೆ ಹೋಗುತ್ತಿರುವ ಹೆಂಡತಿಯನ್ನು ಕಳುಹಿಸಲು ಆತನಿಗೆ ಮನಸ್ಸು ಬರುತ್ತಿಲ್ಲ. ಪದೇಪದೇ ಬಸ್ ಹತ್ತಿ ಇಳಿಯುತ್ತಿರುತ್ತಾನೆ. ಕೊನೆಗೆ "ಒಂದಿಷ್ಟು ದೂರ ನಿನ್ನ ಜೊತೆ ಬಂದು ವಾಪಸ್ ಹೋಗುತ್ತೇನೆ" ಎನ್ನುತ್ತಾನೆ.

ಹೀಗೆ ಎರಡೂ ಬಸ್‌ಗಳಲ್ಲಿ ನಮ್ಮ ಸುತ್ತಲೂ ಪ್ರತಿದಿನ ಕಾಣಿಸುವಂತಹ ಜನರೇ ಇದ್ದಾರೆ. ನಿದ್ರಿಸುತ್ತಿರುವ ಅಮ್ಮನನ್ನು ಎಚ್ಚರಿಸುತ್ತಿರುವ ಪುಟಾಣಿ, ಸುಂದರವಾದ ಯುವತಿಯನ್ನು ಪಟಾವ್ ಮಾಡಲು ಯತ್ನಿಸುತ್ತಿರುವ ಯುವಕ, ಮನೆಗೆ ಹಿಂದಿರುಗಿದ ಕೂಡಲೇ ತನ್ನ ಗಂಡ ಮತ್ತು ಮಕ್ಕಳಿಗೆ ಅಡುಗೆ ಮಾಡಿ ಬಡಿಸುವ ಬಗ್ಗೆ ಯೋಚಿಸುತ್ತಿರುವ ಗೃಹಿಣಿ, ಫುಟ್‌ಬಾಲ್ ಪಂದ್ಯದಲ್ಲಿ ಗೆದ್ದು ಸಂಭ್ರಮಿಸುತ್ತಿರುವ ಯುವತಿಯರ ತಂಡ.... ಇತ್ಯಾದಿ.

ಇವರೆಲ್ಲರೂ ಇರುವ ಎರಡೂ ಬಸ್‌ಗಳು ಹೈವೇಯಲ್ಲಿ ಪರಸ್ಪರ ಡಿಕ್ಕಿ ಹೊಡೆಯುತ್ತವೆ. ಸ್ವಲ್ಪ ದೂರ ಹೆಂಡತಿಯೊಂದಿಗೆ ಬಂದು ವಾಪಸಾಗಲು ಉದ್ದೇಶಿಸಿದ್ದ ಪತಿ ಈ ಲೋಕದಿಂದಲೇ ಹೊರಟುಹೋಗುತ್ತಾನೆ. ತನ್ನ ಮಗಳನ್ನು ನೋಡಲು ಮನೆಗೆ ಹೊರಟಿರುವ ಅಪ್ಪ ಮಗಳ ಕರೆಯನ್ನು ಸ್ವೀಕರಿಸದಂತಾಗುತ್ತಾನೆ. ಫುಟ್‌ಬಾಲ್ ಆಟಗಾರ್ತಿಯರ ಕೈಕಾಲುಗಳು ತುಂಡರಿಸಿಹೋಗುತ್ತವೆ. ಮಗಳು ಎಷ್ಟೇ ಕರೆದರೂ ಎಂದೂ ಎಚ್ಚರವಾಗದ ಸ್ಥಿತಿ ತಾಯಿಯದ್ದಾಗುತ್ತದೆ....

ಮಣಿ ಅದೃಷ್ಟವಶಾತ್ ಪಾರಾಗುತ್ತಾಳೆ. ವೃತ್ತಿಯಲ್ಲಿ ನರ್ಸ್ ಆದ ಆಕೆ ಅಪಘಾತದಲ್ಲಿ ಗಾಯಗೊಂಡವರ ನೆರವಿಗೆ ನಿಲ್ಲುತ್ತಾಳೆ. ಆದರೆ ಆಕೆಯ ಪ್ರೀತಿಯ ಕದಿರೇಸನ ತಲೆಗೆ ಗಾಯವಾಗಿ ಆತ ಮರಣ ಹೊಂದುತ್ತಾನೆ. ಕದಿರೇಸನ ಸಾವಿನೊಂದಿಗೆ ಮಣಿಯ ಕನಸುಗಳೂ ಛಿದ್ರಗೊಳ್ಳುತ್ತವೆ. ಆದರೆ ಅಂತಹ ಸ್ಥಿತಿಯಲ್ಲೂ ಆಕೆ ಕದಿರೇಸನ ಕಣ್ಣು, ಹೃದಯ ಮತ್ತು ಇತರೆ ಅಂಗಗಳನ್ನು ದಾನ ಮಾಡುತ್ತಾಳೆ.

ಅದೇ ಅಪಘಾತದಲ್ಲಿ ಅಮುಧ ಕೂಡ ತೀವ್ರವಾಗಿ ಗಾಯಗೊಳ್ಳುತ್ತಾಳೆ. ಆ ಸ್ಥಿತಿಯಲ್ಲೇ ಆಕೆಗಾಗಿ ಹುಡುಕುತ್ತಿದ್ದ ಆ ಯುವಕನ ಕಣ್ಣಿಗೆ ಬೀಳುತ್ತಾಳೆ. ಆಕೆಯನ್ನು ಐಸಿಯುಗೆ ಸೇರಿಸಲಾಗುತ್ತದೆ. ಆದರೆ ಆ ಸ್ಥಿತಿಯಲ್ಲೂ ತನ್ನ ಪ್ರಿಯತಮ ತನಗೆ ಸಿಕ್ಕಿರುವುದು ಅವಳ ಅರಿವಿಗೆ ಬರುತ್ತಿದೆ. ಇವರಿಬ್ಬರ ಪ್ರೇಮ ಪ್ರಕರಣ ಸುಖಾಂತ್ಯ ಕಾಣುವುದರ ಜೊತೆಗೆ ಸಿನಿಮಾ ಆಶಾಭಾವನೆಯೊಂದಿಗೆ ಅಂತ್ಯಗೊಳ್ಳುತ್ತದೆ.

ಕೊನೆಯದಾಗಿ ಅಪಘಾತ ಸಂಭವಿಸಿದ ಸ್ಥಳದಲ್ಲಿ 'ಆಕ್ಸಿಡೆಂಟ್ ಜೋನ್. ಹುಷಾರಾಗಿ ಚಲಿಸಿ' ಎಂಬ ಬೋರ್ಡ್ ಪ್ರತ್ಯಕ್ಷವಾಗುತ್ತದೆ. ಬ್ಯಾಕ್‌ಗ್ರೌಂಡಿನಲ್ಲಿ "ಮಕ್ಕಳು ಕಾರಿನಲ್ಲಿರುವಾಗ ಇಷ್ಟು ಸ್ಪೀಡಾಗಿ ಹೋಗಬೇಡಿ" ಎಂದು ಮಹಿಳೆಯೊಬ್ಬಳು, "ಕುಡಿದಾಗ ಗಾಡಿ ಓಡಿಸುವುದು ಬೇಡ ಕಣೋ" ಎಂಬ ಮಿತ್ರನೊಬ್ಬನು, "ಡ್ರೈವ್ ಮಾಡುತ್ತಿರುವಾಗ ಮೊಬೈಲ್‌ನಲ್ಲಿ ಯಾಕೆ ಮಾತನಾಡುತ್ತಿದ್ದೀಯ" ಎಂದು ಯುವತಿಯೊಬ್ಬಳು ಎಚ್ಚರಿಸುತ್ತಿರುವ ಮಾತುಗಳು ಕೇಳಿಬರುತ್ತವೆ.

'ಎಲ್ಲೋ, ಯಾವಾಗಲೋ' ಸಂಭವಿಸಿದ ಅಪಘಾತದಲ್ಲಿ ಯಾರೋ ಸಾಯಬಹುದು. ಆದರೆ ಹಲವೊಮ್ಮೆ ನಮ್ಮವರನ್ನೋ, ನಮ್ಮನ್ನೋ ಕೂಡ ಬಲಿ ತೆಗೆದುಕೊಳ್ಳಬಹುದು. ಈ ಸಿನಿಮಾ ನೋಡಿದ ನಂತರ ರಸ್ತೆ ಮೇಲೆ ವಹಿಸಬೇಕಾದ ಎಚ್ಚರಿಕೆಯ ಅರಿವಾಗುತ್ತದೆ. ಹಾಗೆಯೇ ಬದುಕೆಂಬ ಸುಂದರ ಪ್ರಕ್ರಿಯೆಯ ಬಗ್ಗೆ ಮತ್ತೊಮ್ಮೆ ಭರವಸೆ ಮೂಡುತ್ತದೆ... ❖




...ಬರದ ಗೋಜು - ಈಶ್ವರಪ್ಪನಿಗೆ ಮೋಜು

ಅಜ್ಜಿಗೆ ಅರಿವೆ ಚಿಂತೆ ಆದ್ರೆ ಮೊಮ್ಮಗಳಿಗೆ ಮಿಂ...ನ ಚಿಂತೆ ಅಂತೆ. ...ಮ್ಮ ಹಿರೀಕರು ಮಾಡಿರೋ ಈ ಗಾದೆ ಮಾತು ಬಿಜೆಪಿ ಸರ್ಕಾರಕ್ಕೆ ...ರಿಯಾಗಿ ಒಪ್ಪುತ್ತದೆ. ಬಿಜೆಪಿ ರಾಜ್ಯಾಧ್ಯಕ್ಷ ಈಶ್ವರಪ್ಪನಂತೂ ಆ ಗಾದೆ ...ಮಾತನ್ನು ನಿಜ ಮಾಡಿಯೇ ಸಿದ್ಧ ಅಂತ ಶಪಥ ಮಾಡಿದಂತಿದೆ.

ಕರ್ನಾಟಕದ ಜನ, ಮುಖ್ಯವಾಗಿ ರೈತರು ತೀವ್ರ ಬರಗಾಲದಿಂದ ...ತ್ತರಿಸುತ್ತಿದ್ದಾರೆ, ಕುಡಿಯುವ ನೀರಿಗೆ ಎಲ್ಲೆಡೆ ಹಾಹಾಕಾರ ಎದ್ದಿರುವ ದೃಶ್ಯ ...ಮಾಮೂಲಿಯಾಗಿಬಿಟ್ಟಿದೆ. ಮೇವಿಲ್ಲದೆ ಜಾನುವಾರುಗಳ ಸ್ಥಿತಿಯಂತೂ ...ಶೋಚನೀಯವಾಗಿದೆ. ಇಂಥಾ ದಾರುಣ ಸನ್ನಿವೇಶದಲ್ಲಿ ಆಡಳಿತ ಪಕ್ಷದ ...ಅಧ್ಯಕ್ಷನಂತಹ ಜವಾಬ್ದಾರಿಯುತ ಸ್ಥಾನದಲ್ಲಿರುವ ಈಶ್ವರಪ್ಪ ಜುಮ್ಮಂತಾ ...ಫಾರಿನ್ ಟೂರ್ ಹೋಗಿದ್ದಾರೆ ಎಂದರೆ ಏನು ಹೇಳಬೇಕು?

ಕಳೆದ ತಿಂಗಳು ಸಚಿವ ಶಾಸಕರನ್ನು ದಂಡು ಕಟ್ಟಿಕೊಂಡು ತೆರಿಗೆದಾರನ ...ದುಡ್ಡಿನಲ್ಲಿ 18 ದಿನಗಳ ಯೂರೋಪ್ ಟೂರ್ ಹೊರಟುಬಿಟ್ಟಿದ್ದರು. ...ಬರದಿಂದ ಬಸವಳಿದ ಜನತೆ ಛೀ..! ಥೂ..! ಅಂತ ಉಗುಳಿ ಉಪ್ಪುಹಾಕಿದ ...ನಂತರ ಆ ಪ್ರವಾಸವನ್ನು ಜೂನ್-ಜುಲೈ ತಿಂಗಳಿಗೆ ಮುಂದೂಡಿದರು. ಹಾಗಿದ್ದರೂ ಸಮಾಜ ಕಲ್ಯಾಣಕ್ಕೆ ಎಂದು ನೇಮಕವಾಗಿರುವ ಮಂತ್ರಿ ನಾರಾಯಣಸ್ವಾಮಿ ಅಮೆರಿಕಾಕ್ಕೆ ಹಾರಿಯೇಬಿಟ್ಟ. ಮುಂದೆ ಎದುರಾಗಬಹುದಾದ ಟೀಕೆಗಳಿಗೆ ಅಂಜಿದ ಸಿಎಂ ಸದಾನಂದ ತುರ್ತಾಗಿ ಆತನನ್ನು ವಾಪಸ್ ಕರೆಸಿಕೊಂಡಿದ್ದರು. ಅಷ್ಟೇ ಅಲ್ಲ, "ಇನ್ನೂ ಎರಡು ತಿಂಗಳ ಕಾಲ ಅಧಿಕಾರಿಗಳಾಗಲಿ, ಶಾಸಕ-ಸಚಿವರಾಗಲಿ ಯಾವುದೇ ವಿದೇಶ ಪ್ರವಾಸ ಕೈಗೊಳ್ಳಬಾರದು. ಬದಲಿಗೆ ಬರ ಪರಿಹಾರ ಕಾಮಗಾರಿಯ ಅನುಷ್ಠಾನದಲ್ಲಿ ತೊಡಗಿಸಿಕೊಳ್ಳಬೇಕು" ಎಂದು ಸಿಎಂ ಡಿವಿ ಅಧಿಕೃತ ಆದೇಶ ಹೊರಡಿಸಿ, ಹಲವರಿಂದ ಚಪ್ಪಾಳೆಯನ್ನೂ ಗಿಟ್ಟಿಸಿದರು.

ಆದರೆ ಬಿಜೆಪಿಯ ರಾಜ್ಯಾಧ್ಯಕ್ಷ ಕಂ ಶಾಸಕ ಕಂ ಮಾಜಿ ಮಂತ್ರಿ ಈಶ್ವರಪ್ಪ 'ಯಾರೇ ಕೂಗಾಡಲಿ, ಯಾರೇ ಹೋರಾಡಲಿ ನನ್ನ ಮೋಜಿಗೆಂದೂ ಭಂಗವಿಲ್ಲ' ಅಂತ ಹಾಡುತ್ತಾ ವಿದೇಶಕ್ಕೆ ಹಾರಿಯೇಬಿಟ್ಟಿದ್ದಾನೆ.



ಅದು ಸಂಸಾರ ಸಮೇತ ಎಂಟರ್‌ಟೈನ್‌ಮೆಂಟ್ ಟೂರ್ ಅಷ್ಟೆ. ಸದಾನಂದರು ಈಶ್ವರಪ್ಪನ ಫಾರಿನ್ ಟೂರ್‌ಅನ್ನು ಸಮರ್ಥಿಸಿರುವ ರೀತಿ ತಮಾಷೆಯಾಗಿದೆ. "ಈಶ್ವರಪ್ಪನವರು ದೇವರ ದರ್ಶನಕ್ಕೆಂದು ನೇಪಾಳಕ್ಕೆ ಹೋಗಿದ್ದಾರೆ ಅಷ್ಟೆ. ಅದನ್ನೇ ದೊಡ್ಡ ವಿಷಯ ಮಾಡಬೇಡಿ" ಅಂತಾ ಮಾಧ್ಯಮದವರಿಗೆ ಬುದ್ಧಿಮಾತು ಹೇಳಿದ್ದಾರೆ. ಆದರೆ ಸದಾನಂದ ಮುಚ್ಚಿಡಲು ಬಯಸಿದ ವಾಸ್ತವವೇನೆಂದರೆ ಬೆಂಗಳೂರಿನಿಂದ ನೇಪಾಳಕ್ಕೆ ಹಾರಿದ ಈಶ್ವರಪ್ಪ ಅತ್ತಿಂದತ್ತಲೇ ಹಾಂಗ್‌ಕಾಂಗ್, ಮಲೇಷಿಯಾಗಳನ್ನೆಲ್ಲಾ ಸುತ್ತಿಕೊಂಡೇ ರಾಜ್ಯಕ್ಕೆ ವಾಪಸ್ಸಾಗುವುದು.

ಈಶ್ವರಿ ವಾಪಸ್ಸಾದ ಕೂಡಲೇ ಒಂದು ಪತ್ರಿಕಾ ಗೋಷ್ಠಿ ಕರೆದು "ರಾಜ್ಯವನ್ನು ಬರಗಾಲದಿಂದ ಪಾರು ಮಾಡುವಂತೆ ಪಶುಪತಿನಾಥನನ್ನು ಬೇಡಿಕೊಂಡೆ. ಅದರ ಫಲವಾಗಿಯೇ ರಾಜ್ಯದಲ್ಲಿ ಮಳೆಯಾಗಿದೆ. ನನ್ನ ಈ ಸತ್ಕಾರ್ಯವನ್ನು ಸಹಿಸದ ವಿರೋಧಿಗಳು ಏನೇನೋ ಗುಲ್ಲೆಬ್ಬಿಸಿದ್ದಾರೆ" ಎಂದು ವಿವರಣೆ ನೀಡಿದರೂ ಆಶ್ಚರ್ಯವಿಲ್ಲ. ಈ ಮಂದಿಗೆ ಮನುಷ್ಯತ್ವದ ಸಂವೇದನೆ, ಮಾನ- ಮರ್ಯಾದೆ, ಸ್ಥಾನಮಾನದ ಜವಾಬ್ದಾರಿಗಳು ಯಾವುವೂ ಇಲ್ಲವೇ?


• ಮೂರ್ತಿ

●●●

ಭಾರತದ ರಕ್ಷಣಾ ಇಲಾಖೆಯ ನಿಯಮಾವಳಿಗಳ ಪ್ರಕಾರ ಸೇನೆಗೆ ಅಗತ್ಯವಿರುವ ಯಾವುದೇ ಸಾಮಗ್ರಿಗಳನ್ನು ನೇರವಾಗಿ ಉತ್ಪಾದಕರಿಂದಲೇ ಖರೀದಿ ಮಾಡಬೇಕೇ ಹೊರತು, ಯಾವ ಕಾರಣಕ್ಕೂ ಮಧ್ಯವರ್ತಿಗಳಿಂದ ಮಾಡುವಂತಿಲ್ಲ. ಆದರೆ ನೆನಪಿಡಿ, ಇದು ಭವ್ಯ ಭಾರತದ ಸೇನೆ. ಕಾರ್ಗಿಲ್ ಯುದ್ಧದಲ್ಲಿ ಮಡಿದ ಯೋಧರ ಶವಪೆಟ್ಟಿಗೆ ಖರೀದಿಯಲ್ಲೂ ಲಂಚ ತಿನ್ನಲು ಹೇಸದವರಿಗೆ ಇನ್ನೂ ಟ್ರಕ್ ಖರೀದಿಯ ವಿಷಯದಲ್ಲಿ ನೀತಿ ಪಾಲಿಸಬೇಕು ಅಂದರೆ ಹೇಗೆ?

• ದೊಡ್ಡಿಪಾಳ್ಯ ನರಸಿಂಹಮೂರ್ತಿ

ರಕ್ಷಣೆ ಹೆಸರಲ್ಲಿ ಭಕ್ಷಣೆ


ನಟರಾಜನ್

ನಮ್ಮ ಮಿಲಿಟರಿ ಎಂದರೆ ನಮಗೆಲ್ಲಾ ನೆನಪಾಗುವುದು ಬಿಸಿಲು ಮಳೆ ಚಳಿಗಳನ್ನು ಲೆಕ್ಕಿಸದೆ, ಪ್ರಾಣದ ಹಂಗು ತೊರೆದು ಹೋರಾಡುತ್ತಿರುವ ಸೈನಿಕರು. ಆದರೆ ಈ ಜನಪ್ರಿಯ ಕಲ್ಪನೆಗೆ ತದ್ವಿರುದ್ಧವಾಗಿ ಮಿಲಿಟರಿಗೆ ಮತ್ತೊಂದು ಮುಖವೂ ಇದೆ. ಅದು ಎಸಿ ರೂಮುಗಳಲ್ಲಿ ಕುಳಿತು ಭ್ರಷ್ಟಾಚಾರದಲ್ಲಿ ಮುಳುಗಿ ತೇಲುತ್ತಿರುವ ಅಧಿಕಾರಿಗಳ ಮುಖ. ಈ ಅಧಿಕಾರಿಗಳ ಭ್ರಷ್ಟತೆ ಎಷ್ಟೊಂದು ವ್ಯಾಪಕವಾಗಿದೆಯೆಂದರೆ, ಇಡೀ ದೇಶಕ್ಕೆ ದೇಶವೇ ಯೋಧರ ಸಾವಿನ ಬಗ್ಗೆ ಮರುಗುತ್ತಿದ್ದರೆ ಈ ಪಾಖಂಡಿಗಳು ಯೋಧರ ಶವಪೆಟ್ಟಿಗೆಗಳಲ್ಲೂ ಅಕ್ರಮ ಹಣ ಗಳಿಸುವ ನೀಚ ವ್ಯವಹಾರದಲ್ಲಿ ತೊಡಗಿರುತ್ತಾರೆ. ದೇಶ ರಕ್ಷಣೆಯ ಹೆಸರಿನಲ್ಲಿ ಈ ನೀಚ ಅಧಿಕಾರಿಗಳು ನಡೆಸುತ್ತಿರುವ ಭ್ರಷ್ಟಾಚಾರದ ಇತ್ತೀಚಿನ ದುರಂತ ಕತೆ ಇಲ್ಲಿದೆ ನೋಡಿ.

ಈ ಹಗರಣವನ್ನು ಬಯಲಿಗೆಳೆದದ್ದು ಬೇರೆ ಯಾರೂ ಅಲ್ಲ, ಭಾರತ ಸೇನೆಯ ಮುಖ್ಯಸ್ಥರಾದ ಜನರಲ್ ವಿಜಯ್ ಕುಮಾರ್ ಸಿಂಗ್. ಅದು ನಡೆದದ್ದು ಹೀಗೆ. ಯುದ್ಧ ಸಾಮಗ್ರಿಗಳನ್ನು ಸಾಗಿಸುವ ಹಾಗೂ ಪೃಥ್ವಿ, ಅಗ್ನಿಗಳಂತಹ ಕ್ಷಿಪಣಿಗಳನ್ನು ಉಡಾಯಿಸಲು ಬಳಸುವ ಸೇನಾ ಬಳಕೆಯ ಸುಮಾರು 788 ಟ್ರಕ್‌ಗಳಿಗಾಗಿ 2010ರ ಮಾರ್ಚ್ 18ರಂದು ಸೇನೆ ಆರ್ಡರ್ ಸಲ್ಲಿಸಿತ್ತು, ಈ ಡೀಲ್‌ಗೆ ಸಂಬಂಧಿಸಿದ ಫೈಲಿಗೆ ಸೇನಾ ಮುಖ್ಯಸ್ಥ ಜನರಲ್ ವಿಜಯ್ ಕುಮಾರ್ ಸಿಂಗ್‌ರ ಸಹಿ ಬೀಳಬೇಕಿತ್ತು, ಆದರೆ ಕಾರಣಾಂತರಗಳಿಂದ ಆ ಫೈಲು ಕೆಲಕಾಲ ಅದೇ ಟೇಬಲ್ಲಿನಲ್ಲೇ ಉಳಿದುಬಿಟ್ಟಿತು. ಹೀಗಿದ್ದಾಗ ಟ್ರಕ್ ಸರಬರಾಜಿನ ಗುತ್ತಿಗೆ ಪಡೆದಿದ್ದ ಲಂಡನ್ ಮೂಲದ ವೆಕ್ಟ್ರಾ ಸಿಫಾಕ್ಸ್ ಎಂಬ ಕಂಪನಿಯವರು ಈ ಡೀಲನ್ನು ಕುದುರಿಸಲು ತಮ್ಮ ಪ್ರತಿನಿಧಿಯೊಬ್ಬರನ್ನು ಜನರಲ್ ಸಿಂಗ್‌ರ ಕಚೇರಿಗೆ ಕಳಿಸಿಕೊಟ್ಟರು. ಈ ಬ್ರೋಕರ್ ಸೇನಾ ಮುಖ್ಯಸ್ಥರನ್ನು 2010ರ ಸೆಪ್ಟೆಂಬರ್ 22ರಂದು ಭೇಟಿ ಮಾಡಿ ಆ ಫೈಲನ್ನು ಪಾಸು ಮಾಡಿದರೆ ವೆಕ್ಟ್ರಾ ಕಂಪನಿಯವರು 14 ಕೋಟಿಗಳ ಸಂಭಾವನೆ ಕೊಡುವುದಾಗಿ ಆಮಿಷ ಒಡ್ಡಿದ. ಹಾಗೆ ಪರದೇಶಿ ಕಂಪನಿಯ ಪರವಾಗಿ ವಕಾಲತ್ತು ವಹಿಸಿ ಬಂದ ಬ್ರೋಕರ್ ಬೇರೆ ಯಾರೂ ಅಲ್ಲ, ಭಾರತ ಸೇನೆಯ ನಿವೃತ್ತ ಲೆಫ್ಟಿನೆಂಟ್ ಜನರಲ್ ತೇಜಿಂದರ್ ಸಿಂಗ್!!

ವಿಪರ್ಯಾಸ ನೋಡಿ. ಈ ಘಟನೆ ನಡೆದು ಒಂದೂವರೆ ವರ್ಷವಾದರೂ ಇದು ಹೊರ ಜಗತ್ತಿಗೆ ತಿಳಿಯಲೇ ಇಲ್ಲ, ಕೊನೆಗೆ ಹೇಗೋ ಈ ವಿಷಯ ಬೆಳಕಿಗೆ ಬಂದಿದೆ. ವ್ಯವಸ್ಥೆ ಎಷ್ಟೇ ಕೆಟ್ಟು ಹೋಗಿದ್ದರೂ ಪ್ರಾಮಾಣಿಕರಾಗಿರುವ ಅಧಿಕಾರಿಗಳು ಅಲ್ಲಲ್ಲಿ ಕಾಣಸಿಗುತ್ತಾರೆಂಬುದೇ ಸಮಾಧಾನದ ಸಂಗತಿ. ಜನರಲ್ ಸಿಂಗ್ ಕೂಡಾ ಅಂಥಾ ಒಬ್ಬ ಶುದ್ಧ ಹಸ್ತದ ಅಧಿಕಾರಿ.

14 ಕೋಟಿ ಲಂಚದ ಆಮಿಷ ಒಡ್ಡಿದ ಘಟನೆಯ ನಂತರ ಅವರು ಈ ಟಟ್ರಾ ಕಂಪನಿಯ ಟ್ರಕ್‌ಗಳ ಖರೀದಿ ವ್ಯವಹಾರವನ್ನು ಸೂಕ್ಷ್ಮವಾಗಿ ಪರಿಶೀಲಿಸಿದರು. ಆಗ ಬಯಲಾದ ಸತ್ಯ ಸಂಗತಿಗಳು ಮತ್ತಷ್ಟು ಆಘಾತಕಾರಿಯಾಗಿದ್ದವು. ಮೊದಲನೆಯದಾಗಿ ಈ ಟ್ರಕ್‌ಗಳು ಎರಡನೇ ದರ್ಜೆಯ ಗುಣಮಟ್ಟಕ್ಕೆ ಸೇರಿದ್ದವು. ಮಾತ್ರವಲ್ಲದೆ ಅವುಗಳಿಗೆ ತೆತ್ತಿದ್ದ ಬೆಲೆ ಸರಿಸುಮಾರು ಮೂರು ಪಟ್ಟು! ಅಂದರೆ 40 ಲಕ್ಷಗಳ ಮಾರುಕಟ್ಟೆ ಮೌಲ್ಯವಿದ್ದ ಟ್ರಕ್‌ಗಳಿಗೆ



ಒಂದು ಕೋಟಿ ಹತ್ತು ಲಕ್ಷಗಳ ಬೆಲೆ ನಿಗದಿಪಡಿಸಲಾಗಿತ್ತು! ಹೀಗೆ ಡೆಲಿವರಿಯಾಗಬೇಕಿದ್ದ 600 ಟ್ರಕ್‌ಗಳ ಬೆಲೆ ಸುಮಾರು 632 ಕೋಟಿಗಳು! ಇಷ್ಟಕ್ಕೆ ಮುಗಿಯಿತು ಎಂದುಕೊಳ್ಳಬೇಡಿ, ಕಳೆದ 14 ವರ್ಷಗಳಿಂದ ಇಂಥಾ 7000 ಟ್ರಕ್‌ಗಳನ್ನು ಇದೇ ಟಟ್ರಾ ಕಂಪನಿಯಿಂದಲೇ ಭಾರತೀಯ ಸೇನೆಗಾಗಿ ಖರೀದಿಸಲಾಗಿದೆ!!



ವಿ.ಕೆ. ಸಿಂಗ್

ಅಂದರೆ ದೇಶ ರಕ್ಷಣೆಯ ಹೆಸರಿನಲ್ಲಿ ಕೇವಲ ಟ್ರಕ್‌ಗಳ ಖರೀದಿ ವ್ಯವಹಾರವೊಂದರಿಂದಲೇ ಎಷ್ಟು ಕೋಟಿಗಳನ್ನು ಲಪಟಾಯಿಸಿರಬಹುದು ಎಂಬುದನ್ನು ನೀವೇ ಊಹಿಸಿ.

ರಷ್ಯಾದ ಜಂಟಿ ಸಹಯೋಗದೊಂದಿಗೆ ಇಂಥದೇ ಟ್ರಕ್‌ಗಳನ್ನು ತಯಾರಿಸುತ್ತಿರುವ ಉರಾಲ್ ಇಂಡಿಯಾ ಕಂಪನಿಯ ಜನರಲ್ ಮ್ಯಾನೇಜರ್ ರಾಜನ್ ಮುಖರ್ಜಿ ಈ ಅವ್ಯವಹಾರದ ಮತ್ತೊಂದು ಮುಖವನ್ನು ಬಿಚ್ಚಿಟ್ಟಿದ್ದಾರೆ. ಅದೇನೆಂದರೆ 2008ರಲ್ಲಿ ವಿ.ಕೆ.ಸಿಂಗ್ ಪೂರ್ವ ಕಮ್ಯಾಂಡ್‌ನ ಮುಖ್ಯಸ್ಥರಾಗಿದ್ದಾಗ 17ನೇ ಮೌಂಟೇನ್ ಡಿವಿಜನ್‌ನಲ್ಲಿ ಇದೇ ಟಟ್ರಾ ಟ್ರಕ್‌ಗಳು ಟ್ರಯಲ್ ವೇಳೆಯಲ್ಲಿ ಹೀನಾಯವಾಗಿ ವಿಫಲಗೊಂಡಿದ್ದವಂತೆ. ಅಲ್ಲದೆ ಗುಡ್ಡಗಳನ್ನು ಕ್ರಮಿಸುವಾಗ ಇಂಜಿನ್‌ಗಳಲ್ಲಿ ದೋಷಗಳು ಕಂಡುಬಂದಿದ್ದವಂತೆ. ಆದರೂ ಇವುಗಳನ್ನು ಖರೀದಿ ಮಾಡಿದ್ದರ ಬಗ್ಗೆ ವಿ.ಕೆ.ಸಿಂಗ್ ಆಗಲೇ ಆಕ್ಷೇಪ ಎತ್ತಿದ್ದರಂತೆ. ಇದು ಭ್ರಷ್ಟ ಅಧಿಕಾರಿಗಳು ನಮ್ಮ ದೇಶವನ್ನು ಕಾಯುತ್ತಿರುವ ರೀತಿ.

ನೀತಿಯೂ ಇಲ್ಲ ನಿಯಮವೂ ಇಲ್ಲ

ಭಾರತ ಸೇನೆಯ ಪರವಾಗಿ ಈ ಖರೀದಿ ವ್ಯವಹಾರಗಳನ್ನು ಬೆಂಗಳೂರು ಮೂಲದ ರಕ್ಷಣಾ ಸಂಸ್ಥೆ ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್ (ಬಿಇಎಂಎಲ್) ಎಂಬ ಸಾರ್ವಜನಿಕ ಕ್ಷೇತ್ರದ ಕಂಪನಿ ನಡೆಸುತ್ತದೆ. ಆದ್ದರಿಂದ ಈಗಿನ ರಕ್ಷಣಾ ವ್ಯವಹಾರದ ಸೂತ್ರಧಾರನೇ ಬಿಇಎಂಎಲ್‌ನ ಎಂಡಿ ವಿ.ನಟರಾಜನ್. ಸಿಬಿಐ ನವರು ಈತನನ್ನು ಈಗಾಗಲೇ ಹಲವು ಬಾರಿ ವಿಚಾರಣೆಗೆ ಒಳಪಡಿಸಿದ್ದಾರೆ. ಸೇನೆಯಲ್ಲಿದ್ದ ಭ್ರಷ್ಟರು ಹಾಗೂ ಬಿಇಎಮ್‌ಎಲ್‌ನ ಅಧಿಕಾರಿಗಳು ಶಾಮೀಲಾಗಿ ಈ ದೇಶಕ್ಕೆ ಎಸಗಿದ ದ್ರೋಹದ ವಿವರಗಳನ್ನು ನೋಡಿ.


ತೇಜಿಂದರ್ ಸಿಂಗ್

ವಾಸ್ತವದಲ್ಲಿ ಟಟ್ರಾ ಎಂಬುದು ಚೆಕ್ ಗಣರಾಜ್ಯ ಮೂಲದ ಹೆಸರಾಂತ ಟ್ರಕ್ ತಯಾರಿಕಾ ಕಂಪನಿ. ಅಮೆರಿಕ,ಯೂರೋಪ್‌ಗಳನ್ನು ಒಳಗೊಂಡಂತೆ ಸುಮಾರು 50ಕ್ಕೂ ಹೆಚ್ಚು ದೇಶಗಳಿಗೆ ಈ ಕಂಪನಿ ತನ್ನ ಟ್ರಕ್‌ಗಳನ್ನು ಮಾರಾಟ ಮಾಡುತ್ತದೆ. ಈ ಕಂಪನಿ ಬಿಇಎಂಎಲ್ ಕಂಪನಿಯೊಂದಿಗೆ ಸಹಯೋಗ ಮಾಡಿಕೊಂಡಿದೆ. ಭಾರತದಲ್ಲಿ ಗಣಿಗಾರಿಕೆಗೆ, ನಿರ್ಮಾಣ ಕಾಮಗಾರಿಗೆ ಹಾಗೂ ಸೇನಾ ಬಳಕೆಗೆ ಮಾರಾಟವಾಗುವ ಬಹುತೇಕ ಎಲ್ಲಾ ಟ್ರಕ್‌ಗಳನ್ನು ತಮಿಳುನಾಡಿನ ಹೊಸೂರಿನಲ್ಲಿರುವ ಬಿಇಎಂಎಲ್ ಕೈಗಾರಿಕೆಯಲ್ಲೇ ತಯಾರಿಸಲಾಗುತ್ತದೆ. ಹೀಗಿರುವಾಗ ಸೇನಾ ಬಳಕೆಗೆ ಬೇಕಾದ ವಾಹನಗಳನ್ನು ಪಡೆದುಕೊಳ್ಳುವುದು ಸುಲಭವಾಯಿತೆಂದು ಯಾರಾದರೂ ಭಾವಿಸಬಹುದು.

ಆದರೆ ಅಸಲಿ ಸಮಸ್ಯೆ ಇರುವುದೇ ಇಲ್ಲಿ, ಅಷ್ಟು ಸುಲಭವಾಗಿ ನೇರವಾಗಿ ವ್ಯವಹಾರ ಮಾಡಿದರೆ ಭ್ರಷ್ಟರ ಬೊಜ್ಜು ಬೆಳೆಯುವುದಾದರೂ ಹೇಗೆ? ಆದ್ದರಿಂದ ಈ ಭ್ರಷ್ಟರ ಕೂಟ ಎಲ್ಲಾ ನಿಯಮಾವಳಿಗಳನ್ನು ಗಾಳಿ[...] ತೂರಿ ವೆಕ್ಟ್ರಾ ಸಿಫಾಕ್ಸ್ ಎಂಬ ಲಂಡನ್[...] ಮೂಲದ ವ್ಯಾಪಾರಿ ಕಂಪನಿಯೊಂದಿಗೆ[...] ಟ್ರಕ್ ಸರಬರಾಜಿಗೆ ಸಂಬಂಧಪಟ್ಟಂ[...] ಒಪ್ಪಂದವನ್ನು ಹಾಗೂ ಅದಕ್ಕೆ ಪ್ರತಿಫಲ[...] ವಾಗಿ ತಮಗೆ ಬರಬೇಕಾದ ಕಿ[...] ಬ್ಯಾಕ್‌ಗೆ ಸಂಬಂಧಿಸಿದಂತೆ ಒಳಒಪ್ಪಂ[...] ವೊಂದನ್ನೂ ಒಟ್ಟಿಗೆ ಮಾಡಿಕೊಂಡರು[...]

ಮೊದಲಿಗೆ ಬಿಇಎಂಎಲ್ ಮತ್ತು[...] ವೆಕ್ಟ್ರಾ ಸಿಫಾಕ್ಸ್ ಕಂಪನಿಯ ನಡುವೆ[...] ಒಡಂಬಡಿಕೆಯಾಗಿದ್ದು 1997ರಲ್ಲಿ[...] ಆಗ ಬಿಜೆಪಿಯ ವಾಜಪೇಯಿ[...] ನೇತೃತ್ವದ ಎನ್‌ಡಿಎ ಸರ್ಕಾರ ಅಸ್ತಿತ್ವದ[...]ಲ್ಲಿತ್ತು, ಅತ್ಯಂತ ಚೋದ್ಯದ ಸಂಗತಿಯೆಂದರೆ ಒಪ್ಪಂದ[...] ಸಹಿ ಹಾಕುವ ಸಂದರ್ಭದಲ್ಲಿ ಈ ವೆಕ್ಟ್ರಾ ಕಂಪನಿ "ಆಧ್ಯಾತ್ಮಿಕ[...] ಧಾರ್ಮಿಕ ಹಾಗೂ ಸಾಮಾಜಿಕ ಸೇವೆ" ಒದಗಿಸು[...] ಹೆಸರಿನಲ್ಲಿ ರಿಜಿಸ್ಟರ್ ಆಗಿತ್ತು!!

ಈ ಒಪ್ಪಂದವಾದ ನಂತರದ ದಿನಗಳಲ್ಲೇ ಈ ಕಂಪ[...] ವ್ಯಾಪಾರ ವಹಿವಾಟಿಗೆ ತನ್ನ ಚಟುವಟಿಕೆಯನ್ನು ವಿಸ್ತರಿಸಿದ[...] ಅಷ್ಟು ಮಾತ್ರವಲ್ಲ, 10 ವರ್ಷಗಳ ಒಪ್ಪಂದ ಅವ[...] ಮುಗಿಯಲು ಇನ್ನೂ ನಾಲ್ಕು ವರ್ಷಗಳಿರುವಾಗಲೇ ಅಂದ[...] 2003ರಲ್ಲಿ ಇನ್ನೂ ಹತ್ತು ವರ್ಷಗಳ ಅವಧಿಗೆ ಈ[...] ಒಪ್ಪಂದವನ್ನು ವಿಸ್ತರಿಸಿ ಮತ್ತೊಂದು ಒಪ್ಪಂದಕ್ಕೆ ಸಹಿ[...] ಹಾಕಲಾಯಿತು! ಇಂಥಾ ಆತುರದ ಒಪ್ಪಂದಕ್ಕೆ ಏನ[...] ಕಾರಣವಿರಬಹುದು ಎಂಬುದನ್ನು ನೀವೇ ನಿರ್ಧರಿಸಿ. ದೇ[...] ರಕ್ಷಣೆಯ, ಧಾರ್ಮಿಕ ಸೇವೆಯ ಹಾಗೂ ಭ್ರಷ್ಟಾಚಾರ[...] ನಡುವಿನ ಅನುಬಂಧ ಹೇಗಿ[...] ನೋಡಿ?!!


ಈ ಮೂಲ ಒಪ್ಪಂದದ ಪ್ರಕಾ[...] ಕಳೆದ 14 ವರ್ಷಗಳಿಂದ ನಡೆದಿರು[...] ಸುಮಾರು 5000 ಕೋಟಿಗಳ ವ್ಯ[...]ಹಾರದಲ್ಲಿ ವೆಕ್ಟ್ರಾ ಕಂಪನಿ ಬಿಇಎಂಎಲ್[...] ನವರಿಗೆ ಮತ್ತು ಇತರ ಏಜೆಂಟ್‌ಗಳಿ[...] 750 ಕೋಟಿ ರೂಪಾಯಿಗ[...] ಕಿಕ್‌ಬ್ಯಾಕ್ ಪಾವತಿಸಿರುವುದು ಈ[...] ಬೆಳಕಿಗೆ ಬಂದಿದೆ.

ಮೊನ್ನೆ ರಾಜ್ಯ ಸಭೆಯಲ್ಲಿ ಈ[...] ವಿಷಯದ ಮೇಲೆ ಬಿಜೆಪಿಗಳ[...] ಹುಯಿಲೆಬ್ಬಿಸಿದವು. ತಾವೇ ನಡೆಸಿದ[...] ಹಗರಣದ ವಿರುದ್ಧ ತಾವೇ ಪೋಸ[...] ಕೊಟ್ಟು ಹುಯಿಲೆಬ್ಬಿಸುವ ಸಾಮರ್ಥ್ಯ ಬಿಜೆಪಿಗಲ್ಲದೆ ಈ[...] ದೇಶದಲ್ಲಿ ಬೇರೆ ಯಾರಿಗಿದೆ ಹೇಳಿ? ಈ ಕೂಗಾ[...] ಮಿತಿಮೀರಿದಾಗ ರಕ್ಷಣಾ ಸಚಿವ ಎ.ಕೆ.ಆಂಟನಿ ಅವ[...] ಬಾಯಿ ಮುಚ್ಚಿಸಲು ಇದೇ ಅಸ್ತ್ರ ಪ್ರಯೋಗಿಸಿದರು. ಈ[...] ಟಟ್ರಾ ವ್ಯವಹಾರಕ್ಕೆ ಎನ್‌ಡಿಎ ಸರ್ಕಾರದ ಅವಧಿಯ[...] ಆದ ಒಪ್ಪಂದ ಕಾರಣವೇ ಹೊರತು ತಮ್ಮ ಅವಧಿಯ[...] ಯಾವುದೇ ಹೊಸ ಒಪ್ಪಂದವನ್ನು ಮಾಡಿಕೊಂಡಿಲ್ಲ ಎಂ[...] ಆಂಟನಿಯ ಮಾತನ್ನು ಮಾಮೂಲಿ ರಾಜಕೀಯ[...] ದೋಷಾರೋಪಣೆಯೆಂದು ತಳ್ಳಿ ಹಾಕುವವರೇ ಹೆಚ್ಚು[...] ಆದರೆ ಅದೇ ಕಟು ವಾಸ್ತವ. ಅದೇನೇ ಇದ್ದರೂ ಈ[...] ಅವ್ಯವಹಾರದ ಬಗ್ಗೆ ಎರಡು ವರ್ಷಗಳ ಹಿಂದೆಯೇ ಮಾಹಿ[...] ಸಿಕ್ಕಿದ್ದರೂ 'ಮಿಸ್ಟರ್ ಕ್ಲೀನ್' ಆಂಟನಿ ಏನು ಕಡಿದ[...] ಗುಡ್ಡೆ ಹಾಕಿದರು ಅಂತ ಹುಡುಕಲು ಹೊರಟರೆ 'ಮಿಸ್ಟರ್[...] ಕ್ಲೀನ್'ನ ಸಾಧನೆ ಶೂನ್ಯವೆಂಬುದು ಬಟಾಬಯಲಾಗುತ್ತ[...]

ಈಗ ಈ ಪ್ರಕರಣ ಎತ್ತ ಸಾಗಿದೆ ಎಂಬುದರತ್ತ ಗಮ[...] ಹರಿಸೋಣ. 2010ರ ಫೆಬ್ರವರಿಯಲ್ಲಿ ಹಿಂದಿನ ಜನರಲ್[...] ದೀಪಕ್ ಕಪೂರ್ ಸಹಿ ಮಾಡಿ[...] ಇತ್ತೀಚಿನ ಖರೀದಿ ಆರ್ಡರನ್ನು ಈ[...] ವಿ.ಕೆ.ಸಿಂಗ್ ಬರಕಾಸ್ತು ಮಾಡಿದ್ದಾ[...] ಈ ಅವ್ಯವಹಾರದ ಬಗ್ಗೆ ರಕ್ಷಣಾ[...] ಮಂತ್ರಿ ಆಂಟನಿಗೂ ಸುದ್ದಿ ಮುಟ್ಟಿ[...]ದ್ದಾರೆ. ಈ ಬಗ್ಗೆ ತನಿಖೆ ನಡೆಸಲ[...] ಕೋರಿ ಪ್ರಧಾನ ಮಂತ್ರಿಗೆ ಬರೆ[...] ಪತ್ರವೊಂದು ಬಹಿರಂಗಗೊಂಡ[...] ನಂತರದಲ್ಲಿ ಮಾಧ್ಯಮಗಳಲ್ಲೂ ವ್ಯಾಪ[...] ಚರ್ಚೆ ಪ್ರಾರಂಭಗೊಂಡ ಹಿನ್ನೆಲೆಯ[...] ಈ ಸೇನಾ ಅವ್ಯವಹಾರವನ್ನು ಸಿಬಿ[...] ತನಿಖೆಗೆ ವಹಿಸಲಾಗಿದೆ. ಸಿಬಿಐ[...] ಬರೋಬ್ಬರಿ 22 ಪುಟಗಳ ಪತ್ರ ಬರೆದ ವಿ.ಕೆ.ಸಿಂಗ್[...] ತನಿಖೆಯ ಬಗ್ಗೆ ಹೆಚ್ಚಿನ ಆಸಕ್ತಿ ತೋರಿರುವುದಕ್ಕೆ ನಾ[...] ಅವರಿಗೆ ಹ್ಯಾಟ್ಸಾಫ್ ಹೇಳಲೇಬೇಕು.


ಈ ವೆಕ್ಟ್ರಾ ಸಿಂಫಾಕ್ಸ್ ಕಂಪನಿಯ ಮಾಲೀಕನೂ ಸ[...] ವಾಸ್ತವದಲ್ಲಿ ಭಾರತೀಯ ಮೂಲದವನೇ ಆದ ರವಿ ರಿ[...] ಎಂಬುವವನು. ಲಂಡನ್‌ನಲ್ಲಿ ತಳವೂರಿರುವ ವೆಕ್ಟ್ರಾ ಕೇವ[...] ವ್ಯಾಪಾರದ ಮಧ್ಯವರ್ತಿ ಕಂಪನಿಯಾಗಿದ್ದು ವಾಹ[...] ತಯಾರಿಕೆಗೂ ಈ ರವಿ ರಿಷಿಯ ಕಂಪನಿಗೂ ಯಾ[...] ಸಂಬಂಧವೂ ಇಲ್ಲ, ಭಾರತದ ರಕ್ಷಣಾ ಇಲಾಖೆಯ[...] ನಿಯಮಾವಳಿಗಳ ಪ್ರಕಾರ ಸೇನೆಗೆ ಅಗತ್ಯವಿರುವ ಯಾವುದ[...]

ಪ್ರಾಮಾಣಿಕತೆಗೆ ಸಿಕ್ಕ ಬೆಲೆ


ನಾಯರ್

ಟಟ್ರಾ ಅವ್ಯವಹಾರವನ್ನು ಪ್ರಶ್ನಿಸಿದ ಬಿಇಎಂಎಲ್ ನೌಕರನಿಗಾದ ಗತಿಯನ್ನು ನೋಡಿ. 2002ರ ನವೆಂಬರ್ 15ರಂದು ಕೆ.ಎಸ್.ಪೆರಿಯಸ್ವಾಮಿ ಎಂಬ ನೌಕರ ರಕ್ಷಣಾ ಇಲಾಖೆಯ ಜಂಟಿ ಕಾರ್ಯದರ್ಶಿಗೆ ಪತ್ರ ಬರೆದು ಟಟ್ರಾ ಟ್ರಕ್‌ಗಳ ಖರೀದಿಯಲ್ಲಿ ಭಾರೀ ಅವ್ಯವಹಾರ ನಡೆಯುತ್ತಿದ್ದು ಕೂಡಲೇ ಸೂಕ್ತ ತನಿಖೆ ಮಾಡುವಂತೆ ಒತ್ತಾಯಿಸಿದ. ವಾಹನ ತಯಾರಿಕಾ ಸಂಸ್ಥೆಗೆ ನೇರವಾಗಿ ಆರ್ಡರ್ ಕೊಡುವ ಬದಲು ಮಧ್ಯವರ್ತಿ ಕಂಪನಿಗೆ ಕೊಟ್ಟಿರುವುದು ಕಾನೂನುಬಾಹಿರ ಹಾಗೂ ಭ್ರಷ್ಟಾಚಾರಕ್ಕೆ ದಾರಿಯಾಗುತ್ತದೆ ಎಂಬುದು ಆತನ ಪ್ರಮುಖ ಆರೋಪವಾಗಿತ್ತು, ಆ ಪತ್ರಕ್ಕೆ ಏನು ಬೆಲೆ ಸಿಕ್ಕಿತೆಂಬುದನ್ನು ವಿವರಿಸಿ ಹೇಳುವ ಅಗತ್ಯವಿಲ್ಲ.

ನಂತರ ಪೆರಿಯಸ್ವಾಮಿ ಕಂಪನಿಯ ವಾರ್ಷಿಕ ಸಭೆಗಳಲ್ಲಿ ಈ ಅಂಶವನ್ನು ಪ್ರಶ್ನಿಸಿದ. ಅದರಿಂದಲೂ ಏನೂ ಆಗಲಿಲ್ಲ, ಆ ನಂತರ ಬ್ರಿಟಿಷ್ ರಾಯಭಾರಿ ಕಚೇರಿಗೆ ಪತ್ರ ಬರೆದು ವೆಕ್ಟ್ರಾ ಸಿಪಾಕ್ಸ್ ಕಂಪನಿಯ ಮಾಲಿಕತ್ವ ಮುಂತಾದ ವಿವರಗಳನ್ನು ತಿಳಿಯಲು ಪ್ರಯತ್ನಿಸಿದ. ಈ ಪ್ರಾಮಾಣಿಕ ಕಾಳಜಿಯ ನೌಕರನ ಪ್ರಯತ್ನಕ್ಕೆ ಸಿಕ್ಕ ಬಹುಮಾನ ಏನು ಗೊತ್ತೆ? ಆತನ ಬಾಯಿ ಮುಚ್ಚಿಸಲು ಸೇವೆಯಿಂದ ಸಸ್ಪೆಂಡ್ ಮಾಡಿದರು. ಆಗಲೂ ಆತ ರಾಜಿಯಾಗಲಿಲ್ಲ ಎಂಬ ಕಾರಣಕ್ಕೆ ಆತನನ್ನು ಕೆಲಸದಿಂದ ವಜಾ ಮಾಡಲಾಯಿತು. ಮೇರಾ ಭಾರತ್ ಮಹಾನ್!



ಕಳ್ಳನ್ನ ಕಾವಲಿಗಿಟ್ಟರೆ...?

ನಮ್ಮ ದೇಶದ ಎಲ್ಲಾ ಕ್ಷೇತ್ರಗಳಲ್ಲೂ ಭ್ರಷ್ಟಾಚಾರ ತಾಂಡವವಾಡುತ್ತಿದೆ ಎಂಬುದನ್ನೂ ಎಲ್ಲರೂ ಒಪ್ಪುತ್ತಾರೆ. ಆದರೆ ನಮ್ಮ ಸೇನೆಯಲ್ಲೂ ಅಂಥದೇ ಭ್ರಷ್ಟಾಚಾರ ತುಂಬಿತುಳುಕುತ್ತಿದೆ ಎಂದರೆ ಬಹಳ ಜನರು ಅದನ್ನು ನಂಬಲು ಕಷ್ಟಪಡುತ್ತಾರೆ. ಈ ಕೆಳಗಿನ ಪಟ್ಟಿ ನೋಡಿದರೆ ಅಂಥಾ ಭ್ರಮೆಯನ್ನು ಹೋಗಲಾಡಿಸಲು ಸಹಾಯವಾಗಬಹುದು.

- ಬೊಫೋರ್ಸ್ ಹಗರಣಕ್ಕೆ ಮುಂಚೆಯೆ ಎಚ್‌ಡಿಡಬ್ಲ್ಯೂ ಎಂಬ ಜರ್ಮನ್ ಕಂಪನಿಯಿಂದ ಸಬ್‌ಮೆರೀನ್‌ಗಳನ್ನು ಖರೀದಿ ಮಾಡುವಲ್ಲಿ ಭಾರಿ ಅವ್ಯವಹಾರ ಬೆಳಕಿಗೆ ಬಂದಿತ್ತು.
- 1987ರಲ್ಲಿ ರಾಜೀವ್ ಗಾಂಧಿ ಆಡಳಿತದ ಕಾಲದಲ್ಲಿ ಸ್ವೀಡಿಷ್ ದೇಶದಿಂದ ಖರೀದಿಸಿದ ಬೊಫೋರ್ಸ್ ಫಿರಂಗಿಗಳ ಹಗರಣ ಇನ್ನೂ ಜನಜನಿತವಾಗಿದೆ.
- 2000ರಲ್ಲಿ ಇಸ್ರೇಲ್ ದೇಶದಿಂದ ಖರೀದಿಸಿದ ಬರಾಕ್ ಕ್ಷಿಪಣಿ ಹಗರಣದ ಬಗ್ಗೆ ಸಿಬಿಐ ತನಿಖೆ ಪ್ರಗತಿಯಲ್ಲಿದೆ.
- 2002ರಲ್ಲಿ ಇಸ್ರೇಲ್‌ನ ಮಿಲಿಟರಿ ಇಂಡಸ್ಟ್ರೀಸ್‌ನಿಂದ ಮದ್ದುಗುಂಡು ಖರೀದಿ ವ್ಯವಹಾರದಲ್ಲಿ ಅವ್ಯವಹಾರ ನಡೆದು ಆ ಒಪ್ಪಂದವನ್ನು ರದ್ದು ಮಾಡಲಾಗಿದೆ.
- 2005ರಲ್ಲಿ ಆಯುಧ ಸರಬರಾಜು ಮಾಡಿದ ದಕ್ಷಿಣ ಆಫ್ರಿಕಾದ ಡೆನೆಲ್ ಕಂಪನಿಯಿಂದ ಸೇನಾ ಅಧಿಕಾರಿಗಳು 20 ಕೋಟಿ ಲಂಚ ಪಡೆದದ್ದು ಬೆಳಕಿಗೆ ಬಂತು.
- 2009 ರಲ್ಲಿ ಸೇನಾ ಆಧುನೀಕರಣದ ಹೆಸರಿನಲ್ಲಿ ಸಿಂಗಾಪುರ್ ಟೆಕ್ನಾಲಜೀಸ್ ಕಂಪನಿಯಿಂದ ಖರೀದಿಸಲಾದ 5000 ಕೋಟಿ ಮೌಲ್ಯದ ಆಧುನಿಕ ರೈಫಲ್‌ಗಳ ಖರೀದಿಯಲ್ಲಿ ನಡೆದ ಭ್ರಷ್ಟಾಚಾರದ ತನಿಖೆ ನಡೆಯುತ್ತಿದೆ.
- ಅಷ್ಟೆ ಅಲ್ಲದೇ, 2001ರಲ್ಲಿ ಬಿಜೆಪಿ ರಾಷ್ಟ್ರಾಧ್ಯಕ್ಷರಾಗಿದ್ದ ಬಂಗಾರು ಲಕ್ಷ್ಮಣ್ ಆಯುಧ ಖರೀದಿ ವ್ಯವಹಾರದ ಬಗ್ಗೆ ಲಂಚ ಸ್ವೀಕರಿಸಿ ತೆಹಲ್ಕಾ ಕುಟುಕು ಕಾರ್ಯಾಚರಣೆಯಲ್ಲಿ ಸಿಕ್ಕಿಬಿದ್ದಿದ್ದು ನ್ಯಾಯಾಲಯದ ತೀರ್ಪಿನಂತೆ ಇತ್ತೀಚೆಗಷ್ಟೇ ಜೈಲು ಸೇರಿದ್ದಾನೆ.
- ರಕ್ಷಣಾ ಇಲಾಖೆಗೆ ಸಂಬಂಧಿಸಿದ ವ್ಯವಹಾರಗಳಲ್ಲಿ ತಪ್ಪಿತಸ್ಥರೆಂದು ಕಂಡು ಬಂದ ಹಿನ್ನೆಲೆಯಲ್ಲಿ ಹಲವಾರು ಕಂಪನಿಗಳನ್ನು ಇಲಾಖೆ ಕಪ್ಪು ಪಟ್ಟಿಗೆ ಸೇರಿಸಿದೆ.

- ಬಿವಿಟಿ, ಹೊಲೆಂಡ್
- ಮೀಡಿಯ ಆರ್ಬಿಟೆಕ್ ಪ್ರೈ ಲಿ., ಸಿಂಗಾಪುರ್
- ಆರ್.ಕೆ. ಮೆಷೀನ್ ಟೂಲ್ಸ್, ಲೂಧಿಯಾನ
- ಟಿ.ಎಸ್.ಕಿಶನ್ ಅಂಡ್ ಕಂಪನಿ, ದೆಹಲಿ
- ಎಚ್.ವೈ.ಟಿ. ಪೂನಾ

ಈ ಪಟ್ಟಿ ಹೀಗೇ ಮುಂದುವರೆದಿದೆ. ತಪ್ಪಿತಸ್ಥರೆಂದು ಕಂಪನಿಗಳನ್ನು ಗುರುತಿಸಲಾಗಿದೆ. ಆದರೆ ಅದೇ ತಪ್ಪಿನ ಆಧಾರದಲ್ಲಿ ಯಾವೊಬ್ಬ ಅಧಿಕಾರಿಗೆ ಅಥವಾ ರಾಜಕಾರಣಿಗೆ ಶಿಕ್ಷೆಯಾದ ಉದಾಹರಣೆಯೂ ಸಿಗುವುದಿಲ್ಲ.

ಅಂದಹಾಗೆ ಇತ್ತೀಚೆಗೆ ಪ್ರಕಟಿಸಲಾದ 2012-13ರ ಬಜೆಟ್‌ನಲ್ಲಿ ರಕ್ಷಣೆಗೆಂದು ಮೀಸಲಾದ ಮೊತ್ತ ಎಷ್ಟು ಗೊತ್ತೆ? ಬರೋಬ್ಬರಿ 1,93,000 ಕೋಟಿ ರೂಪಾಯಿಗಳು! ಅದರಲ್ಲಿ 79,579 ಕೋಟಿಗಳನ್ನು ಆಧುನೀಕರಣ ಹಾಗೂ ಆಯುಧಗಳ ಖರೀದಿಗೆಂದು ಮೀಸಲಿರಿಸಲಾಗಿದೆ. ಮುಂದೇನು ಅಂತ ಊಹಿಸಿಕೊಳ್ಳುವುದು ನಿಮಗೇ ಬಿಟ್ಟಿದ್ದು.

ಸಾಮಗ್ರಿಗಳನ್ನು ನೇರವಾಗಿ ಉತ್ಪಾದಕರಿಂದಲೇ ಖರೀದಿ ಮಾಡಬೇಕೇ ಹೊರತು, ಯಾವ ಕಾರಣಕ್ಕೂ ಮಧ್ಯವರ್ತಿ ಗಳಿಂದ ಮಾಡುವಂತಿಲ್ಲ.

ಆದರೆ ನೆನಪಿಡಿ, ಇದು ಭವ್ಯ ಭಾರತದ ಸೇನೆ. ಕಾರ್ಗಿಲ್ ಯುದ್ಧದಲ್ಲಿ ಮಡಿದ ಯೋಧರ ಶವಪೆಟ್ಟಿಗೆ ಖರೀದಿಯಲ್ಲೂ ಲಂಚ ತಿನ್ನಲು ಹೇಸದವರಿಗೆ ಇನ್ನೂ ಟ್ರಕ್ ಖರೀದಿಯ ವಿಷಯದಲ್ಲಿ ನೀತಿ ಪಾಲಿಸಬೇಕು ಎಂದರೆ ಹೇಗೆ?

ಜನರಲ್ ವಿ.ಕೆ.ಸಿಂಗ್ ಪ್ರಕಾರ ಸೇನೆಯ ಕೆಲವು ಅಧಿಕಾರಿಗಳು ಹಾಗೂ ಆಯುಧ ಸಾಮಗ್ರಿ ವ್ಯಾಪಾರಿಗಳ ನಡುವೆ ಒಂದು ಅಕ್ರಮ ಮೈತ್ರಿಕೂಟ ಚಾಲ್ತಿಯಲ್ಲಿದ್ದು ಇಂಥಾ ಹಗರಣಗಳಿಗೆ ಆ ಕೂಟವೇ ಕಾರಣ. ತೇಜಿಂದರ್ ಸಿಂಗ್‌ನ ಹೆಸರನ್ನು ಮಾತ್ರವಲ್ಲದೆ ಇನ್ನೂ ಹಲವು ಉನ್ನತ ಸೇನಾಧಿಕಾರಿಗಳ ಬಗ್ಗೆಯೂ ಸಿಂಗ್ ಮಾಹಿತಿ ನೀಡಿದ್ದಾರೆ.

ಇತ್ತೀಚೆಗೆ ಸಿಂಗ್‌ರ ಜನ್ಮ ದಿನಾಂಕದ ವಿವಾದ ಮಾಧ್ಯಮಗಳಲ್ಲಿ ಬಹಳ ಚರ್ಚೆಯಾಯಿತು. ಭ್ರಷ್ಟ ಅಧಿಕಾರಿಗಳ ಕೂಟ ಈ ಸಣ್ಣ ವಿಷಯವನ್ನು ಜಗ್ಗಾದಿ ಜಗತ್ತು ರಾಡಿ ಎಬ್ಬಿಸಿದ್ದು ಯಾಕೆಂದು ಈ ಎಲ್ಲಾ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳುವುದು ಕಷ್ಟವೇನಲ್ಲ.

ರಕ್ಷಣಾ ಮೇಳವೊಂದರಲ್ಲಿ ಭಾಗವಹಿಸಲೆಂದು ಭಾರತಕ್ಕೆ ಬಂದಿದ್ದ ಮಧ್ಯವರ್ತಿ ಕಂಪನಿಯ ಮಾಲೀಕ ರವಿ ರಿಷಿಯನ್ನು ಸಿಬಿಐನವರು ವಿಚಾರಣೆಗೆ ಒಳಪಡಿಸಿದ್ದಾರೆ. ವೆಕ್ಟ್ರಾ ಕಂಪನಿಯ ರವಿ ರಿಷಿ, ಬಿಇಎಂಎಲ್‌ನ ಅಧಿಕಾರಿಗಳು ಹಾಗೂ ರಕ್ಷಣಾ ಇಲಾಖೆಯ ಹಲವು ಅಧಿಕಾರಿಗಳ ಮೇಲೆ ಈಗಾಗಲೇ ಸಿಬಿಐನವರು ಕೇಸು ದಾಖಲಿಸಿದ್ದಾರೆ. ನಿವೃತ್ತ ಬ್ರಿಗೇಡಿಯರ್ ...ಸಿ ದಾಸ್‌ನ ದೆಹಲಿ ನಿವಾಸ, ನಿವೃತ್ತ ಕರ್ನಲ್ ಅನಿಲ್ ...ನ ಗೋಯಿಮ್ಮಾದ ನಿವಾಸ ಮತ್ತು ನಟರಾಜನ್ ಮತ್ತಿತರರ ಬೆಂಗಳೂರಿನ ನಿವಾಸ ಹಾಗೂ ಕಚೇರಿಗಳ ಮೇಲೆ ದಾಳಿ ನಡೆಸಿ ಹಲವು ಮಹತ್ವದ ದಾಖಲೆಗಳನ್ನು ವಶಪಡಿಸಿ ಕೊಂಡಿದ್ದಾರೆ. ಅನಿಲ್ ಮನ್ಯಾರಾಮಿ ಎಂಬ ರವಿ ರಿಷಿಯ ಏಜೆಂಟನ ನೋಯ್ಡಾ ನಿವಾಸದ ಮೇಲೂ ದಾಳಿ ನಡೆದಿದೆ. ಎಲ್ಲಕ್ಕಿಂತ ಮುಖ್ಯವಾಗಿ ಬಿಇಎಂಎಲ್‌ನ ಎಂಡಿ ನಟರಾಜನ್‌ನ ಮೇಲೆ ಭ್ರಷ್ಟಾಚಾರ, ಮೋಸ, ಸರ್ಕಾರದ ಬೊಕ್ಕಸಕ್ಕೆ ನಷ್ಟವುಂಟು ಮಾಡಿರುವುದು ಮುಂತಾದ ಗಂಭೀರ ಆರೋಪದ ಮೇಲೆ ಹಲವು ಕೇಸುಗಳನ್ನು ದಾಖಲಿಸಿದ್ದಾರೆ. ತನಿಖೆ ಪ್ರಗತಿಯಲ್ಲಿದ್ದು ಸದ್ಯದಲ್ಲೇ ಕೆಲವು ತಿಮಿಂಗಿಲಗಳನ್ನು ಸಿಬಿಐನವರು ಬಂಧಿಸುವ ಸಾಧ್ಯತೆ ನಿಚ್ಚಳವಾಗಿದೆ.

ಆದರೆ ಇವರ್‍ಯಾರೂ ಸಾಮಾನ್ಯ ವ್ಯಕ್ತಿಗಳಲ್ಲ. ವಿವಿಧ ರಾಜಕಾರಣಿಗಳ ಜೊತೆಗೆ ಸಖ್ಯವನ್ನು ಹೊಂದಿದ್ದಾರಲ್ಲದೆ ಕೇಂದ್ರದ ಮಂತ್ರಿ ಮಹೋದಯರ ಮೇಲೆ ಪ್ರಭಾವ ಬೀರುವಷ್ಟು ಪ್ರಭಾವಿಗಳಾಗಿದ್ದಾರೆ. ಉದಾಹರಣೆಗೆ, ಬಿಇಎಂಎಲ್‌ನ ಮುಖ್ಯಸ್ಥ ನಟರಾಜನ್‌ಗೂ ಪ್ರಧಾನ ಮಂತ್ರಿಯ ಸಲಹೆಗಾರ ಟಿ.ಕೆ.ನಾಯರ್‌ಗೂ ಗಳಸ್ಯ ಕಂಠಸ್ಯ ಸಂಬಂಧವಂತೆ. ಆತನ ಶ್ರೀರಕ್ಷೆಯಿಂದಲೇ ನಟರಾಜನ್ ಬಚಾವಾಗಲು ಇನ್ನಿಲ್ಲದಂತೆ ಹೆಣಗುತ್ತಿದ್ದಾನೆ. ಅದಕ್ಕೆ ಪ್ರತಿಯಾಗಿ ಬಿಇಎಂಎಲ್‌ಗೆ ಸೇರಿದ ಬೆಲೆಬಾಳುವ ನಿವೇಶನಗಳನ್ನು ನಾಯರ್‌ನ ಸಂಬಂಧಿಗಳಿಗೆ ನಟರಾಜನ್ ಕೊಟ್ಟಿದ್ದಾನೆ. ಇದಕ್ಕೆ ಸಾಕಷ್ಟು ಪುರಾವೆಗಳು ಲಭ್ಯವಾಗಿವೆ. ಹೀಗೆ ನಾವು ಕೆದಕಿದಷ್ಟೂ ಸಿಗುವುದು ರಕ್ಷಣೆಯ ಹೆಸರಿನ ಭಕ್ಷಣಾ ಕರ್ಮಕಾಂಡಗಳೇ.

ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಕೆಲವು ಭ್ರಷ್ಟರನ್ನಾದರೂ ಬಂಧಿಸಿ ಕೇಸು ಹಾಕುವಂತಾಗಲು 60 ವರ್ಷಗಳೇ ಬೇಕಾದವು. ಇನ್ನೂ ಈ ದುಷ್ಟರಿಗೆ ಶಿಕ್ಷೆಯಾಗುವ ಹಂತ ತಲುಪಬೇಕೆಂದರೆ ಇನ್ನು ಎಷ್ಟು ವರ್ಷ ಬೇಕಾಗ ಬಹುದು?

ಮತೀಯ ಪಾರ್ಟಿಲಿ ಸೆಕ್ಯೂಲರ್ ನಾಯಕ ಈಶ್ವರಿ!

ಸಾಹಿತ್ಯ ಪರಿಷತ್ ಚುನಾವಣೆಯನ್ನು ನೋಡಿದ ಅಸಾಹಿತಿಗಳು "ಛೇ ನಮ್ಮ ಬಿಜೆಪಿ, ಕಾಂಗ್ರೆಸ್, ಜೆ.ಡಿ.ಎಸ್ ಚುನಾವಣೆಗಳೇ ಪರವಾಗಿಲ್ಲ, ಅವುಗಳ ಯೋಗ್ಯತೆಗೆ ತಕ್ಕಂಗೆ ನ್ಯಡಕತ್ತವೆ. ಆದ್ರೆ ಈ ಸಾಹಿತಿಗಳು ನ್ಯಡಸಿದ ಚುನಾವಣೆ ನೋಡಿದ್ರೆ, ಜಾತಿ ವಿಷ ಇಲ್ಲಿಗೂ ಆವರಿಸಿದೆಯಲ್ರೀ" ಎಂದು ಹೌಹಾರಿದರಂತಲ್ಲ, ಒಕ್ಕಲಿಗರ ಓಟು ಜಯಪ್ರಕಾಶ ಗೌಡರಿಗೆ, ಲಿಂಗಾಯತರ ಓಟು ಭಾಗ ಮಾಡಿದಂತೆ ಚಂಪಾ ಮತ್ತು ಜರಗನಹಳ್ಳಿಗೆ ಇನ್ನ ಸಾಹಿತ್ಯ ಪರಿಷತ್ತಿನ ಪಟ್ಟಭದ್ರಹಿತಾಸಕ್ತರ ಗುಂಪು ಹಾಲಂಬಿಗೆ- ಹೀಗೆ ಈ ಚುನಾವಣೆ ನಡೆಯುವುದಾದರೆ ಈ ಚುನಾವಣೆಯನ್ನು ರದ್ದು ಮಾಡಿ, ಪ್ರಾಧಿಕಾರಗಳಿಗೆ ಅಧ್ಯಕ್ಷರನ್ನು ನೇಮಿಸುವಂತೆ ಸರಕಾರವೇ ಒಬ್ಬ ಪರಿಚಾರಕನನ್ನು ನೇಮಿಸಿದರೆ ಹೇಗೆ ಎಂದು ಜಾತ್ಯತೀತ ಜನರು ಯೋಚಿಸುತ್ತಿದ್ದಾರಂತಲ್ಲ, ಥೂತ್ತೇರಿ!

****

ಥೂತ್ತೇರಿ ▸ ಯಾಹೂ

ಸಾಹಿತ್ಯ ಪರಿಷತ್‌ನ ಚುನಾವಣೆ ಕೆಟ್ಟು ಕೆರಹಿಡಿದಿರುವುದು ಈಗಲ್ಲ, ಮೂರು ದಶಕಗಳ ಹಿಂದೆ ಯಾವ ಹಂಪನಾ ಎಂಬ ನಾಮರ್ಥ ಸಾಹಿತ್ಯ ಪರಿಷತ್‌ಗೆ ವಕ್ಕರಿಸಿದನೊ ಅವತ್ತೆ ಹದಗೆಟ್ಟಿತು. ಅದರ ಪರಿಣಾಮ ಎದುರಿಸಿದವರು ದೇಜಗೌರವರು. ಕಾಲಮಾನದಲ್ಲಿ ದೇಜಗೌಗಿಂತ ಹಂಪನಾ ಪರವಾಗಿಲ್ಲ, ಕಮಲನ ಅಭಿಮಾನಿ, ಆರಾಧಕ ಮತ್ತು ಹಿಂಬಾಲಕನಾಗಿ ಹೆಂಗೋ ಕಾಲ ಹಾಕುತ್ತಿದ್ದಾನೆ. ಆದರೆ ದೇಜಗೌ ಜಾತಿಕೋಟೆಯ ಕಳ್ಳಬೇಲಿಯಾಗಿ ಒಣಗಿ ಹೋದರೆಂದು ಚಂಪಾರ ಹಿಂಬಾಲಕರು ಕೇಕೆಹಾಕಿ ನಕ್ಕರಂತಲ್ಲ, ಅದೇನಾದರಾಗಲೀ ಮುಂದೆ ಸಾಹಿತ್ಯ ಪರಿಷತ್‌ಗೆ ಮತದಾನ ಮಾಡುವವರು ಸಾಹಿತಿಗಳಾಗಿರ ಬೇಕು, ಒಂದು ಕತೆ ಅಥವ ಒಂದು ಕವನ ಇಲ್ಲ ಒಂದು ಪ್ರಬಂಧ ಇಲ್ಲ ಒಂದು ಕಿರುಗತೆಯನ್ನಾದರೂ ಬರೆದಿರಬೇಕು ಎಂದು ಕಾನೂನು ಜಾರಿಯಾಗಬೇಕೆಂದು ಹಲವಾರು ಅಸಾಹಿತಿಗಳು ಪ್ರಾಕ್ಸಿ ಮತದಾರರನ್ನು ಹೆದರಿಸಿದ್ದಾರಂತಲ್ಲ, ಅದೇನಾದರೂ ಇಂತಹ ಕಾನೂನು ಬಂದಿದ್ದೇ ಆದರೆ, ಸಾಹಿತ್ಯ ಪರಿಷತ್ತಿನಲ್ಲಿ ಕುಡಿದು ತಿಂದು ಯಾಚನೆ ಮಾಡುತ್ತಿರುವ ಯಾಚಕರು, ಕೂಲಿ ಕೊಟ್ಟು ಕತೆ, ಕವನ ಬರೆಸಿ ತಮ್ಮ ಹೆಸರಲ್ಲಿ ಪ್ರಕಟಿಸಿ ಮತದಾನದ ಹಕ್ಕನ್ನು ರಿನ್ಯೂ ಮಾಡಿಸಿಕೊಳ್ಳಲಿದ್ದಾರಂತಲ್ಲಾ, ಥೂತ್ತೇರಿ!

****

ದಾವಣಗೆರೆಯಲ್ಲಿ ನಡೆದ ಕುರುಬರ ಜಾತ್ರೆಯಲ್ಲಿ ಪ್ರಧಾನವಾಗಿ ಕಾಣಿಸಿಕೊಳ್ಳಬೇಕಾಗಿದ್ದ 'ಕುರಿಕುಲತಿಲಕ' ಈಶ್ವರಪ್ಪ ಅತ್ತ ಮುಖ ಹಾಕಿ ನೋಡದಿರಲು ಕಾರಣವೇನು ಎಂದು ವಿಚಾರಿಸಬೇಕೆನಿಸಿತಲ್ಲಾ, ಆ ಕೂಡಲೇ ಫೋನ್ ಮಾಡಲಾಗಿ ರಿಂಗಾಯ್ತು.

ರಿಂಗ್‌ಟೋನ್: "ಭಜಗೋವಿಂದಮ್, ಭಜ ಗೋವಿಂದಮ್ ಗೋವಿಂದಂಭಜ......

"ಹಲೋ ಯಾರ್ರೀ?"

"ನಾನು ಸಾರ್ ಯಾಹೂ ಅಂತ, ಪತ್ರಕರ್ತ."

"ಯಾಹು ಸ್ವಲ್ಪ ಹೊತ್ತು ಬಿಟ್ಟು ಮಾತಾಡ್ತಿರಾ?"

"ಇಲ್ಲಾ ಸಾರ್, ಡೆಡ್‌ಲೈನ್. ಒಂದೆರಡು ಮಾತಾಡಿ."

"ನಿಮ್ಮ ಪತ್ರಕರ್ತರ ಚಾಳಿನೆ ಅದು. ಅದೇನೊ ಡೆಡ್‌ಲೈನು ಅಂತೀರಿ. ಏನು ಪ್ರಾಣ ಹೋಗಿಬಿಡುತ್ತ? ಆ ಹಾಳು ಎಡೂರಪ್ಪನದೊಂದು ಸಮಸ್ಯೆ ಆದ್ರೆ, ನಿಮ್ಮದೊಂದು. ಅದೇನು ಬೇಗ ಹೇಳಿ."

"ದಾವಣಗೆರೆ ಕುರುಬರ ಸಮ್ಮೇಳನಕ್ಕೆ ಯಾಕ್ ಸಾರ್ ನೀವು ಹೋಗಲಿಲ್ಲ?"

"ಪಾರ್ಟಿ ಕೆಲಸ ಇತ್ತು, ಹೋಗಲಿಲ್ಲ."

"ಜಾತಿ ಸಮ್ಮೇಳನಕಿಂತ್ಲೂ ಪಾರ್ಟಿ ಕೆಲಸ ಮುಖ್ಯಾನ ಸಾರ್?"

"ಹೌದು ಕಂಡ್ರಿ. ಪಾರ್ಟಿ ಇದ್ರೆ ನಾವು. ಜಾತಿ ತಗೊಂಡೇನು ಮಾಡ್ತೀರಿ? ಅದ್ಯಲ್ಲ ಆ ಸಿದ್ಧರಾಮಯ್ಯನಂಥೋರಿಗೇ ಸರಿ."

"ನಿಜಕ್ಕೂ ಕುರುಬ ಜನಾಂಗದ ಸೆಕ್ಯೂಲರ್ ನಾಯಕ ಸಾರ್ ನೀವು."

"ನಾನು ಸೆಕ್ಯೂಲರ್ ಆಗ್ಬೇಕು ಕಂಡ್ರಿ."

"ಮತೀಯ ಪಾರ್ಟಿಲಿ ಸೆಕ್ಯೂಲರ್ ನಾಯಕ. ರಿಯಲಿ ಗ್ರೇಟ್ ಸಾರ್!"

"ನಾವು ಯಾವತ್ತೂ ಸೆಕ್ಯೂಲರ್. ನೀವು ಪೇಪರ್‌ನವ್ರು ಅಂಗೆ ಬರೀತಿರಿ."

"ಮತ್ತೆ ಸಿದ್ಧರಾಮಯ್ಯ ನಿಮ್ಮನ್ನ ಬ್ರೈನ್‌ಲೆಸ್ ಅಂತ ಬೈತಾರಲ್ಲಾ ಸಾರ್?"

"ಅದ್ಕೆ ಕಂಡ್ರಿ ನಾನು ದಾವಣಗೆರೆ ಸಭೆಗೆ ಹೋಗಲಿಲ್ಲ, ಅಲ್ಲಿ ಆತ ಏನಾದ್ರು ಅನ್ನದು, ಜನಗಳು ಶೀಟಿ ಹೊಡೆದು ಚಪ್ಪಾಳೆ ತಟ್ಟದು, ಸಿಟ್ಟು ಬಂದು ನಾನೇನಾದ್ರೂ ಅನ್ನದು, ಅದೆಲ್ಲಾ ಯಾಕ್ ಬೇಕು? ಅದರ ಬದ್ಲು ಸದಾನಂದಗೌಡರತ್ರ ನಗಾಡ್ತ ಎಡೂರಪ್ಪನ ಸುದ್ದಿ ಮಾತಾಡಿಕೊಂಡು ಆರಾಮಾಗಿರಬಹುದಲ್ರೀ."

"ಒಳ್ಳೇ ತೀರ್ಮಾನ ತಗೊಂಡಿದ್ದಿರಿ ಬಿಡಿ ಸಾರ್ ನಿಮ್ಮಂಥವರನ್ನು ಬ್ರೈನ್‌ಲೆಸ್ ಅನ್ನಬಾರ್ದು. ಮಾನನಷ್ಟ ಮೊಕದ್ದಮೆ ಹಾಕಿ ಬ್ರೈನ್ ಇರದನ್ನ ಸಾಬೀತು ಮಾಡಬೇಕಾಗಿತ್ತು ನೀವು."

"ಅದ್ಯಲ್ಲ ಯಾಕ್ ಬೇಕ್ರಿ? ಆತ ಹಾಗಂದ ಅಂತೇಳಿ ನನಿಗೆ ಬ್ರೈನ್ ಇಲ್ಲವೇ?"

"ಇದೆ ಸಾರ್. ಆದ್ರೆ ಆ ಸಿದ್ಧರಾಮಯ್ಯನ ಕಡಿಯೋರು ನಿಮ್ಮ ಬ್ರೈನ್ ಬಗ್ಗೆ ಕೆಟ್ಟದಾಗಿ ಮಾತಾಡ್ತರಲ್ಲ, ಅದನ್ನು ಕೇಳಕ್ಕಾಗಲ್ಲ ಸಾರ್."

"ಏನಂತ ಮಾತಾಡ್ತರ್‍ರೀ?"


"ಸ್ಥಾನಮಾನಕ್ಕಾಗಿ ಎಡೂರಪ್ಪ ಡೆಲ್ಲಿಗೋಗ್ತರೆ ಅಂದ್ರೆ ನೀವು 'ಕಿಂಗ್‌ಫಿಷರ್ ಏರ್‌ಲೈನ್ ಲಾಸಲ್ಲಿದೆ. ಲಾಭ ಬರುತ್ತೆ ಬಿಡಿ. ಎಡೂರಪ್ಪ ಡೆಲ್ಲಿಗೋಡಾಡ್ಲಿ' ಅಂದ್ರಂತೆ. ಮರುದಿನ 'ಎಡೂರಪ್ಪನವರಿಗೆ ಸ್ಥಾನಮಾನ ಇಲ್ಲದ್ದು ನನಿಗೆ ನೋವು ತರಿಸಿದೆ' ಅಂದರಂತೆ. ಅವುರು 'ಈಶ್ವರಪ್ಪನಿಂದ್ಲೆ ನಾನು ಜೈಲಿಗೋದದ್ದು' ಅಂದಾಗ ಏನೂ ಅನ್ನದೆ, ಅವರ ಪಕ್ಕ ಕೂತಗಂಡು ಆತ್ಮೀಯವಾಗಿ ಮಾತನಾಡಿದರಂತೆ. ಅದ್ಯಾವಾಗ್ಲೊ ಎಡೂರಪ್ಪನ ಕಾಲಿಗೆ ಬಿದ್ದು 'ನನ್ನ ತಂದೆ ಸಮಾನ. ನನ್ನ ಬೆಳೆಸಿದ ನಾಯಕ' ಅಂದ್ರಂತೆ. ಆಮೇಲೆ 'ಈ ಎಡೂರಪ್ಪ ಹಾಳಾಗಿಹೋಯ್ತನೆ. ಅವನು ಹೋದಷ್ಟು ನನಗೇ ಒಳ್ಳೆದು' ಅಂದರಂತೆ. ಇಂತ ಮಾತು ನಡವಳಿಕೆನ ಕ್ರೋಢೀಕರಿಸಿ, ಯೋಚನೆ ಮಾಡಿದಾಗ, ಅಲ್ಲಿ ಬ್ರೈನ್ ಕೆಲಸ ಮಾಡ್ತಯಿರದುರ ಬದ್ಲು, ಬರೀ ನಾಲಗೆನೆ ಕೆಲಸ ಮಾಡ್ತ ಇರದು. ಆ ಸಿದ್ಧರಾಮಯ್ಯನಿಗೆ ಗೊತ್ತಾಯ್ತಂತೆ. ಅದ್ಕೆ ಅವುರು ನಿಮ್ಮನ್ನ ಬ್ರೈನ್‌ಲೆಸ್ ಅಂದರಂತೆ. ಎಲ್ಲಕಿಂತ ಮುಖ್ಯವಾಗಿ ನಿಮ್ಮನ್ನ ಸೀರಿಯಸ್ಸಾಗಿ ಪರಿಗಣಿಸಿರೊ ಎಡೂರಪ್ಪ ಈ ಬಾರಿ ನಿಮ್ಮನ್ನ ತಗದೇ ತಗಿತರಂತೆ. ಅಂಗಂತ ಆಪ್ತರತ್ರ ಹೇಳಿದರಂತೆ."

"ನನ್ನನ್ನ ತಗಿಯಕ್ಕೆ ಯಾರ ಕೈಲೂ ಆಗಲ್ಲ ಕಂಡ್ರೀ. ಎಡೂರಪ್ಪ ಈಗಾಗ್ಲೆ ಜೈಲಿಗೋಗಿ ಬಂದವ್ರುರೆ. ಪುನಃ ಹೋಗ ಬೇಕಂತಾ?"

"ತಗಿಯದು ಅಂದ್ರೆ ಮರ್ಡರ್ ಅಲ್ಲ ಸಾರ್. ಚುನಾವಣೆಲೀ ತಗಿತರಂತೆ."


"ಅವ್ರುರು ಶಿವಮೊಗ್ಗದ ಲಿಂಗಾಯಿತ್ರಿಗೇಳಿದ್ರೆ, ನಾನು ಶಿಕಾರಿಪುರದ ಕುರುಬರಿಗೇಳ್ತಿನಿ ಗೊತ್ತ?!"

"ಥೂತ್ತೇರಿ!!!"




ಶಿರಸಿ: ಟಿಕೆಟ್......! ಟಿಕೆಟ್.....!! ಸದ್ದು-ಗದ್ದಲ


ಉತ್ತರ ಕನ್ನಡದ ರಾಜಕಾರಣದ ಪಡಸಾಲೆಯಲ್ಲಿ ತುಂಬ ನಾಜೂಕಾಗಿ ಇಲೆಕ್ಷನ್ ಪಾಲಿಟಿಕ್ಸ್ ಆವಾಹನೆ ಆಗಿಬಿಟ್ಟದೆ! ಬತ್ತಿದರೆ ಬೆಳೆಯಾಗದ ಜೊಳ್ಳುಗಳೇ ತುಂಬಿಕೊಂಡಿರುವ ಸಕಲ ಪಕ್ಷದಲ್ಲೂ ಎಮ್ಮೆಲ್ಲೆ ಆಗುವ ಉಮೇದುವಾರರು ಎದ್ದೆದ್ದು ಕುಣಿಯಲಾರಂಭಿಸಿದ್ದಾರೆ. ಬಿಜೆಪಿ ಪಕ್ಷ-ಸರ್ಕಾರ ಎರಡರಲ್ಲೂ ಆಗುತ್ತಿರುವ ಆಸ್ಫೋಟಗಳು ಹಠಾತ್ ಅಸೆಂಬ್ಲಿ ಚುನಾವಣೆ ಎದುರಾಗುವ ಸಂಕೇತಗಳೆಂಬುದು ಈ ಸೂತ್ರಧಾರಿಗಳ ಗಾಡ್‌ಫಾದರ್‌ಗಳ ಗಣಿತ! ಹೀಗಾಗಿ ಅಷ್ಟೂ ಪಾರ್ಟಿಯ ಬಾಸ್-ಬಂಟರೆಲ್ಲ ಟಿಕೆಟ್ ಲಾಬಿ ಒಳಗೊಳಗೇ ಶುರುಹಚ್ಚಿಕೊಂಡಿದ್ದಾರೆ.


ಕಾಗೇರಿ


ಜಿಲ್ಲೆಯ ಶಿರಸಿ-ಸಿದ್ಧಾಪುರ ವಿಧಾನ ಸಭಾ ಕ್ಷೇತ್ರವಿದೆಯಲ್ಲ, ಅದು ಲಾಗಾಯ್ತಿನಿಂದಲೂ ಕುತೂಹಲಕರ ಕಣ. ಸಮಬಲದಲ್ಲಿರುವ ಹೈಗರ ಮತ್ತು ದೀವರ ಪರಂಪರಾಗತ ಜಿದ್ದಾಜಿದ್ದಿನ ಅಖಾಡವಿದು. ರಾಮಕೃಷ್ಣ ಹೆಗಡೆಯಂಥ ರಾಮಕೃಷ್ಣ ಹೆಗಡೆಯ ತವರು ಕ್ಷೇತ್ರ. ಯಾವಾಗ ದೀವರ ದೊರೆ 'ಬಂ' ಶಿರಸಿ ಸೀಮೆಯ ಅಳಿಯನಾಗಿ ಅವತರಿಸಿದರೋ ಆಗಿಂದ ಈ ಕ್ಷೇತ್ರದ ರಾಜಕಾರಣಕ್ಕೆ ಬ್ಯಾಕ್‌ವರ್ಡ್ಸ್-ಫಾರ್‌ವರ್ಡ್ಸ್ ರಾಜಕೀಯದ ಚಿತ್ರ-ವಿಚಿತ್ರ ಆಯಾಮ ಬಂದುಬಿಟ್ಟಿತು. ಈಗ ಈ ಚಂಡ-ಪ್ರಚಂಡ ನಾಯಕಾಗ್ರೇಸರಿಬ್ಬರೂ ಇಲ್ಲ, ಆದರವರ ನಾಮಬಲದಿಂದ ನಾನಾ ನಮೂನೆಯ ತರಲೆ-ತಂತ್ರ ಮಾಡುವ ಜಾತಿಬಂಧುಗಳ ದೊಡ್ಡ ದಂಡೇ ಇದೆ!!


ದೇಶಪಾಂಡೆ

ಕಳೆದ ಅಸೆಂಬ್ಲಿ ಚುನಾವಣೆಗಿಂತ ಮುಂಚೆ ಈ ಶಿರಸಿ-ಸಿದ್ಧಾಪುರ ಮೀಸಲು ಕ್ಷೇತ್ರವಾಗಿತ್ತು, ರಾಮಕೃಷ್ಣ ಹೆಗಡೆಗೆ ತೊಂದರೆ ಕೊಡಲೆಂದೇ ಅಂದು ಆಳುವ ಕಾಂಗ್ರೆಸ್‌ನ ಹಿರೇಮಣಿಯಾಗಿದ್ದ ಶ್ರೀಪಾದ ಹೆಗಡೆ ಕಡವೆ ಸದ್ರಿ ಕ್ಷೇತ್ರ ರಿಸರ್ವ್ ಮಾಡಿಸಿದ್ದರೆಂಬ ಪ್ರತೀತಿ ಇಂದಿಗೂ ಇದೆ. ರಾಮಕೃಷ್ಣ ಹೆಗಡೆ ಇಲ್ಲಿಂದ ಗೆದ್ದು ಮಾಡಿದ್ದೇನೂ ಇಲ್ಲವೆಂಬುದು ಬೇರೆ ಮಾತು. ಆದರೆ ಹೆಗಡೆಜೀ ಅನಿವಾರ್ಯವಾಗಿ ಹಳಿಯಾಳಕ್ಕೆ ವಲಸೆ ಹೋಗಿ ಗೆಲ್ಲಬೇಕಾದ 'ಕಷ್ಟ' ಎದುರಾಗಿತ್ತು, ಇಂಥ 'ಪ್ರತಿಷ್ಠಿತ' ಶಿರಸಿ-ಸಿದ್ಧಾಪುರ ಕ್ಷೇತ್ರವನ್ನೀಗ ಹೆಗಡೆಜೀಯ ಬ್ರಾಹ್ಮಣ ಕುಲೋದ್ಧಾರಕ ವಿಶ್ವೇಶ್ವರ ಹೆಗಡೆ ಕಾಗೇರಿ ಆಳುತ್ತಿದ್ದಾರೆ. ಅರ್ಥಾತ್ ಜಾತಿ ಪ್ರೀತಿಯಿಂದ ಊರು ಹಾಳು ಮಾಡುತ್ತಿದ್ದಾರೆ!!


ರವೀಂದ್ರ ನಾಯಕ್


ಶಿರಸಿ-ಸಿದ್ಧಾಪುರ ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರವಾಗಿದ್ದಾಗ ಇಲ್ಲಿಂದ ಗೆದ್ದವರು ಒಂದೋ, ಹೆಗಡೆಜೀ ಹಿಡಿತದಲ್ಲಿದ್ದರು ಅಥವಾ 'ಬಂ' ಬಂಟರಾಗಿದ್ದವರು. ಹೆಗಡೆಜೀ ಕುಟುಂಬದ ಮತ್ತು ಜಾತಿ ಮುಂದಾಳುಗಳ ಯಜಮಾನಿಕೆ ಧಿಕ್ಕರಿಸಿದ ಮಾಜಿ ಮಂತ್ರಿ ಪಿ.ಎಸ್. ಜೈವಂತ್‌ರನ್ನು ಅಂದು ಜನತಾ ದಳದಲ್ಲಿ ಬ್ರಾಹ್ಮಣರು ಮೂಲೆಗುಂಪು ಮಾಡಿದ್ದರು. ಹಾಗೆಯೇ 'ಬಂ'ಗೆ ಜೈ ಹೇಳಿದ್ದಕ್ಕೆ ಗೋಪಾಲ ಕಾನಡೆಯನ್ನು ದೀವರು ಹೇಳಹೆಸರಿಲ್ಲದಂತೆ ಮಾಡಿದ್ದರು. ಈಗಿದು ಸಾಮಾನ್ಯ ಕ್ಷೇತ್ರ. ಹಾಗಾಗಿ ಈ ಕ್ಷೇತ್ರವನ್ನು "ಬ್ರಾಹ್ಮಣರ ಮೀಸಲು ಕ್ಷೇತ್ರ" (ಹಿಂದೆ ಅಂಕೋಲಾ ಮಾಡಿಕೊಂಡಂತೆ) ಮಾಡುವ ಹುನ್ನಾರವನ್ನು ಎಲ್ಲ ಪಕ್ಷದ ಜನಿವಾರಿಗಳು ನಡೆಸಿದ್ದಾರೆ. ಅಂದರೆ ಎಲ್ಲ ಪಕ್ಷದವರೂ ಇಲ್ಲಿ ಹವ್ಯಕ ಕುಲ ಸಂಜಾತರಿಗೇ ಅಭ್ಯರ್ಥಿ ಮಾಡುವಂಥ ತಂತ್ರಗಾರಿಕೆ ನಡೆದಿದೆ; ಬ್ರಾಹ್ಮಣೇತರರು ಯಾವ ಪಕ್ಷದಲ್ಲೂ ಟಿಕೆಟ್ ಕೇಳದಂಥ ವೈದಿಕಶಾಹಿ ರಾಜಕಾರಣ ನಡೆದಿದೆ.


ಶಶಿಭೂಷಣ್

ಕಾಂಗ್ರೆಸ್ ಮತ್ತು ಬಿಜೆಪಿ ಮಾತ್ರ ಶಿರಸಿ-ಸಿದ್ಧಾಪುರದಲ್ಲಿ ಜಬರ್ದಸ್ತ್ ಎದುರಾಳಿ ಪಾರ್ಟಿಗಳು. ಜೆಡಿಎಸ್‌ಗೆ ಇಲ್ಲಿ ನೆಲೆ-ಬೆಲೆ ಎರಡೂ ಇಲ್ಲ, ಆದರೆ ಕಾಂಗ್ರೆಸ್ ಅಥವಾ ಬಿಜೆಪಿಯಲ್ಲಿ ಚಲಾವಣೆಯಲ್ಲಿರುವ 'ಚಾಲೂ'ಗಳನ್ನು ಹೈಜಾಕ್ ಮಾಡಲು ಜೆಡಿಎಸ್‌ನ 'ಚಾಕ'ಗಳು ಹೊಂಚು ಹಾಕಿದ್ದಾರೆ. ರಾಮಕೃಷ್ಣ ಹೆಗಡೆಜೀಯ ದೊಡ್ಮನೆ ಕುಟುಂಬದ ಕಣ್ಮಣಿ ಶಶಿಭೂಷಣ ಹೆಗಡೆ ಮೇಲೆ ಸಾಕ್ಷಾತ್ ಕುಮಾರಣ್ಣನ ಕಣ್ಣು ಬಿದ್ದಿದೆ! ಹೆಗಡೆಜೀ ಜೀವಂತವಾಗಿದ್ದಾಗ ಕುಮಾರಣ್ಣನ ಅಪ್ಪ ದೇವೇಗೌಡ ಆತನ ಪರಮ ಶತ್ರುವಾಗಿದ್ದು ಎಲ್ಲರಿಗೂ ಗೊತ್ತಿದೆ. ಅಂಥ ದೇವೇಗೌಡರ ಮಗ ಕುಮಾರಸ್ವಾಮಿ ಸಿಎಂ ಆಗಿದ್ದಾಗ ನೇರ ಸಿದ್ಧಾಪುರಕ್ಕೆ ಹೋಗಿ ಹೆಗಡೆಜೀ ಅಣ್ಣ ಗಣೇಶ್ ಹೆಗಡೆ ಪಾದಕ್ಕೆ ಕೈ ಹೊಡೆದು ಅವರ ಮನೆಯಲ್ಲಿ ತಿಂಡಿ ತಿಂದು ಬಂದಿದ್ದರು. ಆ ಮೂಲಕ ಶಶಿಭೂಷಣನನ್ನು ಬುಟ್ಟಿಗೆ ಹಾಕಿಕೊಳ್ಳಲು ಹವಣಿಸಿದ್ದರು. ಆದರೆ ಕುಮಟಾ ಕ್ಷೇತ್ರದಲ್ಲಿ ಎರಡೂವರೆ ಸಾವಿರ ಮತದಂತರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸೋತಿದ್ದ ಶಶಿ ಮೇಲೆ ಅಷ್ಟು ಸುಲಭವಾಗಿ ಮೋಡಿ ಮಾಡಲು ಕುಮಾರಣ್ಣನಿಂದಾಗ ಆಗಿರಲಿಲ್ಲ.

ಕಳೆದ ಅಸೆಂಬ್ಲಿ ಇಲೆಕ್ಷನ್‌ನಲ್ಲಿ ಕುಮಟೆಯಲ್ಲಿ ಮತ್ತೆ ಬಿಜೆಪಿ ಕ್ಯಾಂಡಿಡೇಟಾಗಿದ್ದ ಶಶಿ ಬರೀ ಐದು ನೂರು ಮತದಂತರದಿಂದ ಸೋತರು. ಆದರೆ ಸೋತ ಶಶಿಗೆ ಶಕ್ತಿ ತುಂಬುವ ಕೆಲಸ ಬಿಜೆಪಿಯಲ್ಲಿ ಆಗಲೇ ಇಲ್ಲ, ಬಿಜೆಪಿಯಲ್ಲಿ ಶಶಿ ಬೆಳಗಿದರೆ ಸ್ವಜಾತಿ ಎದುರಾಳಿ ತಮಗೆ ತಯಾರಾದಂತಾಗುತ್ತದೆಂಬ ಭೀತಿ ಮಂತ್ರಿ ಕಾಗೇರಿ ಮತ್ತು ಸಂಸದ ಅನಂತ್ಕಾಣೆಗಳಲ್ಲಿ ಮೂಡಿತ್ತು, ಬಿಜೆಪಿಯಲ್ಲಿ ತನಗೆ ಕಾಲ್ತೊಡಕಾಗಿದ್ದ ಸ್ವಜಾತಿ ಸೀನಿಯರ್ ಲೀಡರ್ ಡಾ. ಎಂ.ಪಿ. ಕರ್ಕಿ ಅವರನ್ನು ಹಣಿಯಲೆಂದೇ ಅಂದು ಶಶಿಯನ್ನು ಸಿದ್ಧಾಪುರದಿಂದ ಕುಮಟೆಗೆ ರಫ್ತು ಮಾಡಿಸಿದ್ದ ಕಾಗೇರಿ ಈಗಾತನನ್ನು ವ್ಯವಸ್ಥಿತವಾಗಿ ಹೈರಾಣಾಗಿಸಿಬಿಟ್ಟಿದ್ದಾರೆ. ಇದರಿಂದ ಶಶಿ ಮತ್ತವನ ಅಪ್ಪ ವಿನಾಯಕರಾವ್ ಹೆಗಡೆ ಎಂಬ ಆಧ್ವಾಣಿ ಸಖ್ಯಾ ಆದ್ಮಿ ಕೊತ-ಕೊತ ಕುದಿಯುತ್ತಿದ್ದಾರೆ.

ಬಿಜೆಪಿಯಲ್ಲಿ ಶಶಿ ಅಸಮಾಧಾನದಲ್ಲಿರುವುದು ಜೆಡಿಎಸ್‌ನ ಕುಮಾರಸ್ವಾಮಿ ಮತ್ತು ಕಾಂಗ್ರೆಸ್‌ನ ದೇಶಪಾಂಡೆಯ 'ಆಟ'ಕ್ಕೆ ಆಸ್ಪದ ಕೊಟ್ಟದೆ. ಕಾಗೇರಿ ಮತ್ತು ಅನಂತ್ಕಾಣೆ ಕಾಟದಿಂದ ಕಂಗಾಲಾಗಿರುವ ಶಶಿಯನ್ನು ಜೆಡಿಎಸ್ ಹುರಿಯಾಳಾಗಿಸಿ ಶಿರಸಿಯಲ್ಲಿ ನಿಲ್ಲಿಸಿದರೆ ಗೆಲ್ಲಬಹುದೆಂಬ ಆಸೆ ಕುಮಾರ್‌ಗೆ. ಕ್ಷೇತ್ರದಲ್ಲಿನ ಹೆಗಡೆಜೀಯ ಹವ್ಯಕರು ಮತ್ತು 'ಬಂ'ರ ದೀವರು ಒಟ್ಟಾಗಿ ಓಟು ಹಾಕುತ್ತಾರೆಂಬ ಭಾವನೆ ಕುಮಾರ್‌ದು. ಅದಕ್ಕಾಗಿಯೇ ಕುಮಾರ್ ಈಗ 'ಬಂ'ರ ಮುದ್ದಿನ ಮಗ ಮಧುನನ್ನು ಮುಂದಿಟ್ಟುಕೊಂಡು ಉತ್ತರ ಕನ್ನಡದಲ್ಲಿ ಪಾರ್ಟಿ ಕಟ್ಟುತ್ತಿದ್ದಾರೆ. ಆದರೆ ಅದ್ಯಾಕೋ ಅಜ್ಜ (ಹೆಗಡೆಜೀ)ನ ವೈರಿ ಪಡೆ ಸೇರಲು ಶಶಿಗೆ ಮನಸ್ಸಿಲ್ಲ.


ಬಂಗಾರಪ್ಪ

ಅತ್ತ ಕಾಂಗ್ರೆಸ್‌ನಲ್ಲೂ ಶಶಿಯನ್ನು ಸೆಳೆವ ಯೋಜನೆ-ಯೋಚನೆ ನಡೆದಿದೆ. ಕೊನೆಗಾಲದಲ್ಲಿ ಗುರು ಹೆಗಡೆಜೀಗೆ ಮಾಡಿದ ದ್ರೋಹಕ್ಕೆ ಪ್ರಾಯಶ್ಚಿತ್ತವಾಗಿ ಶಶಿಯನ್ನು ಕಾಂಗ್ರೆಸ್‌ಗೆ ತಂದು ಶಿರ್ಸಿಯಲ್ಲಿ ಅಭ್ಯರ್ಥಿಯಾಗಿಸಿದರೆ ಹೇಗೆಂಬ ಚಿಂತನೆ ದೇಶಪಾಂಡೆ ತಲೆಯಲ್ಲಿ ನಡೆದಿದೆ. ಹಾಗಂತ ಹಳೆಯ ಮಿತ್ರ ಕಾಗೇರಿಗೆ ತೊಂದರೆ ಕೊಡುವ 'ಪಾಪ'ಕ್ಕೂ ದೇಶಪಾಂಡೆ ರೆಡಿಯಿಲ್ಲ, ದಳದ ದಿನಗಳಿಂದಲೂ ಕಾಗೇರಿ ಗೆಲುವಿಗೆ ದೇಶಪಾಂಡೆ ಹೊರಗಿದ್ದೇ ಸಹಾಯ ಮಾಡುತ್ತಿರುವುದು ಬಹಿರಂಗ ರಹಸ್ಯ. ಇದೇ ಉಪಕಾರ ಕಾಗೇರಿ ಮಿತ್ರ ದೇಶಪಾಂಡೆಗೆ ಲಾಗಾಯ್ತಿನಿಂದಲೂ ಮಾಡುತ್ತಿದ್ದಾರೆ. ಒಂದಂತೂ ಖರೆ. ಹಾಗೊಮ್ಮೆ ಶಶಿ ಕಾಂಗ್ರೆಸ್ ಕ್ಯಾಂಡಿಡೇಟಾದರೆ ಕಾಗೇರಿ ಶಿರ್ಸಿಯಲ್ಲಿ ಪಲ್ಟಿ ಹೊಡೆಯುವ ಸಾಧ್ಯತೆಯೇ ಹೆಚ್ಚು, ಶಶಿ ಪರಿವಾರಕ್ಕೂ ಜೆಡಿಎಸ್‌ಗಿಂತ ಕಾಂಗ್ರೆಸ್ಸೇ ಬೆಟರ್ ಎಂಬ ಭಾವನೆಯಿದೆ.

ಶಶಿ ಸಿಗದಿದ್ದರೆ ಹೆಗಡೆಜೀಯ ಹೆಣ್ಣುಮಕ್ಕಳಾದ ಸಮತಾ ಮತ್ತು ಮಮತಾರಲ್ಲಿ ಒಬ್ಬರನ್ನಾದರೂ ಜೆಡಿಎಸ್‌ಗೆ ತಂದು ಕ್ಯಾಂಡಿಡೇಟಾಗಿಸಿದರೆ ಹೇಗೆಂದು ಆಲೋಚನೆ ಮಾಡಲು ಕುಮಾರಸ್ವಾಮಿಗೆ ದಳವಾಯಿಗಳು ಸೂಚಿಸಿದ್ದಾರಂತೆ. ಈ ಮಮತಾ ನಿಚ್ಚಾನಿ ಕಳೆದ ಅಸೆಂಬ್ಲಿ ಇಲೆಕ್ಷನ್‌ನಲ್ಲಿ ಕುಮಾರ್ ಎದುರೇ ಕಾಂಗ್ರೆಸ್ ಕ್ಯಾಂಡಿಡೇಟಾಗಿ ರಾಮನಗರದಲ್ಲಿ ಸ್ಪರ್ಧಿಸಿದ್ದರು. ಹೀಗಾಗಿ ಕುಮಾರ್ ಮಮತಾ ಎಂದರೆ ಮೂಗು ಮುರಿಯುತ್ತಾರೆ. 'ಬಂ' ಜೆಡಿಎಸ್ ಸೇರಿದಾಗ ಶಿರ್ಸಿ ಕ್ಷೇತ್ರದಲ್ಲಿ ಆತನ ಭಾಮೈದ-ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಭೀಮಣ್ಣ ನಾಯ್ಕನೇ ಜೆಡಿಎಸ್ ಅಭ್ಯರ್ಥಿ ಎಂದು ದೊಡ್ಡ ಮಟ್ಟದ ಚರ್ಚೆಯಾಗಿತ್ತು, ಇದಕ್ಕೆ ಕಾರಣವೂ ಇತ್ತು, ದನ ಕಾಯುತ್ತಿದ್ದ ಭೀಮಣ್ಣನಿಗೆ ರಾಜಕೀಯ ದೀಕ್ಷೆ ನೀಡಿದ್ದೇ ಭಾವ 'ಬಂ'. ಅಸೆಂಬ್ಲಿ-ಪಾರ್ಲಿಮೆಂಟಿಗೆಲ್ಲ ಈತ 'ಬಂ' ಪಾರ್ಟಿಯಿಂದ ಹಲವು ಬಾರಿ ಸ್ಪರ್ಧಿಸಿದ್ದ, 'ಬಂ' ಚಾಲಂಗೋಚಿಯಂತೆ 'ರಾಜಕಾರಣ' ಮಾಡಿದ್ದ ಭೀಮಣ್ಣ ಭಾವನಿಗೆ ಕೊನೆಗಾಲದಲ್ಲಿ ಕೈಕೊಟ್ಟದ್ದು ವಿಚಿತ್ರವಾದರೂ ಸತ್ಯ.


ಭೀಮಣ್ಣ


ಮ್ಯಾಗಿ ಹಣಿಯಲು ಮತ್ತು 'ಬಂ' ಬಲ ಪಡೆಯಲು ದೇಶಪಾಂಡೆ ಡಿಸಿಸಿ ಅಧ್ಯಕ್ಷನಾಗಿ ಭೀಮಣ್ಣನನ್ನು ಪ್ರತಿಷ್ಠಾಪಿಸಿ ದಾಳ ಉರುಳಿಸಿದ್ದರು. ಆ ಹೊತ್ತಲ್ಲಿ ದೇಶಪಾಂಡೆ ಭೀಮಣ್ಣನಿಗೆ ಶಿರ್ಸಿಯಿಂದ ಸ್ಪರ್ಧಿಸಲು ಕಾಂಗ್ರೆಸ್ ಟಿಕೆಟ್ ಕೊಡಿಸುವ ಮಾತೂ ಆಡಿದ್ದರು. 'ಬಂ' ಜೆಡಿಎಸ್‌ಗೆ ದಿಢೀರ್ ವಲಸೆ ಹೋದಾಗ ಭೀಮಣ್ಣನೂ ಗಂಟುಮೂಟೆ ಕಟ್ಟಿಕೊಂಡಿದ್ದ. ಆದರೆ ದೇಶಪಾಂಡೆ ಅಸೆಂಬ್ಲಿ ಟಿಕೆಟ್ ಆಮಿಷ ಒಡ್ಡಿ ಹಿಡಿದಿಟ್ಟುಕೊಂಡಿದ್ದರು.


ಹೆಗಡೆ ಪುತ್ರಿಯರು


ಇದು 'ಬಂ' ಮತ್ತು ಮ್ಯಾಗಿ ಇಬ್ಬರಿಗೂ ಒಂದೇ ಕಲ್ಲಿಂದ ಏಟು ಕೊಡುವ ಕುತಂತ್ರ ದೇಶಪಾಂಡೆಯದಾಗಿತ್ತು, ಈಗ 'ಬಂ' ವಾರಸುದಾರನಾಗಿ ಮಧು ಬಂಗಾರಪ್ಪ ಜೆಡಿಎಸ್‌ನಲ್ಲಿ ಆಧಿಪತ್ಯ ಸ್ಥಾಪಿಸುತ್ತಿದ್ದಾರೆ. ಹಾಗೊಮ್ಮೆ ಭೀಮಣ್ಣ ಮನಸ್ಸು ಮಾಡಿದರೆ ಜೆಡಿಎಸ್ ಕ್ಯಾಂಡಿಡೇಟಾಗುವುದು ಕಷ್ಟವೇನಲ್ಲ, ಅಳಿಯ ಮಧು ಮಾವನಿಗಾಗಿ ಲಾಬಿ ಮಾಡೇ ಮಾಡ್ತಾರೆ. ಕೌಟುಂಬಿಕವಾಗಿಯೂ ಭೀಮಣ್ಣ 'ಕುಬಂ' ವಿರೋಧಿ. ಮಧು ಪರ. 'ಬಂ' ಕುಟುಂಬದಲ್ಲಿ ಬಿರುಕು ಬರಲು ಈ 'ಶಕುನಿ ಮಾಮ'ನ ಪಾತ್ರವೂ ಸಾಕಷ್ಟು ದೊಡ್ಡದಿದೆ ಎಂಬುದು ಜನಜನಿತ.

> ಕಳೆದ ಅಸೆಂಬ್ಲಿ ಚುನಾವಣೆಗಿಂತ ಮುಂಚೆ ಈ ಶಿರಸಿ-ಸಿದ್ಧಾಪುರ ಮೀಸಲು ಕ್ಷೇತ್ರವಾಗಿತ್ತು. ರಾಮಕೃಷ್ಣ ಹೆಗಡೆ ಇಲ್ಲಿಂದ ಗೆದ್ದು ಮಾಡಿದ್ದೇನೂ ಇಲ್ಲವೆಂಬುದು ಬೇರೆ ಮಾತು. ಆದರೆ ಹೆಗಡೆಜೀ ಅನಿವಾರ್ಯವಾಗಿ ಹಳಿಯಾಳಕ್ಕೆ ವಲಸೆ ಹೋಗಿ ಗೆಲ್ಲಬೇಕಾದ 'ಕಷ್ಟ' ಎದುರಾಗಿತ್ತು. ಇಂಥ 'ಪ್ರತಿಷ್ಠಿತ' ಶಿರಸಿ-ಸಿದ್ಧಾಪುರ ಕ್ಷೇತ್ರವನ್ನೀಗ ಹೆಗಡೆಜೀಯ ಬ್ರಾಹ್ಮಣ ಕುಲೋದ್ಧಾರಕ ವಿಶ್ವೇಶ್ವರ ಹೆಗಡೆ ಕಾಗೇರಿ ಆಳುತ್ತಿದ್ದಾರೆ. ಅರ್ಥಾತ್ ಜಾತಿ ಪ್ರೀತಿಯಿಂದ ಊರು ಹಾಳು ಮಾಡುತ್ತಿದ್ದಾರೆ!!

ಒಟ್ಟನಲ್ಲಿ ದೇಶಪಾಂಡೆ ನಂಬಿ ಭೀಮಣ್ಣ ಕಾಂಗ್ರೆಸ್‌ನಲ್ಲೇ ಉಳಿದಿದ್ದಾನೆ. ಆತನ ದೇಹ ಕಾಂಗ್ರೆಸ್‌ನಲ್ಲಿದೆ. ಪ್ರಾಣ ಜೆಡಿಎಸ್‌ನಲ್ಲಿದೆ ಎಂದು ದೇಶಪಾಂಡೆ ಅನುಯಾಯಿಗಳಾದ ಮೇಲ್ವರ್ಗದವರು ಗೇಲಿ ಮಾಡುತ್ತಾರೆ. ಇದೇ ನೆಪದಿಂದ ಭೀಮಣ್ಣನಿಗೆ ಕೊಕ್ ಕೊಡಿಸಿ ತಾನೇ ಕಾಂಗ್ರೆಸ್ ಟಿಕೆಟ್ ಹೊಡೆದುಕೊಳ್ಳಲು 'ಟಿಎಸ್‌ಎಸ್ ಕಳ್ಳ' ಶಾಂತಾರಾಮ ಹೆಗಡೆ ಹವಣಿಸುತ್ತಿದ್ದಾನೆ. ಹಿಂದೊಮ್ಮೆ ಕಾಗೇರಿ ವಿರುದ್ಧ ಸೋತಿರುವ ಶಾಂತಣ್ಣನಿಗೆ ಸ್ವಜಾತಿ ಹೈಗರಲ್ಲೇ ಕಿಮ್ಮತ್ತಿಲ್ಲ. ಆದರೂ ಎಂಎಲ್‌ಎ ಆಗುವ ಚಟ ಮಾತ್ರ ಕಮ್ಮಿಯಾಗಿಲ್ಲ. ದೇಶಪಾಂಡೆಗೋ ಈ ಶಾಂತಣ್ಣನೆಂಬ ಹವ್ಯಕರ ಗುಲಾಮನೆಂದರೆ ಅಚ್ಚುಮೆಚ್ಚು, ಕೊನೇಕ್ಷಣದಲ್ಲಿ ಭೀಮಣ್ಣನಿಗೆ ವಂಚಿಸಿ ಸೋಗಲಾಡಿ ಶಾಂತನಿಗೆ ದೇಶಪಾಂಡೆ ಕಾಂಗ್ರೆಸ್ ಟಿಕೆಟ್ ತಂದರೂ ಅಚ್ಚರಿಯಿಲ್ಲ ಎಂದು ಕಾಂಗ್ರೆಸ್ ಡೇರೆಯಲ್ಲಿ ಚರ್ಚೆಯಾಗುತ್ತಿದೆ. ಆಗ ಭೀಮಣ್ಣ ಖಂಡಿತ ಜೆಡಿಎಸ್ ಕ್ಯಾಂಡಿಡೇಟು. ಬಿಜೆಪಿಯ ಕಾಗೇರಿಗೆ ಕಾಂಗ್ರೆಸ್ ಭೀಮಣ್ಣನ ಬದಲಿಗೆ ಶಾಂತಣ್ಣನಿಗೇ ಟಿಕೆಟ್ ಕೊಟ್ಟರೆ ಅನುಕೂಲ. ಇದು ಕಾಗೇರಿಯ ಜೀವದ ಗೆಳೆಯ ದೇಶಪಾಂಡೆಗೂ ಗೊತ್ತು.


ಶಾಂತಾರಾಮ ಹೆಗ್ಡೆ

ಸದ್ಯದ ಶಿರ್ಸಿ-ಸಿದ್ಧಾಪುರದ ಟಿಕೆಟ್ ಸಂಭವನೀಯತೆ ಸೂಕ್ಷ್ಮವಾಗಿ ವಿಶ್ಲೇಷಿಸಿದರೆ ಜೆಡಿಎಸ್ ಕಾಂಗ್ರೆಸ್‌ನಿಂದ ಬರುವ 'ಭೂಪ'ನಿಗಾಗಿ ಟಿಕೆಟ್ ಕಾದಿಟ್ಟುಕೊಂಡಂತೆ ಕಾಣಿಸುತ್ತದೆ. ಎತ್ತಿಂದೆತ್ತ ಲೆಕ್ಕಾಚಾರ ಹಾಕಿದರೂ ರವೀಂದ್ರನಾಥ ನಾಯ್ಕ ಯಾನೆ ಎ. ರವೀಂದ್ರನಾಯ್ಕ ಎಂಬ ಶೋಮ್ಯಾನ್ ಜೆಡಿಎಸ್ ಅಭ್ಯರ್ಥಿಯಾಗುವ ಸಾಧ್ಯತೆಯೇ ಹೆಚ್ಚಿದೆ ಅನ್ನಿಸುತ್ತದೆ. ಈ ರವೀಂದ್ರಗೆ ಕಳೆದ ಬಾರಿ ದೇಶಪಾಂಡೆ ವಿರೋಧದ ನಡುವೆಯೂ ಮ್ಯಾಗಿ ಕಾಂಗ್ರೆಸ್ ಟಿಕೆಟ್ ಕೊಡಿಸಿದ್ದರು. ಈತನ ಸೋಲಿಗೆ ದೇಶಪಾಂಡೆ ಬಣ ಅವಿರತವಾಗಿ ಶ್ರಮಿಸಿ ಸಕ್ಸಸ್ ಆಗಿತ್ತು, ರವೀಂದ್ರ 30 ಸಾವಿರದಷ್ಟು ದೊಡ್ಡ ಅಂತರದಿಂದ ಲಾಗಾ ಹಾಕಿದ್ದ. ಈ ಬಾರಿ ಕಾಂಗ್ರೆಸ್‌ನ 'ಪಚಮಾರಿ ನಿರ್ಣಯ' (15 ಸಾವಿರಕ್ಕಿಂತ ಹೆಚ್ಚು ಅಂತರದಿಂದ ಸೋತವರಿಗೆ ಮತ್ತೆ ಟಿಕೆಟ್ ಇಲ್ಲ) ಅಸ್ತ್ರ ಬಳಸಿ ರವಿಗೆ ಟಿಕೆಟ್ ತಪ್ಪಿಸುವ ಸಕಲ ಸಿದ್ಧತೆ ನಡೆದಿದೆ. ಈಗಾಗಲೇ ದೇಶಪಾಂಡೆ ರವೀಂದ್ರನನ್ನು ಕಾಂಗ್ರೆಸ್‌ನಲ್ಲಿ ಮೂಲೆಗೊತ್ತಿಟ್ಟುಬಿಟ್ಟಿದ್ದಾರೆ. ಆತ ಕಾಂಗ್ರೆಸ್‌ನಲ್ಲಿ ಇದ್ದೂ ಇಲ್ಲದಂತಿದ್ದಾನೆ. ಹೀಗಾಗಿ ಆತನಿಗೆ ಜೆಡಿಎಸ್ ಮುಳುಗುವವನಿಗೆ ಹುಲ್ಲುಕಡ್ಡಿ ಆಸರೆಯಾದಂತಾಗುವ ಸಾಧ್ಯತೆಯೇ ಹೆಚ್ಚು! ಗತಿಗೇಡಿ ಜೆಡಿಎಸ್‌ಗೂ ರವೀಂದ್ರನೆಂದರೆ ಹಿತವಾಗಬಲ್ಲದು!


ಹೆಗಡೆಜೀ

ಈ ಟಿಕೆಟ್ ಯೋಗಾಯೋಗದ್ದೇ ಈಗ ಜಿಲ್ಲೆಯ ರಾಜಕಾರಣದಲ್ಲಿ ರೋಚಕ ಚರ್ಚೆಯ ಸಂಗತಿಯಾಗಿ ಹೋಗಿದೆ!

• ನಹುಷ

ಡಿವಿ-ಯಡ್ಡಿ ಪತ್ರಾರೋಪ

ಮುಖ್ಯಮಂತ್ರಿ ಡಿ.ವಿ.ಸದಾನಂದ ಗೌಡ ಮತ್ತು ...ಜಿ ಮುಮಂ ಯಡಿಯೂರಪ್ಪ ನಡುವಿನ ಗುದ್ದಾಟ ...ಗ ಮತ್ತೊಂದು ಹಂತಕ್ಕೇರಿದೆ. ಡಿವಿ ಮತ್ತು ಬಿಜೆಪಿಯ ...ಾಧ್ಯಕ್ಷ ಕೆ.ಎಸ್.ಈಶ್ವರಪ್ಪ ದೆಹಲಿಯಲ್ಲಿರುವ ಚೆಡ್ಡಿಗಳ ...ಯಕರಿಗೆ ಯಡ್ಡಿ ಮತ್ತು ಅವರ ಬೆಂಬಲಿಗರ ವಿರುದ್ಧ ...ರು ಸಲ್ಲಿಸಿದ್ದಾರೆ. ಅದಕ್ಕೆ ಪ್ರತ್ಯುತ್ತರವಾಗಿ ಈಗ ಅದೇ ...ವಿ ಮತ್ತು ಈಶ್ವರಿ ವಿರುದ್ಧ ತಮ್ಮದೇ ...ರೋಪಗಳ ಪಟ್ಟಿಯನ್ನು ನೀಡಲು ...ಡ್ಡಿಯ ಮೊದಲನೆ ಆಪ್ತೆ ಶೋಭಾ ...ತ್ತು ಎರಡನೆ ಆಪ್ತೆ ಭಾರತಿ ಶೆಟ್ಟಿ ...ಜಧಾನಿಗೆ ದೌಡಾಯಿಸಿದ್ದಾರೆ. ಆ ...ಬ್ಬರು ಮಹಿಳೆಯರೊಂದಿಗೆ ಲೆಹರ್ ...ಗ್ ಎಂಬ ಯಡ್ಡಿಯ ಖಜಾಂಚಿ ಕೂಡ ...ೋಗಿದ್ದಾನೆ.

ಈ ಎರಡೂ ಬಣಗಳ ಪರಸ್ಪರ ...ಾಟವು ಮತ್ತೊಮ್ಮೆ ಬಿಜೆಪಿಯ ...ಕಮಾಂಡನ್ನು ಪೀಕಲಾಟದಲ್ಲಿ ...ುಕಿಸಿದೆ. ಇತ್ತ ಡಿವಿಯನ್ನು ...ಟ್ಟಿಕೊಂಡಿರುವುದಕ್ಕೂ ಆಗುವುದಿಲ್ಲ, ...ತ ಯಡ್ಡಿಯನ್ನು ಕೈಬಿಡಲೂ ...ಧ್ಯವಿಲ್ಲ ಎಂಬ ಗೊಂದಲ ಹಿರಿಯ ಚೆಡ್ಡಿಗಳದ್ದು.

ಒಂದೆಡೆ ಸಿಬಿಐ ತನಿಖೆ ಎಂಬ ಬೆದರಿಕೆ, ಇನ್ನೊಂದೆಡೆ ...ವಿ ಮತ್ತು ಈಶ್ವರಿಯ ದ್ರೋಹ, ಮಗದೊಂದೆಡೆ ...ಕ್ಷ ಬೆನ್ನಿಗಿದ್ದ ಶಾಸಕರು ಒಬ್ಬೊಬ್ಬರಾಗಿ ನಾಪತ್ತೆ ...ಗುತ್ತಿರುವುದು ಯಡ್ಡಿಯನ್ನು ಕಂಗೆಡಿಸಿದೆ. ಅಧಿಕಾರ ...ಕ್ಷ ಕೈಯಿಂದ ದೂರ ಸರಿದಷ್ಟೂ ಅಸಹಾಯಕ ...ಗುತ್ತಿರುವ ಯಡ್ಡಿ ದಿನಕ್ಕೊಂದು ದಿಕ್ಕಿಲ್ಲದ ಹೇಳಿಕೆ ...ಡುತ್ತಿದ್ದಾನೆ.

ರಾಜ್ಯ ಬಿಜೆಪಿಯ ಅನಭಿಷಕ್ತ ದೊರೆ ತಾನೆಂದು ...ದೆ ಬೀಗುತ್ತಿದ್ದ ಯಡ್ಡಿ ಹೀಗೆ ಹಂತಹಂತವಾಗಿ ವೀಕ್ ...ಗುತ್ತಿರುವುದನ್ನು ಗಮನಿಸಿಯೇ ಡಿವಿ ಮತ್ತು ಈಶ್ವರಿ ...ನ್ನೆ ಯಡ್ಡಿ ಬಣಕ್ಕೆ ಕೊಡಲಿ ಏಟನ್ನು ನೀಡಲು ...ಂದಾದರು. ಅವರ ತಂತ್ರದಲ್ಲಿ ಕೊಡಲಿಯಾಗಿ ರೂಪ ...ಳಿದ್ದು ಅವರಿಬ್ಬರು ಜಂಟಿಯಾಗಿ ಬಿಜೆಪಿ ಹೈಕಮಾಂಡಿಗೆ ...ದೆದ ಪತ್ರ.


ಆ ಪತ್ರದಲ್ಲಿ ಅವರಿಬ್ಬರೂ ಯಡ್ಡಿ ಮತ್ತು ಆತನ ...ಬಲಿಗರ ಅಸಹಕಾರಗಳನ್ನು, ಅವಮಾನಗಳನ್ನು ಪಟ್ಟಿ ...ಮಾಡಿದ್ದಾರೆ. ಕಳೆದ ವರ್ಷ ಭ್ರಷ್ಟಾಚಾರದ ವಿರುದ್ಧ ಬಿಜೆಪಿ ...ಯಕ ಅಡ್ವಾನಿ ಮತ್ತೊಂದು ರಥವನ್ನೇರಿ ದೇಶ ಸುತ್ತುತ್ತಾ ...ಗಳೂರಿಗೆ ಬಂದಾಗ ಯಡ್ಡಿಯ ಬಣ ಅಡ್ವಾನಿಯ ...ರ್ವಜನಿಕ ಸಭೆಗೆ ಬಹಿಷ್ಕಾರ ಹಾಕಿದ್ದು ಅಡ್ವಾನಿಯ ...ನ್ನು ಅವಮಾನಿಸಿದಕ್ಕೆ ಸಮಾನವಲ್ಲವೇ ಎಂಬುದು ...ವಿ-ಈಶ್ವರಿಯ ಮೊದಲನೆ ಪಾಯಿಂಟು.

ಫೆಬ್ರವರಿಯಲ್ಲಿ ಎರಡು ದಿನಗಳ ಕಾಲ ...ಂತನ-ಮಂಥನ ನಡೆಸಲು ಬಿಜೆಪಿಯ ರಾಷ್ಟ್ರಾಧ್ಯಕ್ಷ ನಿತಿನ್ ...ಡ್ಕರಿ ಬೆಂಗಳೂರಿಗೆ ಬಂದಿದ್ದರು. ಆ ಸಭೆಯ ಉದ್ದೇಶ ...ಜ್ಯದಲ್ಲಿ ಹೇಗೆ ಬಿಜೆಪಿಯನ್ನು ಬಲಗೊಳಿಸುವುದು ...ಬುದನ್ನು ಚರ್ಚಿಸುವುದಾಗಿತ್ತು. ಆದರೆ ಯಡ್ಡಿ ತನ್ನನ್ನು ...ತ್ತೆ ಮುಖ್ಯಮಂತ್ರಿ ಮಾಡಬೇಕೆಂದು ಪಟ್ಟು ...ಡಿದಿದ್ದರಿಂದ ಎರಡು ದಿನಗಳ ಕಾಲ ನಡೆಯಬೇಕಿದ್ದ ...ಸಭೆ ಕೇವಲ ಎರಡು ಗಂಟೆಗಳಲ್ಲಿ ಅಂತ್ಯ ಕಂಡಿತ್ತು. ...ದು ಬಿಜೆಪಿಯ ರಾಷ್ಟ್ರಾಧ್ಯಕ್ಷ ಗಡ್ಕರಿಗೆ ಯಡ್ಡಿ ಮಾಡಿದ ...ವಮಾನವಲ್ಲವೇ ಎಂಬುದು ಎರಡನೆ ಪಾಯಿಂಟು.

ರಾಜ್ಯದಲ್ಲಿ ಬಿಜೆಪಿಯನ್ನು ಕಟ್ಟಿ ಬೆಳೆಸಿದ್ದು ಡಾ.ವಿ.ಎಸ್. ...ಚಾರ್ಯ. ಮಾತ್ರವಲ್ಲ, ಮೊದಲ ಬಾರಿಗೆ ಮಂಗಳೂರಿನ ...ುನಿಸಿಪಾಲ್ಟಿಯಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತಂದವರು ...ದೇ ಆಚಾರ್ಯರು. ಆರೆಸ್ಸೆಸಿನಲ್ಲಿ ಮತ್ತು ಬಿಜೆಪಿಯಲ್ಲಿ ...ರಿಯ ನಾಯಕರಾಗಿದ್ದ ಆಚಾರ್ಯ ...ರಿಕೊಂಡ ನಂತರ ನಡೆದ ವಿಧಾನ ...ಭೆಯ ಅಧಿವೇಶನಕ್ಕೆ ಬಹಿಷ್ಕಾರ ಹಾಕುವ ...ಮೂಲಕ ಯಡ್ಡಿ ಬಣ ಆಚಾರ್ಯರಿಗೆ ...ವಮಾನ ಮಾಡಿತು ಎಂಬುದು ...ಮೂರನೆ ಪಾಯಿಂಟು.


ಮುಖ್ಯಮಂತ್ರಿ ಆದನಂತರ ಸದಾನಂದ ...ಡರು ತೆರವು ಮಾಡಿದ್ದ ಉಡುಪಿ-...ಕಮಗಳೂರು ಲೋಕಸಭೆ ಕ್ಷೇತ್ರದಲ್ಲಿ ...ದೆದ ಉಪ ಚುನಾವಣೆಯಲ್ಲಿ ಪಕ್ಷದ ...ಭ್ಯರ್ಥಿ ಸುನೀಲ್ ಕುಮಾರನ ಪರ ಯಡ್ಡಿ ...ಚಾರಕ್ಕೆ ಹೋಗಲಿಲ್ಲ, ಆ ಮೂಲಕ ...ಂಗ್ರೆಸ್ ಅಭ್ಯರ್ಥಿ ಜಯಪ್ರಕಾಶ್ ಹೆಗ್ಡೆಯ ಗೆಲುವಿಗೆ ...ರಣರಾದರಲ್ಲದೆ ಬಿಜೆಪಿಗೆ ಆದ ಮುಖಭಂಗಕ್ಕೂ ...ೊಣೆಗಾರರು. ಇದು ಪಕ್ಷದ ನಿಯಮಗಳ ...ಲ್ಲಂಘನೆಯಲ್ಲವೇ ಎಂಬುದು ನಾಲ್ಕನೆ ಪಾಯಿಂಟು.

ಜೆಲ್ಲರೊಂದಿಗೆ ಯಡ್ಡಿ ಪರ ಇರುವ ಸಚಿವರು ...ಮಂ ಡಿವಿಯನ್ನು ನಿರ್ಲಕ್ಷಿಸಿ ಹೇಳಿಕೆಗಳನ್ನು ಕೊಡು...ವುದು, ರಾಜ್ಯಸಭೆಗೆ ನಡೆದ ಚುನಾವಣೆಯಲ್ಲಿ ...ಜಿ.ಪುಟ್ಟಸ್ವಾಮಿ ಎಂಬಾತನನ್ನು ಪಕ್ಷದ ಅಧಿಕೃತ ...ಭ್ಯರ್ಥಿಯ ಎದುರು ಬಂಡಾಯ ಅಭ್ಯರ್ಥಿಯಾಗಿ ನಿಲ್ಲಿಸಿದ್ದು, ಸಾರ್ವಜನಿಕ ಸಭೆಗಳಲ್ಲಿ ಯಡ್ಡಿ ಮತ್ತು ಆತನ ಪಟಾಲಂ ಬಿಜೆಪಿಯವರ ವಿರುದ್ಧವೇ ವಾಗ್ದಾಳಿ ನಡೆಸುವುದು, ಇವೆಲ್ಲ ಪಕ್ಷ ವಿರೋಧಿ ಚಟುವಟಿಕೆಗಳಲ್ಲವೇ ಎಂಬುದು ಇತರೆ ಪಾಯಿಂಟುಗಳು.



ಅದೆಲ್ಲಕ್ಕಿಂತ ಮುಖ್ಯವಾಗಿ ಯಡ್ಡಿಯ ಆಪ್ತೆ ಶೋಭಾ ಕರಂದ್ಲಾಜೆ ಮತ್ತು ಸಖ ಬಸವರಾಜು ಬೊಮ್ಮಾಯಿ ಕಾಂಗ್ರೆಸ್ ಜೊತೆ ಸೇರಿಕೊಂಡು ಬಿಜೆಪಿಯ ಸರ್ಕಾರವನ್ನು ಉರುಳಿಸಲು ಸಂಚು ರೂಪಿಸುತ್ತಿದ್ದಾರೆ ಎಂಬುದು ಕೊನೆಯ ಮತ್ತು ಅತಿ ಡೇಂಜರಸ್ ಪಾಯಿಂಟು.

ಡಿವಿ ಮತ್ತು ಈಶ್ವರಿ ಹೈಕಮಾಂಡಿಗೆ ಸಲ್ಲಿಸಿದ್ದ ಈ ದೂರಿನ ಪತ್ರದ ಪ್ರತಿ ಅದು ಹೇಗೋ ಯಡ್ಡಿ ಗ್ಯಾಂಗ್‌ನ ಕೈಗೆ ಸಿಕ್ಕಿಬಿಟ್ಟಿತು. ಅದನ್ನು ನೋಡಿ ಯಡ್ಡಿ ಮತ್ತು ಶೋಭಾ ಕೊತಕೊತ ಕುದಿಯಲಾರಂಭಿಸಿದರು. ಕೂಡಲೇ ಶೋಭಾ ಮತ್ತು ಭಾರತಿ ಶೆಟ್ಟಿಯನ್ನು ದೆಹಲಿಗೆ ಅಟ್ಟಿದ ಯಡ್ಡಿ ಅವರಿಬ್ಬರೊಂದಿಗೆ ಡಿವಿ ಮತ್ತು ಈಶ್ವರಿಯ ವಿರುದ್ಧದ ದೂರುಗಳ ಪಟ್ಟಿಯನ್ನು ಕಳುಹಿಸಿದ್ದಾನೆ.



ಬಸವರಾಜ್

ಜೆಡಿಎಸ್‌ನ ಪಿತಾಮಹ ದೇವೇಗೌಡರ ತಾಳಕ್ಕೆ ಡಿವಿ ಕುಣಿಯುತ್ತಿರುವುದು ಪಕ್ಷ ದ್ರೋಹ ಕೆಲಸವಲ್ಲವೇ? ಯಡ್ಡಿಯ ಗೋಲ್‌ಮಾಲ್‌ಗಳನ್ನು ಕುರಿತ ದಾಖಲೆಗಳನ್ನು ಯಡ್ಡಿಯ ವೈರಿಗಳಿಗೆ ಡಿವಿ ಸರಬರಾಜು ಮಾಡುತ್ತಿರುವುದು ನ್ಯಾಯವೇ? ಸಚಿವ ಸಂಪುಟವನ್ನು ವಿಸ್ತರಿಸುತ್ತೇನೆ ಎಂದು ಪದೇ ಪದೇ ಹೇಳುವ ಮೂಲಕ ರಾಜ್ಯ ಬಿಜೆಪಿಯಲ್ಲಿ ಗುಂಪುಗಾರಿಕೆ ಹುಟ್ಟು ಹಾಕುತ್ತಿರುವುದು ಸರಿಯೇ? ಇಂತಹದ್ದೇ ಪ್ರತಿ ಪಾಯಿಂಟ್‌ಗಳನ್ನು ಶೋಭಮ್ಮ ಹೈಕಮಾಂಡ್ ಮುಂದೆ ಮಾಡಲಿದ್ದಾರಂತೆ.

ಅದೆಲ್ಲಕ್ಕಿಂತ ಮುಖ್ಯವಾಗಿ ಹೈಕಮಾಂಡನ್ನು ಬೆದರಿಸುವುದೂ ಶೋಭಾಳಿಗೆ ಯಡ್ಡಿ ಕೊಟ್ಟಿರುವ ಅಜೆಂಡಾ. ಬರುವ ಚುನಾವಣೆಯಲ್ಲಿ ಒಕ್ಕಲಿಗನಾದ ಡಿವಿಯನ್ನು ಮುಂದಿಟ್ಟುಕೊಂಡು ಹೋದರೆ ಲೋಕಸಭೆಗೆ ಹಿಂದಿನಂತೆ 19 ಸೀಟುಗಳನ್ನಲ್ಲ, ಐದನ್ನು ಗೆಲ್ಲುವುದೂ ಅಸಾಧ್ಯ. ಯಾಕೆಂದರೆ ಡಿವಿ ಅದೇನೇ ತಿಪ್ಪರಲಾಗ ಹಾಕಿದರೂ ಒಕ್ಕಲಿಗರು ಬೆಂಬಲಿಸುವುದು ಬಿಜೆಪಿಯನ್ನಲ್ಲ ಬದಲಿಗೆ ದೇವೇಗೌಡ-ಕುಮಾರಣ್ಣರ ಜೆಡಿಎಸ್ ಪಕ್ಷವನ್ನು. ಅದೇ ಕಾರಣಕ್ಕೆ ವಿಧಾನಸಭೆಗೆ ಐವತ್ತು ಸೀಟುಗಳು ಬಂದರೆ ಹೆಚ್ಚೆಚ್ಚು.


ಡಿವಿ ಬದಲಾಗಿ ಯಡ್ಡಿ ನೇತೃತ್ವದಲ್ಲಿ ಚುನಾವಣೆಗಳನ್ನು ಎದುರಿಸಿದರೆ ಮುಂದಿನ ಬಾರಿ ಲೋಕಸಭೆಗೆ 19 ಅಲ್ಲದಿದ್ದರೂ 15ಕ್ಕಂತೂ ಮೋಸವಿಲ್ಲ; ವಿಧಾನಸಭೆಗೆ ನೂರಲ್ಲದಿದ್ದರೂ 70 ಸೀಟುಗಳು ಗ್ಯಾರಂಟಿ. ಹೀಗಿರುವಾಗ ನಿಮಗೆ ಯಡ್ಡಿ ಬೇಕೋ ಡಿವಿ ಬೇಕೋ - ಇದು ಯಡ್ಡಿ ಪರವಾಗಿ ಶೋಭಾ ದೆಹಲಿಯಲ್ಲಿ ಬಿಜೆಪಿ ವರಿಷ್ಠರ ಮುಂದೆ ಮಂಡಿಸಿರುವ ಥ್ರೆಟ್.



ಶೋಭಾ

ಸಂಪುಟ ವಿಸ್ತರಣೆ ಎಂಬ ಭೂತ

ಈಗ ಡಿವಿ ಮತ್ತು ಯಡ್ಡಿ ನಡುವಿನ ಹೊಸ ಹಂತದ ಯುದ್ಧಕ್ಕೆ ನಾಂದಿ ಹಾಡಿದ್ದೇ ಸಂಪುಟ ವಿಸ್ತರಣೆ ಎಂಬ ಭೂತ. ಇತ್ತೀಚೆಗೆ ಡಿವಿ ಪದೇಪದೇ "ಈಗ ನನ್ನ ಬಳಿ 20 ಖಾತೆಗಳಿವೆ. ಇವನ್ನೆಲ್ಲ ಏಕಾಂಗಿಯಾಗಿ ನಿಭಾಯಿಸಲು ನನಗೆ ಸಮಯ ಸಿಗುತ್ತಿಲ್ಲ. ಆ ಕಾರಣಕ್ಕೆ ಈ ಖಾತೆಗಳನ್ನು ಮಂತ್ರಿ ಪದವಿ ಆಕಾಂಕ್ಷಿಗಳಿಗೆ ನೀಡಿ ನನ್ನ ಹೊರೆಯನ್ನು ಕಡಿಮೆ ಮಾಡಿಕೊಳ್ಳುತ್ತೇನೆ. ಸದ್ಯದಲ್ಲೇ ಸಂಪುಟವನ್ನು ವಿಸ್ತರಿಸುತ್ತೇನೆ" ಎನ್ನುತ್ತಿದ್ದಾನೆ. ಇದು ಯಡ್ಡಿಗೆ ಸಹಿಸಲು ಅಸಾಧ್ಯವಾಗಿದೆ. ಅದರಲ್ಲೂ, ಸಂಪುಟ ವಿಸ್ತರಣೆಯ ಸಂದರ್ಭದಲ್ಲಿ ಕಳೆದ ನಾಲ್ಕು ವರ್ಷಗಳಿಂದ ಸಚಿವರಾಗಿರುವವರನ್ನು ಕೈಬಿಟ್ಟು ಹೊಸಬರಿಗೆ ಅವಕಾಶ ಕೊಡಬೇಕೆಂದೂ, ಗೂಟದ ಕಾರಿನ ಸೌಲಭ್ಯವನ್ನು ಕಳೆದುಕೊಳ್ಳುವವರನ್ನು ಪಕ್ಷ ಕಟ್ಟುವ ಕೆಲಸಕ್ಕೆ ನಿಯೋಜಿಸಬೇಕೆಂದೂ ಡಿವಿ ಮತ್ತು ಈಶ್ವರಿ ಬಿಜೆಪಿ ಹೈಕಮಾಂಡಿನ ಮುಂದೆ ಇಟ್ಟಿರುವ ಪ್ರಸ್ತಾಪ ಯಡ್ಡಿಗೆ ಮರ್ಮಾಘಾತ ನೀಡಿದೆ.




ಇದು ತನ್ನನ್ನು ನಿಷ್ಕ್ರಿಯಗೊಳಿಸುವ ತಂತ್ರ ಎಂದು ಬಲ್ಲ ಯಡ್ಡಿ ಈಗ ಡಿವಿಯನ್ನು ಶತಾಯಗತಾಯ ಮುಖ್ಯಮಂತ್ರಿ ಗದ್ದುಗೆಯಿಂದ ಇಳಿಸೇ ತೀರುತ್ತೇನೆ ಎಂದು ಶಪಥಗೈದಿದ್ದಾನೆ. "ಹಾಗೊಮ್ಮೆ ನನ್ನ ವಿರುದ್ಧ ಸುಪ್ರೀಂಕೋರ್ಟ್ ಸಿಬಿಐ ತನಿಖೆಗೆ ಆದೇಶಿಸಿದರೂ, ಮುಖ್ಯಮಂತ್ರಿ ಸ್ಥಾನದಲ್ಲಿ ಮುಂದುವರಿಯಲು ಡಿವಿಯನ್ನು ಬಿಡುವುದಿಲ್ಲ, ಆತನ ಬದಲಾಗಿ ಜಗದೀಶ್ ಶೆಟ್ಟರ್ ಮುಖ್ಯಮಂತ್ರಿಯಾಗಲಿ" ಎಂಬುದು ಯಡ್ಡಿಯ ನಿಲುವು.

ಗೂಟದ ಕಾರಿನ ಕನಸಿನಲ್ಲಿ ಆಕಾಂಕ್ಷಿಗಳು

ಸಂಪುಟ ವಿಸ್ತರಣೆ ಕುರಿತ ಡಿವಿಯ ಮಾತುಗಳು ಬಿಜೆಪಿ ಪಕ್ಷದೊಳಗೆ ಹಲವಾರು ಗೊಂದಲಗಳನ್ನು ಸೃಷ್ಟಿಸಿದೆ ಮತ್ತು ಭಿನ್ನಮತ ಚಟುವಟಿಕೆಗಳನ್ನು ತೀವ್ರಗೊಳಿಸಿದೆ. ಸಂಪುಟ ವಿಸ್ತರಣೆಗೆ ಬಿಜೆಪಿ ಹೈಕಮಾಂಡ್ ಗ್ರೀನ್‌ಸಿಗ್ನಲ್ ನೀಡಿದರೆ ಡಿವಿಗೆ ಆನೆಬಲ ಸಿಕ್ಕಿದಂತಾಗುತ್ತದೆ. ಈ ಕಾರಣಕ್ಕಾಗಿಯೇ ಸಂಪುಟ ವಿಸ್ತರಣೆ ಮಾಡುವುದನ್ನು ಯಡ್ಡಿ ಬಣ ತೀವ್ರವಾಗಿ ವಿರೋಧಿಸುತ್ತಿದೆ. ಒಂದುವೇಳೆ ಸಂಪುಟ ವಿಸ್ತರಣೆಗೆ ಅವಕಾಶ ದೊರೆತರೆ ತನ್ನ ಪಾಳೆಯದಲ್ಲಿರುವ ಶಾಸಕರೆಲ್ಲ ರಾತ್ರೋರಾತ್ರಿ ಡಿವಿಯ ಪಾಳೆಯಕ್ಕೆ ಹಾರುತ್ತಾರೆಂಬ ಅರಿವು ಯಡ್ಡಿಗಿದೆ. ಹೀಗಾಗಿ "ವಿಸ್ತರಣೆ ಬೇಕು" ಎಂದು ಡಿವಿ ಹಟ ಹಿಡಿದರೆ ಯಡ್ಡಿ "ಯಾವುದೇ ಕಾರಣಕ್ಕೂ ಈಗ ಸಂಪುಟ ವಿಸ್ತರಣೆ ಮಾಡುವ ಅಗತ್ಯವಿಲ್ಲ, ಸದಾನಂದ ಗೌಡರು ಹೇಳಿಕೇಳಿ ಆಡ್-ಹಾಕ್ ಮುಖ್ಯಮಂತ್ರಿ. ನಾನು ಸದ್ಯದಲ್ಲೇ ಮತ್ತೆ ಮುಖ್ಯಮಂತ್ರಿ ಆಗುತ್ತೇನೆ. ಆನಂತರ ನಾನೇ ಸ್ವತಃ ಸಂಪುಟವನ್ನು ವಿಸ್ತರಿಸುತ್ತೇನೆ" ಎಂದು ಹೇಳುತ್ತಿದ್ದಾರೆ.

ಡಿವಿ ಅವರು ಹಲವಾರು ಶಾಸಕರಲ್ಲಿ ಮಂತ್ರಿ ಸ್ಥಾನದ ಬಗ್ಗೆ ಆಸೆ ಹುಟ್ಟಿಸಿ ಅವರನ್ನು ಭಿನ್ನಮತೀಯ ಚಟುವಟಿಕೆಗಳಿಂದ ದೂರವಿರಿಸುವ ತಂತ್ರ ರೂಪಿಸಿದ್ದಾರೆ. ಸಂಪುಟ ವಿಸ್ತರಣೆಗೆ ಹೈಕಮಾಂಡ್ ಗ್ರೀನ್‌ಸಿಗ್ನಲ್ ಕೊಟ್ಟರೆ ಯಡ್ಡಿಯ ಒಂದಿಷ್ಟು ಬೆಂಬಲಿಗರಿಗೆ ಮಂತ್ರಿ ಸ್ಥಾನ ನೀಡುವ ಮೂಲಕ ಯಡ್ಡಿಯ ಜಂಘಾಬಲವನ್ನು ಉಡುಗಿಸುವುದು ಈಶ್ವರಪ್ಪ ಮತ್ತು ಡಿವಿಯ ಸ್ಕೆಚ್. ಸಂಪುಟವನ್ನು ವಿಸ್ತರಿಸುವ ಮೂಲಕ ಯಡ್ಡಿಯನ್ನು ನಿಶ್ಶಕ್ತನನ್ನಾಗಿ ಮಾಡಿದರೆ ತಾನು ಸುಗಮವಾಗಿ ಆಡಳಿತ ನಡೆಸಬಹುದು ಎಂಬುದು ಡಿವಿಯ ಲೆಕ್ಕಾಚಾರ.



ಅಷ್ಟೇ ಅಲ್ಲ, ಯಡ್ಡಿಯ ಕಟ್ಟಾ ಬೆಂಬಲಿಗರೂ, ಸಚಿವರೂ ಆಗಿರುವ ಬಸವರಾಜ ಬೊಮ್ಮಾಯಿ, ಶೋಭಾ ಕರಂದ್ಲಾಜೆ, ಉದಾಸಿ, ರೇಣುಕಾಚಾರ್ಯ, ನಿರಾಣಿ ಮೊದಲಾದವರನ್ನು ಸಂಪುಟದಿಂದ ಹೊರಗಿಟ್ಟು, ಅವರನ್ನೆಲ್ಲ ಪಕ್ಷದ ಸಂಘಟನೆಯಲ್ಲಿ ತೊಡಗಿಸಬೇಕು ಎಂಬ ತಂತ್ರವನ್ನೂ ಡಿವಿ ಮತ್ತು ಈಶ್ವರಿ ಹೆಣೆದಿದ್ದಾರೆ. ಅದಕ್ಕೆ ಅವರಿಬ್ಬರೂ ಕೊಡುತ್ತಿರುವ ಸಬೂಬು "ಈ ರೀತಿ ಮಾಡುವುದರಿಂದ ಕಳೆದ ನಾಲ್ಕು ವರ್ಷಗಳಿಂದ ಮಂತ್ರಿ ಸ್ಥಾನದಿಂದ ವಂಚಿತರಾದವರಿಗೆ ಅವಕಾಶ ನೀಡಿದಂತಾಗುತ್ತದೆ. ಜೊತೆಗೆ ಕೊಂಚಮಟ್ಟಿಗೆ ಭಿನ್ನಮತವನ್ನು ಮಟ್ಟ ಹಾಕಿದಂತೆಯೂ ಆಗುತ್ತದೆ" ಎಂಬುದು.

ಆದರೆ ಈ ಸೂತ್ರ ಅನುಷ್ಠಾನಕ್ಕೆ ಬಂದರೆ ಬಹುತೇಕ ಯಡ್ಡಿಯ ಪರಮಾತ್ಮರ ಅಧಿಕಾರ ತ್ಯಾಗ ಮಾಡಲೇಬೇಕಾಗುತ್ತದೆ. ಜೊತೆಗೆ ಸರ್ಕಾರದಲ್ಲಿ ಯಡ್ಡಿಯ ಬೆಂಬಲಿಗರು ಮೂಲೆಗುಂಪಾಗುತ್ತಾರೆ. ಹೀಗಾಗಿ ಯಾವುದೇ ಕಾರಣಕ್ಕೂ ಈ ಸೂತ್ರ ಜಾರಿಗೆ ಬರಬಾರದು ಎಂಬುದು ಯಡ್ಡಿ ಬಣದ ನಿಲುವಾಗಿದೆ.

ಯಡ್ಡಿ ಬಂಧನಕ್ಕೆ ಕಾದಿರುವ ಹೈಕಮಾಂಡ್

ಸಂಪುಟ ವಿಸ್ತರಣೆಗೆ ಡಿವಿ ಒಂದು ತಿಂಗಳಿನಿಂದಲೂ ಅನುಮತಿ ಕೇಳುತ್ತಿದ್ದರೂ ಈ ಬಗ್ಗೆ ಹೈಕಮಾಂಡ್ ಮುಗುಮ್ಮಾಗಿರುವುದು ಡಿವಿಗೆ ಬೇಸರ ತಂದಿದೆ. ಆದರೆ ವಾಸ್ತವವಾಗಿ ದೆಹಲಿಯಲ್ಲಿರುವ ಬಿಜೆಪಿ ನಾಯಕರು ಡಿವಿ ಮತ್ತು ಯಡ್ಡಿಗಿಂತಲೂ ಈ ಕುರಿತು ಹೆಚ್ಚು ಚಿಂತನ-ಮಂಥನ ನಡೆಸಿ ಕಾದುನೋಡುವ ತಂತ್ರವನ್ನು ಅನುಸರಿಸುತ್ತಿದೆ.

ಒಂದುವೇಳೆ ಯಡ್ಡಿಯನ್ನು ಸಿಬಿಐ ಬಂಧಿಸಿದರೆ ತಮ್ಮ ತಲೆನೋವು ಆರಾಮವಾಗಿ ಕಡಿಮೆಯಾಗುತ್ತದೆ. ಆಗ ಸುಲಭವಾಗಿ ಸಂಪುಟ ವಿಸ್ತರಣೆಗೆ ಮಾಡಬಹುದು ಎಂಬುದು ದೆಹಲಿ ನಾಯಕರ ಲೆಕ್ಕಾಚಾರ. ಕಳೆದ ಒಂದು ವರ್ಷದಿಂದ ಹೈಕಮಾಂಡಿಗೆ ದೊಡ್ಡ ತಲೆನೋವಾಗಿ ಪರಿವರ್ತನೆಗೊಂಡಿರುವ ಯಡ್ಡಿಯನ್ನು ಯಾವಾಗ ಸಿಬಿಐ ಬಂಧಿಸುತ್ತಾದೋ ಎಂದು ಚಾತಕಪಕ್ಷಿಯಂತೆ ಕಾಯುತ್ತಿದೆ!

ಯಡ್ಡಿ ಮತ್ತೆ ಮುಖ್ಯಮಂತ್ರಿ ಆಗುವುದು ಕಷ್ಟಸಾಧ್ಯ ಎಂಬುದು ಈಗ ಆತನ ಹಿಂಬಾಲಕರಿಗೂ ನಿಧಾನವಾಗಿ ಮನವರಿಕೆಯಾಗಿದೆ. ಹೀಗಾಗಿ ಇದ್ದಷ್ಟು ಕಾಲ ಅಧಿಕಾರವನ್ನು ಅನುಭವಿಸೋಣ ಎಂದು ಅವರಲ್ಲಿ ಕೆಲವರು ನಿರ್ಧರಿಸಿರುವಂತಿದೆ. ಈ ಕಾರಣಕ್ಕೇ ಸದಾ ಯಡ್ಡಿಯ ಪರ ಕೂಗಾಡುತ್ತಿದ್ದ ನರ್ಸ್ ರೇಣುಕಾಚಾರಿ ಎಂಬ ಅಬಕಾರಿ ಸಚಿವ ಇತ್ತೀಚೆಗೆ ತುಂಬಾ ಮೌನವಾಗಿದ್ದಾನೆ. ಡಿ.ವಿ. ಸಂಪುಟದಲ್ಲಿ ಹಿರಿಯ ಮಂತ್ರಿಯಾಗಿರುವ ಉದಾಸಿ "ಈ ರಾಜಕೀಯದಿಂದ ಬೇಸತ್ತಿರುವ ನಾನು ಮಂತ್ರಿ ಪದವಿಯನ್ನು ತ್ಯಾಗಮಾಡಲೂ ಸಿದ್ಧನಿದ್ದೇನೆ" ಎಂದು ಘೋಷಿಸಿದ್ದಾನೆ. ಕೈಗಾರಿಕೋದ್ಯಮ ಸಚಿವ ನಿರಾಣಿ ಕೂಡ ಇತ್ತೀಚೆಗೆ ಡಿವಿ ಜೊತೆ ಸ್ನೇಹದಿಂದ ವರ್ತಿಸುತ್ತಿರುವುದು ನೋಡಿದರೆ ಆತ ಕೂಡ ಸದ್ಯದಲ್ಲೇ ಬಣ್ಣ ಮತ್ತು ಬಣ ಬದಲಾಯಿಸುವ ಸಾಧ್ಯತೆ ಇದೆ. ಸದ್ಯಕ್ಕೆ ಇಂಧನ ಸಚಿವೆ ಶೋಭಾ ಕರಂದ್ಲಾಜೆ ಮತ್ತು ನೀರಾವರಿ ಸಚಿವ ಬಸವರಾಜ ಬೊಮ್ಮಾಯಿ ಮಾತ್ರ ಇನ್ನು ಯಡ್ಡಿಗೆ ನಿಷ್ಠರಾಗಿದ್ದಾರೆ.

ಈ ಎಲ್ಲ ಗೊಂದಲಗಳ ನಡುವೆಯೇ ಡಿವಿ ಮತ್ತು ಈಶ್ವರಿ ಜಂಟಿಯಾಗಿ ಅನೇಕ ಶಾಸಕರನ್ನು ಮಾತನಾಡಿಸಿ ಅವರೆಲ್ಲರಲ್ಲಿ ಮಂತ್ರಿ ಸ್ಥಾನದ ಆಸೆಯನ್ನು ಹುಟ್ಟುಹಾಕಿದ್ದಾರೆ. ಈಗ ಮಂತ್ರಿ ಸ್ಥಾನದ ಕನಸು ಕಾಣುತ್ತಿರುವ ಶಾಸಕರಲ್ಲಿ ಸಿ.ಟಿ. ರವಿ, ಜೀವರಾಜ್, ಸೊಗಡು ಶಿವಣ್ಣ, ಅಂಗಾರ, ಬೆಳ್ಳುಬ್ಬಿ, ಹರೀಶ್ ಮತ್ತು ಅಪ್ಪುಪಟ್ಟಣ ಶೆಟ್ಟಿ ಪ್ರಮುಖರು. ಇವರ ಜೊತೆಜೊತೆಗೆ ಸದನದಲ್ಲಿ ನೀಲಿ ಚಿತ್ರ ನೋಡಿ ಸಿಕ್ಕಿ ಬಿದ್ದ ಬ್ಲೂ ಬಾಯ್ಸ್ ಲಕ್ಷ್ಮಣ ಸವದಿ ಮತ್ತು ಕೃಷ್ಣ ಪಾಲೇಮಾರ್ ಪುನಃ ಸಂಪುಟ ಸೇರುವ ಕಸರತ್ತು ನಡೆಸುತ್ತಿದ್ದಾರೆ. ಯಡ್ಡಿಯ ಪಕ್ಕಾ ಬೆಂಬಲಿಗರಾದ ಇವರಿಬ್ಬರನ್ನು ಸಂಪುಟಕ್ಕೆ ಪುನಃ ಸೇರಿಸಿಕೊಳ್ಳುವ ಮೂಲಕ ಯಡ್ಡಿಯ ಶಕ್ತಿಯನ್ನು ಕುಗ್ಗಿಸಲು ಡಿವಿ ತುದಿಗಾಲಲ್ಲಿ ನಿಂತಿದ್ದಾರೆ.

ಆದರೆ ವಾಸ್ತವದಲ್ಲಿ ಯಡ್ಡಿಯನ್ನು ಮೂಲೆಗುಂಪು ಮಾಡುವುದು ಡಿವಿ ಮತ್ತು ಈಶ್ವರಿಯಿಂದ ಸಾಧ್ಯವೇ?

ಅಕಸ್ಮಾತ್ ಸಂಪುಟ ವಿಸ್ತರಣೆಗೆ ಬಿಜೆಪಿಯ ಹೈಕಮಾಂಡ್ ಗ್ರೀನ್‌ಸಿಗ್ನಲ್ ಕೊಟ್ಟಿತು ಎಂದಿಟ್ಟುಕೊಳ್ಳಿ. ಆಗ ಸಚಿವ ಸ್ಥಾನದಿಂದ ವಂಚಿತರಾಗುವ ಯಡ್ಡಿಯ ಬೆಂಬಲಿಗರಲ್ಲದೆ, ಗೂಟದ ಕಾರ್ ಆಕಾಂಕ್ಷಿಗಳು ಚೆಡ್ಡಿ ವಲಯದಲ್ಲಿ ಸಾಕಷ್ಟು ಮಂದಿ ಇದ್ದಾರೆ. ಆಗ ಅವರೆಲ್ಲರೂ ಕೈಜೋಡಿಸಿ ಕೆಲವೇ ದಿನಗಳಲ್ಲಿ ಡಿವಿಯ ಸರ್ಕಾರವನ್ನು ಕೆಳಗಿಳಿಸಿದರೂ ಅಚ್ಚರಿಯಿಲ್ಲ.

ಗಂಡಹೆಂಡತಿ ಜಗಳದಲ್ಲಿ ಕೂಸು ಬಡವಾಯಿತು ಎಂಬ ಮಾತಿದೆ. ಆದರೆ ಯಡ್ಡಿ-ಡಿವಿ ಜಗಳದಲ್ಲಿ ಕರ್ನಾಟಕಕ್ಕೆ ಈ ನಾಲಾಯಕ್ ಬಿಜೆಪಿ ಚೆಡ್ಡಿಗಳಿಂದ ಮುಕ್ತಿ ಸಿಕ್ಕರೆ ಕಣ್ಣೀರು ಹಾಕುವವರು ಯಾರು?!

• ವರದಿಗಾರ

ಮಾಯಾವತಿಯ ಮಾಜಿ ದರ್ಬಾರ್



ಉತ್ತರ ಪ್ರದೇಶದ ವಿಧಾನಸಭಾ ಚುನಾವಣೆಯಲ್ಲಿ ಮಾಯಾವತಿ ಯಾನೆ ಬೆಹನ್‌ಜಿಯ ಬಹುಜನ ಸಮಾಜ ಪಕ್ಷ ಹೀನಾಯವಾಗಿ ಸೋತು ಅಧಿಕಾರ ಕಳೆದುಕೊಂಡದ್ದು ಈಗ ಹಳೆಯ ವಿಷಯ. ಅಲ್ಲೀಗ ಎಸ್.ಪಿ.ಯ ಯಾದವರ ಆಳ್ವಿಕೆ ಶುರುವಾಗಿದೆ. ಆದರೇನಂತೆ ಮಾಯಾವತಿಯ ದರ್ಬಾರಿಗಿನ್ನು ಮುಕ್ತಿ ಬಂದಂತೆ ಕಾಣಿಸುತ್ತಿಲ್ಲ. 'ಮಾಜಿ ಸಿ.ಎಂ. ನಿವಾಸ' ಎಂಬ ಲೇಬಲ್ ಅಂಟಿಸಿ ತನ್ನ ದುಬಾರಿ ಶೈಲಿಗೆ ಅನುಕೂಲವಾಗುವಂತೆ ಬರೋಬ್ಬರಿ 86 ಕೋಟಿ ವೆಚ್ಚದಲ್ಲಿ ಸಿಂಗಾರಗೊಂಡ ಬಂಗಲೆಯ ಒಡತಿಯಾಗುವ ಮೂಲಕ ಮಾಯಾವತಿ ಮತ್ತೊಮ್ಮೆ ಸುದ್ದಿಯಲ್ಲಿದ್ದಾರೆ. ಅಷ್ಟೂ ಹಣ ಸರ್ಕಾರದ ಬೊಕ್ಕಸದ್ದೆಂಬುದೇ ಸದ್ಯದ ಭಾರೀ ವಿವಾದ.

ಉತ್ತರ ಪ್ರದೇಶದಲ್ಲಿ ಮಾಜಿ ಮುಖ್ಯಮಂತ್ರಿಗಳಿಗೆ ತಕ್ಕಮಟ್ಟಿನ ಸುಸಜ್ಜಿತ ನಿವಾಸ ನೀಡುವ ಔಪಚಾರಿಕ ಸಂಪ್ರದಾಯ ರೂಢಿಯಲ್ಲಿದೆ. ಸಾಮಾನ್ಯವಾಗಿ ಅಲ್ಲಿ ಮುಖ್ಯಮಂತ್ರಿಯಾಗಿರುವವರು ತಮ್ಮ ಮಾಜಿ ಅವಧಿಗೆ ಸೂಕ್ತವಾಗುವಂತಹ ಸರ್ಕಾರಿ ನಿವಾಸವನ್ನು ಗುರುತಿಸಿಕೊಂಡು ಮಂಜೂರು ಮಾಡಿಕೊಳ್ಳುತ್ತಾರೆ. ಗಟ್ಟಿಗಿತ್ತಿ ಮಾಯಾ ಮೇಮ್‌ಸಾಬ್ ಆರಿಸಿಕೊಂಡು ಸಿಂಗರಿಸಿಕೊಂಡಿರೋದು ಐಷಾರಾಮಿ '13 ಅವೆನ್ಯೂ ಮಾಲ್' ಬಂಗಲೆಯನ್ನು.

ಉತ್ತರ ಪ್ರದೇಶದ ಪಾಲಿಗೆ ಇದೊಂದು ಐಷಾರಾಮಿ ಸರ್ಕಾರಿ ಬಂಗಲೆ. ಈ ಮೊದಲು ಇದು 'ಸ್ಪೀಕರ್ ಹೌಸ್' ಆಗಿತ್ತು. 1995ರಲ್ಲಿ ಪ್ರಥಮ ಬಾರಿಗೆ ಮುಖ್ಯಮಂತ್ರಿಯಾದಾಗ ಮಾಯಾವತಿ ಈ ಬಂಗಲೆಯನ್ನು ತಮ್ಮ ವಾಸ್ತವ್ಯವನ್ನಾಗಿ ಮಾಡಿಕೊಂಡಿದ್ದರು. ಅಲ್ಲಿಂದೀಚೆಗೆ ಅದು ಮಾಯಾವತಿಯ ಖಾಸಾ ಅರಮನೆಯೇ ಆಗಿದೆ.

ಪ್ರಥಮ ಬಾರಿಗೆ ಆ ಬಂಗಲೆ ಹೊಕ್ಕಾಗಲೆ, ಅದು ಸರಿಯಿಲ್ಲಯೆಂಬ ಕಾರಣಕ್ಕೆ 60 ಲಕ್ಷ ವೆಚ್ಚದಲ್ಲಿ ನವೀಕರಣ ಮಾಡಿಸಿದ್ದರು. ಅಧಿಕಾರ ಖಾತ್ರಿಯಿರುವವರೆಗೂ ಮುಖ್ಯಮಂತ್ರಿ ನಿವಾಸವನ್ನಾಗೆ ಉಳಿಸಿಕೊಂಡಿದ್ದ ಮಾಯಾ, ಕಳೆದ ಚುನಾವಣಾ ಫಲಿತಾಂಶದ ವಾಸನೆ ಬಡಿಯುತ್ತಿದ್ದಂತೆ ಅದನ್ನು ಮಾಜಿ ಮುಖ್ಯಮಂತ್ರಿಗಳ ನಿವಾಸವೆಂದು ಘೋಷಿಸಿದ್ದರು.

ಅದ್ಭುತ ಮಾಯಾಬಜಾರ್!

ಮೂಲ ಅವೆನ್ಯೂ ಬಂಗಲೆಯ ವಿಸ್ತೀರ್ಣ 2.5 ಎಕರೆಯಷ್ಟಿತ್ತು. ಆದರೆ ಬೆಹನ್‌ಜಿಗೆ ಅದು ಮತ್ತೂ ಹೆಚ್ಚಾಗಬೇಕೆಂಬ ಬಯಕೆ ಮೂಡಿದ್ದೇ ತಡ 2007ರಲ್ಲಿ ಪಕ್ಕದಲ್ಲಿದ್ದ ಕಮೀಷನರ್ ಆಫೀಸನ್ನು ಡೆಮಾಲಿಷ್ ಮಾಡಿಸಿ ಅದನ್ನೂ ಅವೆನ್ಯೂ ಬಂಗಲೆಯ ಅಕೌಂಟಿಗೆ ಸೇರಿಸಿಕೊಳ್ಳುವ ಮೂಲಕ ವಿಸ್ತೀರ್ಣವನ್ನು 5 ಎಕರೆಗೆ ಏರಿಸಿದರು. ಈ ಅಕ್ರಮ ಒತ್ತುವರಿಯ ಕುರಿತು ವಿವಾದ ಸೃಷ್ಟಿಯಾದಾಗ ಅದನ್ನು 'ಮಾನ್ಯ ಕಾಂಶೀರಾಮ್ ಸ್ಮರಣಾ ವಿಶ್ರಾಂತಿ ಸ್ಥಳ'ದ ನಿರ್ಮಾಣಕ್ಕಾಗಿ ಒತ್ತುವರಿ ಮಾಡಿಕೊಳ್ಳಲಾಗುತ್ತಿದೆಯೆಂದು ಮೇಮ್‌ಸಾಬ್ ಸರ್ಕಾರ ಆದೇಶಿಸಿ ತಣ್ಣಗಾಗಿಸಿತ್ತು.

ಬೆಹನ್‌ಜಿಯ ಅಭಿರುಚಿಗೆ ತಕ್ಕಂತೆ ಸಿದ್ಧವಾಗಿರುವ ಸದ್ಯದ ಅವೆನ್ಯೂ ಬಂಗಲೆಯ ಸುತ್ತ 20 ಅಡಿ ಎತ್ತರದ ಗುಲಾಬಿ ಬಣ್ಣದ ರಾಜಾಸ್ತಾನ್ ಗ್ರಾನೈಟ್‌ನ ಭರ್ಜರಿ ಕಾಂಪೌಂಡನ್ನು ನಿಲ್ಲಿಸಲಾಗಿದೆ. ಅದಕ್ಕೆ ಜೋಡಿಸಲಾಗಿರುವ ಎರಡು ಬೃಹತ್ ಕಂಚಿನ ಗೇಟುಗಳೂ ದುಬಾರಿ ಬೆಲೆಯವು. ವರಾಂಡದಲ್ಲಿರುವ ಎರಡು ಕಿಟಕಿಗಳಿಗೆ ಬುಲೆಟ್ ಪ್ರೂಫ್ ಗಾಜುಗಳನ್ನು ಅಳವಡಿಸಲಾಗಿದ್ದು, ಅದಕ್ಕೆಂದು ಖರ್ಚಾಗಿರುವುದು 15 ಲಕ್ಷ. ಅದೇ ಕ್ಯಾಂಪಸ್‌ನಲ್ಲಿ 14 ಬೆಡ್‌ರೂಮ್‌ಗಳಿರುವ ಎರಡಂತಸ್ತಿನ ಗೆಸ್ಟ್‌ಹೌಸ್ ನಿರ್ಮಿಸಲಾಗಿದೆ. ಪ್ರತಿ ರೂಮೂ ಗುಲಾಬಿ ಬಣ್ಣದ ಇಟಾಲಿಯನ್ ಮಾರ್ಬಲ್ಸ್‌ನಿಂದ ಸಿಂಗರಿಸಿಕೊಂಡಿವೆ.


ಮೊದಲು ಹುಲ್ಲು ಹಾಸಿನ ಲಾನ್ ಇದ್ದದ್ದು ಈಗ ಮಾಯಾವತಿ ಟೇಸ್ಟ್‌ನಂತೆ ಕೆಂಪು ಗ್ರಾನೈಟ್ ಕಲ್ಲಿನ ಹಾಸಾಗಿ ಬದಲಾಗಿದೆ. ಅದರ ನಡುವೆ ಮಾಯಾವತಿ ಮತ್ತು ಕಾನ್ಷಿರಾಮ್‌ರ ಎರಡು 20 ಅಡಿ ಎತ್ತರದ ಕಂಚಿನ ಪ್ರತಿಮೆಗಳನ್ನು ನಿಲ್ಲಿಸಲಾಗಿದೆ. ಪ್ರತಿ ಪ್ರತಿಮೆಗೆ ಖರ್ಚಾಗಿರುವುದು 45 ಲಕ್ಷ. ಈ ಎರಡೂ ಪ್ರತಿಮೆಗಳ ಪಕ್ಕದಲ್ಲಿ ಸಾಲಾಗಿ ಬಿ.ಎಸ್.ಪಿ ಪಕ್ಷದ ಚುನಾವಣಾ ಚಿಹ್ನೆಯಾದ ಆನೆಗಳ ಪ್ರತಿಮೆಗಳನ್ನು ಪ್ರತಿಷ್ಠಾಪಿಸಲಾಗಿದೆ.

ಈ ಕಾಮಗಾರಿಗಳು ಸರಾಗವಾಗಿ ನಡೆದಿದ್ದರೆ ಬಹುಶಃ ಇಷ್ಟೆಲ್ಲ ಖರ್ಚು ಬರುತ್ತಿರಲಿಲ್ಲವೇನೋ, ಆದರೆ ಮಾಯಾವತಿಯ ಟೇಸ್ಟ್ ಏರುಪೇರಾದಂತೆ ಬಿಲ್ಡಿಂಗ್‌ನ ವಿನ್ಯಾಸವೂ ಬದಲಾವಣೆಯಾದ್ದರಿಂದ ನವೀಕರಣ ದುಬಾರಿಯಾಗಿದೆ. ಕಟ್ಟಡದ ಆವರಣದಲ್ಲಿ ಆರು ಅದ್ದೂರಿ ಗೋಪುರಗಳನ್ನು ನಿಲ್ಲಿಸಲಾಗಿತ್ತು. ಅವುಗಳ ರಚನೆ ಬೆಹನ್‌ಜಿಗೆ ತೃಪ್ತಿ ತರಿಸಿಲ್ಲ ಎಂಬ ಕಾರಣಕ್ಕೆ ಅವನ್ನು ಎರಡೆರಡು ಬಾರಿ ಕೆಡವಿ ಮತ್ತೆ ನಿರ್ಮಿಸಲಾಗಿದೆ. ಇದಕ್ಕೆ ಏನಿಲ್ಲವೆಂದರೂ 5 ಕೋಟಿ ನಷ್ಟವಾಗಿರೋದು ಗ್ಯಾರಂಟಿ. ಮುಖ್ಯ ಕಟ್ಟಡದಲ್ಲಿ ಮೇಮ್‌ಸಾಬ್ ಉಪಯೋಗಿಸುವ ಬಾತ್‌ರೂಮ್ ಬರೋಬ್ಬರಿ ಹನ್ನೆರಡು ಬಾರಿ ತನ್ನ ಸ್ವರೂಪ ಬದಲಿಸಿಕೊಂಡಿದೆಯಂತೆ.

ಸತತ ನಾಲ್ಕೈದು ವರ್ಷಕಾಲ ನಡೆದ ನವೀಕರಣಕ್ಕೆ ತುತ್ತಾದ ಅವೆನ್ಯೂ ಬಂಗಲೆ ಮಾಯಾವತಿ ಮಾಜಿ ಆಗುವ ಸಮಯಕ್ಕೆ ಸರಿಯಾಗಿ ಅರಮನೆಯಂತೆ ತಯಾರಾಗಿ ನಿಂತಿತ್ತು. ನೇರವಾಗಿ ಸರ್ಕಾರದಿಂದ ಸುಮಾರು 40 ಕೋಟಿ ಹಣ ಬಿಡುಗಡೆಯಾಗಿದ್ದರೆ ಇನ್ನುಳಿದದ್ದನ್ನು ರಾಜಕೀಯ ನಿರ್ಮಾಣ ನಿಗಮ್, ಲಖ್ನೋ ಅಭಿವೃದ್ಧಿ ನಿಗಮ್ ಮುಂತಾದವುಗಳಿಂದ ಮಂಜೂರು ಮಾಡಿಸಲಾಗಿದೆ. ಈಗಿನ ಎಸ್.ಪಿ. ಸರ್ಕಾರದಲ್ಲಿ ಪಿ.ಡಬ್ಲ್ಯುಡಿ ಸಚಿವನಾಗಿರುವ ಶಿವ್‌ಪಾಲ್ ಯಾದವ್ ಸಲ್ಲಿಸಿದ್ದ ಆರ್.ಟಿ.ಐ ಅರ್ಜಿ ಮಾಯಾವತಿಯ ಈ ಮಾಯಾಜಾಲವನ್ನು ತೆರೆದಿಟ್ಟಿದೆ.

ಮಾಯಾ ದರ್ಬಾರು ಇಷ್ಟಕ್ಕೇ ಮುಗಿಯೋದಿಲ್ಲ, ಪಕ್ಕದಲ್ಲಿರುವ ಲಖ್ನೋ ಹೈಕೋರ್ಟ್‌ನ ಮಾಜಿ ಜಡ್ಜ್ ಜಸ್ಟೀಸ್ ನಿಯಾಮತ್ ಉಲ್ಲಾಗೆ ಸೇರಿದ ಬಂಗಲೆಯನ್ನೂ ಆಕ್ರಮಿಸಿಕೊಳ್ಳಲು ಯೋಜನೆ ರೂಪಿಸಲಾಗಿತ್ತಂತೆ. ಅದೃಷ್ಟವಶಾತ್ ಈ ಬಗ್ಗೆ ಮಾಧ್ಯಮಗಳು ಬೆಳಕು ಚೆಲ್ಲಿದ್ದರಿಂದ ಹೈಕೋರ್ಟ್ ಸದ್ಯಕ್ಕೆ ತಡೆಯಾಜ್ಞೆ ನೀಡಿದೆ. ಮಾಯಾಜಾಲದ ಮುಂದೆ ಈ ತಡೆಯಾಜ್ಞೆಯ ವ್ಯಾಲಿಡಿಟಿ ಎಷ್ಟು ದಿನವೋ ಗೊತ್ತಿಲ್ಲ. ದಲಿತ ಮತ್ತು ದಮನಿತರ ಹೆಸರೇಳಿಕೊಂಡು ಅಧಿಕಾರ ಗಿಟ್ಟಿಸಿಕೊಂಡ ಮಾಯಾವತಿ ನೋಟಿನ ಹಾರ, ದುಬಾರಿ ಜಾಹಿರಾತುಗಳಂತ ಐಷಾರಾಮಿ ಜೀವನದಲ್ಲಿ ಕಳೆದುಹೋದದ್ದು ವಿಪರ್ಯಾಸ. ಆದರೆ ಜನತೆಯ ಹಣವನ್ನು ತಮ್ಮ ವೈಭವಕ್ಕೆಂದು ಬಳಸಿಕೊಂಡಿರುವ ರಾಜಕೀಯದಿಂದ ದಲಿತ ನಾಯಕಿ ಮಾಯಾ ಪ್ರಜಾದ್ರೋಹಿಯ ಇಮೇಜಿನಲ್ಲಿ ಕಾಣಿಸುತ್ತಿದ್ದಾರೆ.


• ಗಿರೀಶ್ ತಾಳೀಕಟ್ಟೆ




ವಿಠಲರ ಪರ ನಿಲ್ಲುವುದು ನಾಡಿನ ಪರ ನಿಂತಂತೆ

ಏಪ್ರಿಲ್ 25 ಹಾಗೂ ಮೇ 2ರ ಸಂಚಿಕೆಗಳಲ್ಲಿನ ಬೆಳ್ತಂಗಡಿಯ ಕುತ್ಲೂರಿನ ಯುವ ವಿದ್ಯಾರ್ಥಿ ವಿಠಲರ ಕುರಿತಾದ ಲೇಖನಗಳನ್ನು ಓದಿ ಇದನ್ನು ಬರೆಯುತ್ತಿದ್ದೇನೆ.

ವಿಠಲರ ಕುಟುಂಬ ಸೇರಿದಂತೆ ಹತ್ತಾರು ಕುಟುಂಬಗಳನ್ನು ರಾಜ್ಯ ಸರ್ಕಾರ ಮತ್ತು ಅಧಿಕಾರಿಗಳು ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಪ್ರದೇಶದಿಂದ ಒಕ್ಕಲೆಬ್ಬಿಸಲು ತಂತ್ರ ರೂಪಿಸಿದ್ದರು. ಇದನ್ನು ಮಾದರಿಯಾಗಿಟ್ಟು ಪ್ರಚಾರ ಮಾಡಿ ಉಳಿದ ಜನರನ್ನು ಮರುಳುಗೊಳಿಸಬೇಕೆಂಬ ಯೋಜನೆ ಅದಾಗಿತ್ತು. ಶೃಂಗೇರಿ, ಕೊಪ್ಪ ಬೆಳ್ತಂಗಡಿ, ಕಾರ್ಕಳ ತಾಲೂಕುಗಳ ಪ್ರದೇಶಗಳನ್ನೊಳಗೊಂಡಿರುವ ಈ ರಾಷ್ಟ್ರೀಯ ಉದ್ಯಾನವನ ಪ್ರದೇಶದಲ್ಲಿ ತಲತಲಾಂತರದಿಂದ ವಾಸಿಸುತ್ತಿರುವ ಜನರನ್ನು ಒಕ್ಕಲೆಬ್ಬಿಸಿ ಆ ಜಾಗವನ್ನು ತಮ್ಮ ಹತೋಟಿಗೆ ತೆಗೆದುಕೊಂಡು ನಂತರ ಗಣಿಗಾರಿಕೆ, ಪ್ರವಾಸೋದ್ಯಮ, ನೀರೋದ್ಯಮ, ಔಷಧೋದ್ಯಮ (ಈ ಪ್ರದೇಶದಲ್ಲಿ ಔಷಧಿ ಸಸ್ಯಗಳು ಹೇರಳವಾಗಿವೆ) ಇತ್ಯಾದಿಗಳಿಗಾಗಿ ಬಹುರಾಷ್ಟ್ರೀಯ ಹಾಗೂ ದಲ್ಲಾಳಿ ಕಂಪೆನಿಗಳಿಗೆ ಈ ಸಮೃದ್ಧ ಪ್ರದೇಶವನ್ನು ಬಿಡಿಸಿಕೊಡುವುದೇ ಸರ್ಕಾರ ಮತ್ತದರ ಅಂಗಗಳ ಉದ್ದೇಶ.



ಅದರಂತೆ ಕೂತ್ಲೂರಿನ ಕೆಲವು ಕುಟುಂಬಗಳನ್ನು ಸೇರಿಸಿ ಜನಸಭೆ ನಡೆಸಿ ಪರ್ಯಾಯ ಭೂಮಿ, ಸವಲತ್ತು ಹಾಗೂ ಲಕ್ಷಗಟ್ಟಲೇ ಪರಿಹಾರ ನೀಡುವುದಾಗಿ ಘೋಷಿಸಿ ನಂಬಿಸಲಾಯಿತು. ಆ ಸಭೆಗೆ ಹಾಜರಾಗಿದ್ದ ಕೆಲವು ಕುಟುಂಬಗಳು ಇದನ್ನು ಒಪ್ಪಿ ಒಕ್ಕಲೇಳಲು ಒಪ್ಪಿಕೊಂಡರು. ಆ ರೀತಿಯಾಗಿ ಆ ಕುಟುಂಬಗಳನ್ನು ಒಕ್ಕಲೆಬ್ಬಿಸಿ ಬೇರೆಡೆಗೆ ತೆರಳಲು ಸೂಚಿಸಿದರು. ಅಲ್ಲಿ ಎಲ್ಲಾ ವ್ಯವಸ್ಥೆ ಮಾಡುವುದಾಗಿ ಭರವಸೆ ನೀಡಲಾಯಿತು. ಇದಕ್ಕೆ ಭಾರಿ ಪ್ರಚಾರ ನೀಡಲಾಯಿತು. ಆದರೆ ತಮ್ಮ ತಲತಲಾಂತರದಿಂದ ನೆಲೆ ನಿಂತಿದ್ದ ಅಡಿಕೆ, ಬಾಳೆ, ವೀಳ್ಯದೆಲೆ, ಭತ್ತಗಳ ತುಂಡು ಭೂಮಿ ಹಾಗೂ ಗುಡಿಸಲುಗಳನ್ನು ಬಿಟ್ಟು ಹೊಸ ಜಾಗ ಹಾಗೂ ಭರವಸೆ ನಂಬಿ ಹೊರಟು ಬಂದಿದ್ದ ಈ ಗಿರಿಜನ ಕುಟುಂಬಗಳಿಗೆ ಇವೆಲ್ಲಾ ಕುತಂತ್ರ ಎಂದು ತಿಳಿಯಲು ಬಹಳ ದಿನ ಬೇಕಾಗಿಲ್ಲ. ಹೊಸ ಜಾಗ ಪರಿಹಾರ ನೀಡುವ ಸೂಚನೆಗಳು ಆಡಳಿತಗಾರರಿಂದ ಕಾಣಲಿಲ್ಲ. ಕೆಲವು ದಿನಗಳು ಕಾದು ಬೇಸತ್ತ ಈ ಕುಟುಂಬಗಳು ಪುನಃ ತಮ್ಮ ಮೂಲ ಜಾಗಗಳಿಗೆ ತೆರಳಿದರು. ಇಂಥವರಲ್ಲಿ ವಿಠಲನ ಕುಟುಂಬವೂ ಕೂಡ ಸೇರಿತ್ತು.



ಈ ಕುಟುಂಬಗಳು ಈ ರೀತಿ ಪುನಃ ತಮ್ಮ ಮೂಲ ನೆಲೆಗೆ ವಾಪಸ್ಸು ಹೋಗಿದ್ದು ಅಧಿಕಾರಿಗಳನ್ನು ಕೆರಳಿಸಿತ್ತು. ಯಾಕೆಂದರೆ ಅವರು ಬಹು ಪ್ರಚಾರಿತ ಕುತಂತ್ರದ ಯೋಜನೆ ಬಯಲಾಗಿತ್ತಲ್ಲ! ಆ ಭಾಗದ ಆದಿವಾಸಿಗಳಲ್ಲೇ ಮೊದಲ ಸ್ನಾತಕೋತ್ತರ ಪದವಿಗಾಗಿ ವ್ಯಾಸಂಗ ಮಾಡುತ್ತಿರುವ ವಿಠಲ ಮತ್ತವರ ಕುಟುಂಬವನ್ನು ಎ.ಎನ್.ಎಫ್. (ಆಂಟಿ ನಕ್ಸಲೈಟ್ ಫೋರ್ಸ್) ಗುರಿಯಿಟ್ಟಿತು. ಯಾಕೆಂದರೆ ಇರುವುದರಲ್ಲಿ ಪ್ರಜ್ಞಾವಂತನಾದ ವಿಠಲರ ಕುಟುಂಬದ ಮೇಲೆ ಕಿರುಕುಳ ನೀಡಿದರೆ ಅಲ್ಲಿ ವಾಸ ಮಾಡುತ್ತಿರುವ ಇತರ ಜನರಲ್ಲೂ ಭಯ ಹುಟ್ಟಿಸಬಹುದು ಎಂಬುದೇ ಇದರ ಹಿಂದಿರುವ ಸರಳ ತರ್ಕ. ಅದರಂತೆ ವಿಠಲರ ಮನೆಯವರಿಗೆ ಬೆದರಿಕೆ ಹಾಕಲು ಪ್ರಾರಂಭಿಸಿದರು. "ನೀವು ಯಾಕೆ ಈ ಜಾಗ ಬಿಟ್ಟುಹೋಗಿಲ್ಲ"! "ಹೋದವರು ಯಾಕೆ ವಾಪಸ್ಸು ಬಂದಿರಿ! ಹೋಗಿ ಇಲ್ಲಿಂದ!" ಎಂದೆಲ್ಲಾ ಬೆದರಿಸಿ ವಿಠಲರ ವೃದ್ಧ ತಂದೆಯ ಮೇಲೆ ಎ.ಎನ್.ಎಫ್ ಹಲ್ಲೆ ನಡೆಸಿ ಅವರ ಕಾಲು ಮುರಿಯಿತು. ಮಂಗಳೂರು ವಿಶ್ವವಿದ್ಯಾಲಯದಲ್ಲಿದ್ದ ವಿಠಲ ಇದನ್ನು ತಿಳಿದು ಆತಂಕಗೊಂಡು ತಂದೆಯನ್ನು ಕಾಣಲು ತನ್ನ ಊರಿಗೆ ತೆರಳಿದಾಗ ಅವರನ್ನು ಹಿಡಿದು ಬೆದರಿಸಿ ತಮ್ಮ ವಶದಲ್ಲಿ ಕಾನೂನು ವಿರುದ್ಧವಾಗಿ ಇಟ್ಟುಕೊಂಡು ಹಿಂಸೆ ನೀಡಲಾಯಿತು. ವಾರಗಟ್ಟಲೆ ಅವರನ್ನು ಅಕ್ರಮವಾಗಿ ತಮ್ಮ ವಶದಲ್ಲಿಟ್ಟುಕೊಂಡು ನಂತರ ಕಾಗಕ್ಕಗುಬ್ಬಕ್ಕ ಕತೆ ಹೆಣೆದು ಮಾವೋವಾದಿಗಳೊಂದಿಗೆ ಸಂಬಂಧ ಇಟ್ಟುಕೊಂಡು ಕಾರ್ಯಕರ್ತನಾಗಿ ಕೆಲಸ ಮಾಡುತ್ತಿರುವ ಆರೋಪ ಹೊರಿಸಲಾಯಿತು. ತಂದೆ–ಮಗನನ್ನು ವೇಣೂರು ಪೊಲೀಸ್ ಮೂಲಕ ನ್ಯಾಯಾಲಯಕ್ಕೆ ಹಾಜರುಪಡಿಸಿದರು. ಕಾಲು ಮುರಿದು ಹೋಗಿದ್ದ ವೃದ್ಧ ತಂದೆಗೆ ವೇಣೂರು ಪೊಲೀಸರೇ ಚಿಕಿತ್ಸೆ ಕೊಡಿಸಿ ಕಾಲಿಗೆ ಪ್ಲಾಸ್ಟರ್ ಹಾಕಿಸಿದ್ದರು. ನ್ಯಾಯಾಲಯದಿಂದ ವಿಠಲರನ್ನು ಮತ್ತೆ ಹದಿನೈದು ದಿನಗಳ ಕಾಲ ಪೊಲೀಸ್ ವಶಕ್ಕೆ ವಿಚಾರಣೆಯ ನೆಪದಲ್ಲಿ ಪಡೆದರು. ವೈದ್ಯಕೀಯ ಚಿಕಿತ್ಸೆಯ ದಾಖಲೆಗಳನ್ನು ನ್ಯಾಯಾಲಯಕ್ಕಾಗಲೀ, ಜೈಲು ಅಧಿಕಾರಿಗಳಿಗಾಗಲೀ, ವಿಠಲರ ತಂದೆ ಅಥವಾ ಇಲ್ಲವೇ ಕುಟುಂಬದವರಿಗಾಗಲಿ ನೀಡಲಿಲ್ಲ. ಅವುಗಳನ್ನೆಲ್ಲಾ ಎ.ಎನ್.ಎಫ್. ಪೊಲೀಸರೇ ಯಾರಿಗೂ ತೋರಿಸದೆ ಎತ್ತಿಟ್ಟುಕೊಂಡಿದ್ದಾರೆ. ಇದರಿಂದಾಗಿ ಮಂಗಳೂರು ಜೈಲಿನಲ್ಲಿ ಪ್ಲಾಸ್ಟರ್ ನೊಂದಿಗೆ ಇದ್ದ ವಿಠಲರ ತಂದೆಯ ವರಿಗೆ ನಂತರದ ಚಿಕಿತ್ಸೆಗೆ ಸಮಸ್ ಯಾಗಿತ್ತು.

ವಿಠಲರಂತಹ ಆದಿವಾಸಿ ಇನ್ನಿತರ ಕುಟುಂಬಗಳ ಜೀವಗಳಿಗೇ ಕೊಳ್ ಇಡುವಂತಹ, ನಾಡಿನ ಭವಿಷ್ಯಕ್ ಮಾರಕವಾಗುವಂತಹ ಯೋಜನೆಗಳ ನೆವದ ಕುತಂತ್ರಗಳನ್ನು ಮಾಡುತ್ತಿರುವ ಈ ಸರ್ಕಾರಗಳು ಮತ್ತವರ ಯಂತ್ರಾಂ ಗಳ ಕ್ರೂರತನಗಳನ್ನು ಗೂಂಡಾಗಿರಿ ಗಳನ್ನು ಬಗ್ಗೆ ನಾಡಿನ ಜನತೆ ಬಹಳ ಮುಖ್ಯವಾಗಿ ಗಮನಿಸಬೇಕು.

ಸರ್ಕಾರಗಳು ರೂಪಿಸಿರುವ ರಾಷ್ಟ್ರೀಯ ಉದ್ಯಾನವನ ಕಾನೂನುಗಳ (ಇದು ಅಂತಾರಾಷ್ಟ್ರೀಯವಾಗಿ ರೂಪಿತ ವಾದದ್ದು) ಪ್ರಕಾರ ಆ ಪ್ರದೇಶ ಹಾಗೂ ಸುತ್ತಳತೆಯ 5-10 ಕಿ.ಮೀ ವ್ಯಾಪ್ತಿಯಲ್ಲಿ ಜನವಸತಿ ಹಾಗೂ ಓಡಾಟ ಇರಲೇಕೂಡದು. ಈ ಯೋಜನೆಯ ಜನವಿರೋಧಿತನ ಹಾಗೂ ನಾಡಿನ ಹಿತಾಸಕ್ತಿಗೆ ಒಡ್ಡುವ ಅಪಾಯಗಳ ಬಗ್ ಅರಿವು ಮೂಡಿಸಿ ಶೃಂಗೇರಿಯಿಂದ ಕೊಲ್ಲೂರಿನವರೆಗೆ ಹಲವಾರು ಪ್ರತಿಭಟನೆಗಳು, ರ್‍ಯಾಲಿಗಳನ್ನು ಜನರು ನಡೆಸಿದ್ದರು. ಶೃಂಗೇರಿಯಲ್ಲಿ ಬೃಹತ್ ಸಮಾವೇಶವನ್ನು ನಡೆಸಲಾಗಿತ್ತು. ಈ ಸಮಾವೇಶದಲ್ಲಿ ನರ್ಮದಾ ಬಚಾವೊ ಆಂದೋಲನದ ಮೇಧಾ ಪಾಟ್ಕರ್‌ರವರು ಭಾಗವಹಿಸಿ ಬೆಂಬಲ ಸೂಚಿಸಿದ್ದರು. ಆದರೂ ಸರ್ಕಾರ ಮತ್ತದರ ಇಲಾಖೆಗಳು ಜನರಿಗೆ ಒಕ್ಕಲೆದ್ದು ಹೋಗಲು ನೋಟಿಸುಗಳನ್ನು, ಕರಪತ್ರಗಳನ್ನು ಶೃಂಗೇರಿಯಿಂದ ಕೊಲ್ಲೂರಿನವರೆಗೆ ಹಂಚಿ ಜನರ ತೋಟ, ಗದ್ದೆಗಳನ್ನು ನಾಶಗೊಳಿಸಲು ಪ್ರಾರಂಭಿಸಿದ್ದರು. ಜನರ ಮೇಲೆ ನೂರಾರು ಸುಳ್ಳು ಕೇಸುಗಳನ್ನು ದಾಖಲಿಸಿ ಜೈಲಿಗೆ, ಕೋರ್ಟಿಗೆ ಅಲೆಸಿದ್ದರು. ಇದು ಈಗಲೂ ಮುಂದುವರಿದಿದೆ. ಇಂತಹ ಸಂದರ್ಭದಲ್ಲೇ ಜನರ ಹೋರಾಟ ಹೊಸ ರೂಪ ಪಡೆದುಕೊಂಡು ಸಶಸ್ತ್ರ ಸಂಘರ್ಷಕ್ಕೆ ನಾಂದಿ ಹಾಡಿತು. ಹೆಣಗಳು ಉರುಳಿ ರಕ್ತ ಹರಿಯತೊಡಗಿತು.

ಈ ಭಾಗದ ಜನರು ಹತ್ತಾರು ವರ್ಷಗಳಿಂದ ಬೇಡಿಕೆ ಇಡುತ್ತಾ ಬಂದಿದ್ದರೂ ಅವರ ನೆಲೆಯ ಹಕ್ಕುಪತ್ರಗಳನ್ನೇ ಇದ ವರೆಗೂ ಸರ್ಕಾರಗಳು ನೀಡಲಿಲ್ಲ. ರಸ್ತೆ ಶಾಲೆ ಆಸ್ಪತ್ರೆ, ಅಂಗನವಾಡಿ, ವಿದ್ಯುಚ್ಛಕ್ತಿ ಇತ್ಯಾದಿಗ ವಿಚಾರ ಕೇಳಲೇಬೇಡಿ. ಅಂಗಡಿ, ಸಂತೆ, ಆಸ್ಪತ್ರೆಗಳಿ ಹೋಗಬೇಕಾದರೆ ಹತ್ತಾರು ಕಿ.ಮೀ ನಡೆದು ಹೋಗಬೇಕಾ ಸ್ಥಿತಿ ಈಗಲೂ ಇದೆ.

ತನ್ನ ನಾಗರಿಕರಿಗೆ ಕನಿಷ್ಠ ಮೂಲಭೂತ ಸೌಲಭ್ಯಗಳನ್ ಒದಗಿಸದ ಸರ್ಕಾರಗಳು ಜನರು ತಾವೇ ಕಟ್ಟಿಕೊಂ ಬದುಕುಗಳನ್ನೇ ಕಸಿಯಲು ಹೊರಟಿವೆ ಎಂದ ಏನೆನ್ನಬೇಕು. ಇಲ್ಲಿನ ಗಿರಿಜನರು ಪ್ರಕೃತಿ ಹಾಗ ಪರಿಸರವನ್ನು ಕಾಪಾಡುತ್ತಾ ತಮ್ಮ ಬದುಕನ್ನು ಕಷ್ಟಪಟ್ ಕಟ್ಟಿಕೊಳ್ಳುತ್ತಿರುವ ಪ್ರಜ್ಞೆಯಿರುವ ಜನ. ನಾಟಾ ಮಾಫಿಯ ಇವರಲ್ಲಿ ಕೆಲವರನ್ನು ತನ್ನ ಅಕ್ರಮ ನಾಟಾ ದಂಧೆ ಸಹಾಯಕರಾಗಿ ಬಳಸಿಕೊಂಡಿರುವುದು ಉಂಟು! ಈ ಈ ನಾಟಾ ಮಾಫಿಯಾ ಹತೋಟಿಯಲ್ಲಿದೆ. ನಾಟ ಮಾಫಿಯಾದೊಂದಿಗೆ ಅರಣ್ಯ ಇಲಾಖೆಯು ಕೆ ಜೋಡಿಸಿದ್ದುದು ಸುಳ್ಳೇನಲ್ಲ. ಇದು ಹತೋಟಿಗೆ ಬಂದಿದ ಮಾವೋವಾದಿ ಗೆರಿಲ್ಲಾ ದಳಗಳ ಓಡಾಟ ಶುರುವಾ ಮೇಲೆ ಎಂದು ಇಲ್ಲಿನ ಜನರೇ ಹೇಳುತ್ತಾರೆ.


ನಾಡಿನ ಜನ ಈಗ ವಾಸ್ತವ ಅಂಶಗಳ ನೆಲೆಯ ಯೋಚಿಸಿ ಕಾರ್ಯಪ್ರವೃತ್ತರಾಗಬೇಕು. ವಿಠಲರಂತಹವ ಬೆಂಬಲಕ್ಕೆ ನಿಲ್ಲಬೇಕು. ವಿಠಲರ ಪ್ರಕರಣ ರಾಷ್ಟ್ರೀಯ ಮಟ್ಟಕ್ಕೆ ಹೋಗಿದೆ. ಸಂಸತ್ತಿನಲ್ಲೂ ಪ್ರತಿಧ್ವನಿಸಿದೆ. ವಿಠಲ ಬೆಂಬಲಕ್ಕೆ ನಿಲ್ಲುವ ಮೂಲಕ ನಾಡಿನ ಪರವಾ ನಿಂತಂತೆಯೇ ಹೊರತು ಬೇರೆನಲ್ಲ ಎಂಬುದನ್ನು ಎಲ್ಲರು ಅರಿಯಬೇಕು.

• ಎನ್.

ಆಧೀನಮ್ ಅಡ್ಡೆಯಲ್ಲಿ ಹಿರಿ-ಕಿರಿ ಸ್ವಾಮಿಗಳ ಪ್ರೇಯಸಿಯರ ಕಚ್ಚಾಟ

ಗುರುವಿಗೂ ಅದೇ ರೋಗ

ಒಬ್ಬ ನೀಚ ಇನ್ನೊಬ್ಬ ಪರಮನೀಚ ನಿಜಕ್ಕೂ ವಿರಕ್ತನಾಗಿದ್ದರೆ, ಪ್ರಾಮಾಣಿಕ ಶಿವಭಕ್ತನಾಗಿದ್ದರೆ ಆಧೀನಮ್ ಸ್ವಾಮಿಗೆ ನಿತ್ಯಾನಂದನಿಗಿಂತ ಒಳ್ಳೆಯವರು, ಮಾನವಂತರು, ಶಿವಾಚಾರಿಗಳು ಸಿಗಬೇಕಿತ್ತಲ್ಲವೆ? ಸದ್ಯ ನಿತ್ಯಾನಂದನ ನೇಮಕದ ವಿರುದ್ಧ ತಮಿಳುನಾಡಿನಾದ್ಯಂತ ಶೈವರ ಪ್ರತಿಭಟನೆ ಇಮ್ಮಡಿಗೊಂಡಿದೆ.


ನಿತ್ಯಾನಂದ

ಎಲ್ಲಾ ಬಿಟ್ಟು ಭಂಗಿ ನೆಟ್ಟಂತೆ ಎಳ್ಳಷ್ಟು ನಿತ್ಯಾನಂದನನ್ನೇ ತನ್ನ ಉತ್ತರಾಧಿಕಾರಿ ಪಟ್ಟಕ್ಕೇರಿಸಿದ ಮಧುರೈ ಆಧೀನಮ್ ಸ್ವಾಮಿಯ ದುರಾಚಾರಕ್ಕೊಂದು ಕಾರಣ ಇರಲೇಬೇಕಲ್ಲವೆ?

ಕಾರಣ ಮತ್ತು ಅನಿವಾರ್ಯತೆ ಎರಡೂ ಆಧೀನಮ್ ಸ್ವಾಮಿಗೀಗ ಇಲ್ಲದಿದ್ದರೆ ಆಧೀನಮ್ ಅರುಣಗಿರಿನಾಥ ಸ್ವಾಮಿಗೂ ನಿತ್ಯಾನಂದನಿಗಾದ ಗತಿಯೇ ಕಾದಿತ್ತು ಎನ್ನುತ್ತಾರೆ ತಮಿಳುನಾಡಿನ ಹಿಂದೂ ಮಕ್ಕಳ್ ಕಚ್ಚಿಯ ನಾಯಕ ಸೂಸೈ ಕಣ್ಣನ್!


ಆರೆಸ್ಸೆಸ್ ಪರಿವಾರದ ತಮಿಳು ಮತೀಯ ಪಕ್ಷವಾದ ಹಿಂದೂ ಮಕ್ಕಳ್ ಕಚ್ಚಿಯ ಪ್ರಕಾರ ಮಧುರೈ ಆಧೀನಮ್ ಮತ್ತು ಬಿಡದಿಯ ನಿತ್ಯಾನಂದ ಇಬ್ಬರೂ ವೃತ್ತಿ, ಪ್ರವೃತ್ತಿ ಮತ್ತು ಅಭಿರುಚಿಯಲ್ಲಿ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ನಿತ್ಯಾನಂದ ತನ್ನ ಯೌವನವನ್ನು ಖಾವಿಯ ಮರೆಯಲ್ಲಿ ನಿರ್ಲಜ್ಜನಾಗಿ ಸ್ವೇಚ್ಛಾನುಸರಿಸಿದ ಹಾಗೆಯೇ ವೃದ್ಧ ಸ್ವಾಮಿ ಆಧೀನಮ್‌ನ ಮುದಿ ಚಪಲಗಳಿಗೂ ಯಾವುದೇ ಅಂಕೆಯಿರಲಿಲ್ಲ. ಪುರಾತನ ಪಾವಿತ್ರ್ಯದ ಆಧೀನಮ್ ಸಂಪ್ರದಾಯಗಳ ಪ್ರಕಾರ ಅದು ಶೈವ ವಿರಕ್ತ ಪೀಠ. ಅಲ್ಲಿನ ಅಂತರಂಗದಲ್ಲಿ ಶುರುವಿನಿಂದಲೂ ಮಹಿಳೆಯರಿಗೆ ಪ್ರವೇಶವಿರಲಿಲ್ಲ.

ಇಂಥದೊಂದು ಸದಾಚಾರವನ್ನು ಮೊದಲ ಬಾರಿಗೆ ಮುರಿದವನೇ ಅರುಣಗಿರಿನಾಥ ಸ್ವಾಮೀಜಿ. ಅದಕ್ಕೆ ಕಾರಣವಾಗಿದ್ದು ಮಧುರೈ ಆಧೀನಮ್‌ನ ಶಾಖಾಮಠವಾದ ತಿರುವಾರೂರು ಆಧೀನಮ್ ಮಠ.


ರಂಜಿತಾ

ಮಧುರೈನಿಂದ 100 ಕಿ.ಮೀ. ದೂರದ ತಿರುವಾರೂರು ದೊಡ್ಡ ಊರೇನಲ್ಲ. ಅಲ್ಲಿರುವ ಆಧೀನಮ್ ಶಾಖಾಮಠದ ಎದುರಿಗೇ ಜೋಪಡಪಟ್ಟಿಯೊಂದಿತ್ತು. ಅಲ್ಲಿನ ಕೆಲ ಹೆಂಗಸರು ವಿಶೇಷ ಸಂದರ್ಭದಲ್ಲಿ ಅಡಿಗೆಗೆಂದು ಮಠಕ್ಕೆ ಬರುತ್ತಿದ್ದರು. ಅಂಥ ಹೆಂಗಸರ ಪೈಕಿ ಪಳನಿಯ ಮ್ಮಾಳ್ (ಹೆಸರು ಬದಲಿಸಿದೆ) ಎಂಬಾಕೆ ಕುಡುಕ ಗಂಡ ಮತ್ತು ಪ್ರಾಯಕ್ಕೆ ಬಂದ ಇಬ್ಬರು ಹೆಣ್ಣುಮಕ್ಕಳು. ಇವರಲ್ಲಿ ದೊಡ್ಡವಳು ವೈಷ್ಣವಿಯಾದರೆ ಚಿಕ್ಕವಳೇ ಕಸ್ತೂರಿ!


ಅದೇನಾಯಿತೋ ವೈಷ್ಣವಿ ಮತ್ತು ಕಸ್ತೂರಿಯ ಮೇಲೆ ಆಧೀನಮ್ ಅರುಣಗಿರಿನಾಥನ ಕಣ್ಣು ಬಿತ್ತು. ಇನ್ನೂ ಮದುವೆಯಿಲ್ಲದ ಹದಿಹರೆಯದ ಆ ಯುವತಿಯರಿಬ್ಬರೂ ಪದೇಪದೇ ತಿರುವಾರೂರು ಆಧೀನಮ್ ಮಠದಲ್ಲಿ ಕಾಣಿಸಿಕೊಳ್ಳುತ್ತಿದ್ದಂತೆ ಅರುಣಗಿರಿನಾಥ ಸ್ವಾಮಿ ಕೂಡ ಹೊತ್ತಲ್ಲದ ಹೊತ್ತಲ್ಲಿ ಮಧುರೈ ಮಠಬಿಟ್ಟು ತಿರುವಾರೂರು ಶಾಖಾ ಮಠಕ್ಕೆ ಬರುವುದು ಹೆಚ್ಚಾಯಿತು. ಕಾಲಕ್ರಮೇಣ ಇಡೀ ತಿರುವಾರೂರು ಶಾಖಾ ಮಠದ ಆಡಳಿತ, ಹಣಕಾಸಿನ ವ್ಯವಹಾರ, ಮೇಜುವಾನಿಕೆಯೆಲ್ಲ ವೈಷ್ಣವಿ ಮತ್ತು ಕಸ್ತೂರಿ ಸಹೋದರಿಯರ ಕೈವಶವಾಯಿತು. ಮಠದೊಳಗೆ ಮಹಿಳಾ ರಾಜ್ಯ ಸ್ಥಾಪಿಸಿದ ಆಧೀನಮ್ ಸ್ವಾಮಿ 2000 ವರ್ಷಗಳ ಹಳೇ ಸಂಪ್ರದಾಯವನ್ನೇ ಈ ಮೂಲಕ ಮುರಿದಿದ್ದ. ಇದರ ವಿರುದ್ಧ ಸಂಪ್ರದಾಯಸ್ಥ ಶೈವ ಬ್ರಾಹ್ಮಣರೆಲ್ಲ ಇನ್ನೇನು ರೊಚ್ಚಿಗೇಳಬೇಕೆನ್ನುವಷ್ಟರಲ್ಲಿ ಹುಷಾರಾದ ಅರುಣಗಿರಿನಾಥ ಸ್ವಾಮಿ ಅಕ್ಕತಂಗಿಯರಿಬ್ಬರನ್ನೂ ರಾತ್ರೋರಾತ್ರಿ ತಿರುವಾಯೂರಿನಿಂದ ಮಧುರೈ ಆಧೀನಮ್ ಮಠಕ್ಕೆ ಸಾಗಿಸಿಬಿಟ್ಟ.


ಮಧುರೈ ಮಠದಲ್ಲಿ ನಿತ್ಯಾನಂದನ ಹೆಂಗಸರು

ಇದು ಇಲ್ಲಿಗೆ ಹತ್ತು ವರ್ಷದ ಹಿಂದಿನ ಪ್ರಸಂಗ. ಅದೇ ಹೊತ್ತಿಗೆ ಮಧುರೈ ಆಧೀನಮ್ ಮಠದಲ್ಲಿ ಗೋಪಿಕಾ ಮತ್ತು ಮಾಧವಿ ಎಂಬ ಇನ್ನೂ ಇಬ್ಬರು ಹೆಂಗಸರಿದ್ದರು. ಹೊಸದಾಗಿ ವೈಷ್ಣವಿ ಮತ್ತು ಕಸ್ತೂರಿ ಎಂಟ್ರಿ ಕೊಟ್ಟಿದ್ದೇ ತಡ, ಗೋಪಿಕಾ ಮತ್ತು ಮಾಧವಿ ರೊಚ್ಚಿಗೆದ್ದರು. ಪ್ರತಿನಿತ್ಯ ಕಚ್ಚಾಟಗಳಾದವು. ಅಷ್ಟಾಗ್ಯೂ ಇದು ಸುದ್ದಿಯಾಗದೇ ತನ್ನಿಂದ ತಾನೇ ತಣ್ಣಗಾಗಿತ್ತು. ವೈಷ್ಣವಿ ಮತ್ತು ಕಸ್ತೂರಿ ಅದೇನು ಮೋಡಿ ಮಾಡಿದ್ದರೋ ಆಧೀನಮ್ ಸ್ವಾಮೀಜಿ ತನ್ನ ಮಧುರೈ ಮಠವನ್ನೂ ಇದೇ ಸಹೋದರಿಯರ ಕೈಗೊಪ್ಪಿಸಿದ್ದ.


ಆಧೀನಮ್ ಅಡ್ಡೆಯಲ್ಲಿ ವೈಷ್ಣವಿ

ಹೀಗೆ ತಿರುವಾರೂರಿನ ಕಚ್ಚಿನಂ ಏರಿಯಾದಿಂದ ಮಠಕ್ಕೆ ಕಾಲಿಟ್ಟು ನಾಪತ್ತೆಯಾಗಿದ್ದ ಅಕ್ಕತಂಗಿಯರಿಬ್ಬರನ್ನೂ ಆ ಊರಿನ ಜನ ಮತ್ತೆ ಕಂಡಿದ್ದು ಕಳೆದ ಏಪ್ರಿಲ್ 1 ರಂದು. ಆವತ್ತು ಆಧೀನಮ್ ಅರುಣಗಿರಿನಾಥರ ಹುಟ್ಟುಹಬ್ಬವಿತ್ತು. ಅದಕ್ಕೆ ನಿತ್ಯಾನಂದನೂ ಬಂದಿದ್ದ. ಅರುಣಗಿರಿನಾಥನ ಜೊತೆ ವೈಷ್ಣವಿ ಮತ್ತು ಕಸ್ತೂರಿಯಲ್ಲದೆ ಗೋಪಿಕಾ, ಮಾಧವಿ ನಿತ್ಯಾನಂದನ ಜೊತೆ ಬಂದಿದ್ದ ಲಲನೆಯರು ಮತ್ತು ಕೆಲ ಸಿನಿಮಾ ನಟಿಯರು ಸೇರಿ ನಡುರಾತ್ರಿ ತನಕ ನರ್ತಿಸಿದ್ದಾರೆ. ಕಾಲಭೈರವ ಹೋಮ ಕ್ಕೆಂದು ವಿಶೇಷ ಮದ್ಯವನ್ನು ತಯಾರಿಸ ಲಾಗಿತ್ತಂತೆ. ಪ್ರಸಾದ ಮತ್ತು ತೀರ್ಥವೆಂದು ವೈನ್ ಕಾಕ್‌ಟೇಲ್ ಕುಡಿದು ನಡುರಾತ್ರಿ ತನಕ ತಿರುವಾರೂರು ಮಠದಲ್ಲಿ ಪಾರ್ಟಿ ಮಾಡಿದ ಅರುಣಗಿರಿನಾಥ ಸ್ವಾಮಿಯ ಅನಾಚಾರ ಬೆಳಗಾಗುವ ಹೊತ್ತಿಗೆಲ್ಲಾ ಇಡೀ ಊರಿಗೆ ಗೊತ್ತಾಗಿತ್ತು.


ಸೂಸೈ ಕಣ್ಣನ್

ಇನ್ನು ತೆಪ್ಪಗಿದ್ದರೆ ಮುದಿ ಆಧೀನಮ್ ಮಠದ ಮರ್ಯಾದೆಯನ್ನೇ ಹರಾಜು ಹಾಕಬಹುದೆಂಬ ಭೀತಿಗೆ ಬಿದ್ದ ಶೈವ ಮುಖಂಡರೆಲ್ಲ ಒಗ್ಗೂಡಿದ್ದೆ ತಿರುತ್ತುರೈ ಪೂಂಡಿ ಪೊಲೀಸ್ ಠಾಣೆಯೆದುರು ಜಮಾಯಿಸಿ ಅರುಣಗಿರಿನಾಥ ಸ್ವಾಮಿಯ ವಿರುದ್ಧ ದೂರು ಕೊಟ್ಟಿದ್ದಾರೆ. ಆದರೆ ಆಧೀನಮ್ ಸ್ವಾಮಿಯ ತಾಕತ್ತು ಪ್ರಭಾವದ ಮುಂದೆ ಜನ ಕೊಟ್ಟ ದೂರು ದಾಖಲಾಗಲೇ ಇಲ್ಲ. ತನ್ನ ಆಜ್ಞಾಪಾಲಕ ಪುಢಾರಿಗಳು ಮತ್ತು ಅಧಿಕಾರಸ್ಥ ಅಣ್ಣಾ ಡಿಎಂಕೆಯ ಕೆಲ ನಾಯಕರನ್ನು ಛೂಬಿಟ್ಟಿದ್ದೇ ದೂರು ಕೊಟ್ಟವರ ಬಾಯನ್ನೇ ಆಧೀನಮ್ ಸ್ವಾಮಿ ಮುಚ್ಚಿಸಿಬಿಟ್ಟ!

ಇದಾಗಿ ವಾರಕ್ಕೇ ಕಾರೈಕುಡಿಯ ಧಾರ್ಮಿಕ ಸಮಾರಂಭವೊಂದರಲ್ಲಿ ನಿತ್ಯಾನಂದ ಮತ್ತು ಆಧೀನಮ್ ಮತ್ತೆ ಜೊತೆಯಾಗಿದ್ದಾರೆ. ಅದೇನು ವ್ಯವಹಾರ ಕುದುರಿತೋ ಗೊತ್ತಿಲ್ಲ, ಕಾರೈಕುಡಿಯಲ್ಲಿ ಮುಖಾಮುಖಿಯಾಗಿ ಹತ್ತೇ ದಿನಕ್ಕೆ ನಿತ್ಯಾನಂದನ ಇಡೀ ಪಟಾಲಂ ಮಧುರೈ ಆಧೀನಮ್ ಮಠದಲ್ಲಿತ್ತು. ಹಿಂದೆ ಯಾವತ್ತೂ ಕಂಡುಕೇಳರಿಯದ ರೀತಿಯಲ್ಲಿ ನಿತ್ಯಾನಂದ ಆವತ್ತು ಆಧೀನಮ್ ಸ್ವಾಮಿಯನ್ನು ಯಾವ ಪರಿ ಪುಸಲಾಯಿಸಿದ್ದನೆಂದರೆ, ಸ್ವಾಮಿ ಕೂರುತಿದ್ದ ಸಿಂಹಾಸನದ ಇಕ್ಕೆಲದಲ್ಲೂ ಇಬ್ಬಿಬ್ಬರು ಲಲನಾಮಣಿಗಳನ್ನು ಕೂರಿಸಿಬಿಟ್ಟದ್ದು.

ಅಲ್ಲಿಗೆ ಆಧೀನವಮ್‌ನ ವಿರಕ್ತ ಕಂದಾಚಾರವೇ ಅಂತ್ಯಗೊಂಡಾಗಿತ್ತು.

ಮರುದಿನ ಬಿಡದಿಗೆ ವಾಪಸ್ಸಾಗುವುದಕ್ಕೂ ಮುನ್ನ ನಿತ್ಯಾನಂದ ತನ್ನ ಕಡೆಯ ಹತ್ತು ಮಂದಿ ಹೆಂಗಸರನ್ನು ಮಧುರೈ ಮಠದಲ್ಲೇ ಬಿಟ್ಟು ಬಂದಿದ್ದ. ಬಿಡದಿಯಲ್ಲಿ ಅರುಣಗಿರಿನಾಥ ಸ್ವಾಮಿ ನಿತ್ಯಾನಂದನಿಗೆ ಪಟ್ಟಾಭಿಷೇಕ ಮಾಡುವುದಕ್ಕೂ ಮೊದಲೇ ಮಧುರೈ ಮಠ ಆತನ ಸ್ವಾಧೀನಕ್ಕೆ ಬಂದಾಗಿತ್ತು. ಹಾಗೇ ನಿತ್ಯಾನಂದ ಬಿಟ್ಟು ಬಂದಿದ್ದ ಹತ್ತು ಮಂದಿ ಹೆಂಗಸರು ಇಡೀ ಮಧುರೈ ಮಠವನ್ನು ಆಕ್ರಮಿಸಿಕೊಂಡಿದ್ದೇ ಎಲ್ಲೆಲ್ಲಿ ಏನೇನಿದೆ? ಯಾರಾರು ಬರುತ್ತಾರೆ? ಎಷ್ಟೆಲ್ಲ ಆಸ್ತಿಯಿದೆ? ಎಲ್ಲೆಲ್ಲಿಂದ ಏನೇನು ಆಧಾಯವಿದೆ? ಇತ್ಯಾದಿ ಪ್ರತಿಯೊಂದನ್ನೂ ಕೆದಕಿ ನಿತ್ಯಾನಂದನಿಗೆ ವರದಿಯೊಪ್ಪಿಸುತ್ತಿದ್ದರು. ವಿಕಟವೆಂದರೆ ಹಾಗೇ ನಿತ್ಯಾನಂದನ ಜೊತ ಮಧುರೈ ಮಠಕ್ಕೆ ಬಂದಿದ್ದ ಲಲನೆಯರ ಪೈಕಿ ನಿತ್ಯಾನಂದನ ಜೊತೆ ಅತೀ ಸಲುಗೆಯಿಂದಿದ್ದವಳು ನಟಿ ರಂಜಿತಾ.

ಯಾವತ್ತು ರಂಜಿತಾ ನೇತೃತ್ವದಲ್ಲಿ ನಿತ್ಯಾನಂದನ ಮಹಿಳಾ ಪಡೆ ಮಧುರೈ ಮಠದ ಆಸ್ತಿ-ಪಾಸ್ತಿ, ವಜ್ರ ವೈಢೂರ್ಯ ಚಿನ್ನ ಇತ್ಯಾದಿಗಳ ತನಿಖೆಗಿಳಿಯಿತೋ ಆಧೀನಮ್ ಸ್ವಾಮಿಯ ಪರಮ ಭಕ್ತೆಯರಾದ ವೈಷ್ಣವಿ ಮತ್ತು ಕಸ್ತೂರಿ ತಿರುಗಿಬಿದ್ದಿದ್ದಾರೆ. ಒಂದು ಹಂತದಲ್ಲಿ ರಂಜಿತಾ ಮತ್ತು ವೈಷ್ಣವಿ ಮಧ್ಯೆ ಜಗಳವೇ ನಡೆದುಹೋಗಿ ಆಧೀನಮ್ ಮತ್ತು ನಿತ್ಯಾನಂದ ಇಬ್ಬರೂ ಓಡಿಬಂದು ಜಗಳ ಬಿಡಿಸಿದರಂತೆ!


ಅರುಣಗಿರಿನಾಥ

ತಮಾಷೆಯೆಂದರೆ ಸ್ವಾಮಿಗಳಿಬ್ಬರ ಪರಮಾಪ್ತೆಯರ ಮಧ್ಯದ ಕೋಳಿ ಜಗಳ ಬಿಡದಿಯಲ್ಲಿ ನಿತ್ಯಾನಂದನ ಪೀಠಾಧಿಕಾರದ ಹೊತ್ತಿಗೆ ತಣ್ಣಗಾಗಿತ್ತು. ವೈಷ್ಣವಿ ವೃದ್ಧ ಆಧೀನಮ್ ಸ್ವಾಮಿಯ ಪಕ್ಕ ಗಯ್ಯಾಳಿ ಅತ್ತೆಯಂತೆ ಮುನಿದು ಕೂತಿದ್ದರೆ ಕಿಲಾಡಿ ರಂಜಿತಾ ನಿತ್ಯಾನಂದನ ಪಟ್ಟಾಭಿಷೇಕವನ್ನು ಕಂಡು ಮುಸಿಮುಸಿ ನಗುತ್ತಿದ್ದಳು. ಗುರು ಆಧೀನಮ್ ಅರುಣಗಿರಿನಾಥನ ಮುದಿ ಚಪಲ ಮತ್ತು ಸುಪ್ತ ಸ್ತ್ರೀವ್ಯಾಮೋಹವಾದರೆ ಶಿಷ್ಯ ನಿತ್ಯಾನಂದನಿಗೆ ನಿರ್ಲಜ್ಜ ಕಾಮಲಾಲಸೆ ಮತ್ತು ಕ್ರಿಮಿನಲ್ ಕೌಶಲ್ಯ.

ಇಷ್ಟಿಲ್ಲದಿದ್ದರೆ ಆಧೀನಮ್ ಸ್ವಾಮಿ ಏಕೆ ನಿತ್ಯಾನಂದನನ್ನೇ ಹಿಡಿತಂದು ಗೋಗರೆದು ಪಟ್ಟಕಟ್ಟುತ್ತಿದ್ದ! ಒಬ್ಬ ನೀಚ ಇನ್ನೊಬ್ಬ ಪರಮನೀಚ ನಿಜಕ್ಕೂ ವಿರಕ್ತನಾಗಿದ್ದರೆ, ಪ್ರಾಮಾಣಿಕ ಶಿವಭಕ್ತನಾಗಿದ್ದರೆ ಆಧೀನಮ್ ಸ್ವಾಮಿಗೆ ನಿತ್ಯಾನಂದನಿಗಿಂತ ಒಳ್ಳೆಯವರು, ಮಾನವಂತರು, ಶಿವಾಚಾರಿಗಳು ಸಿಗಬೇಕಿತ್ತಲ್ಲವೆ? ಹೀಗೆಂದು ಪ್ರಶ್ನಿಸುತ್ತಲೇ ಇದ್ದಾರೆ ಹಿಂದೂ ಮಕ್ಕಳ್ ಕಚ್ಚಿಯ ನಾಯಕ ಸೂಸೈ ಕಣ್ಣನ್. ಸದ್ಯ ನಿತ್ಯಾನಂದನ ನೇಮಕದ ವಿರುದ್ಧ ತಮಿಳುನಾಡಿನಾದ್ಯಂತ ಶೈವರ ಪ್ರತಿಭಟನೆ ಇಮ್ಮಡಿಗೊಂಡಿದೆ.

• ರಾ. ಸೋಮನಾಥ್

ಶಿವಾಚಾರದ ಕೇಂದ್ರವನ್ನೇ ಐಷಾರಾಮಿ ಹೋಟೆಲ್ ಮಾಡಿದ.....!

ಆಧೀನಮ್ ಅರುಣಗಿರಿನಾಥ ಸ್ವಾಮಿಯ ಶಿವಭಕ್ತಿ, ಶಿವಾಚಾರ, ಧರ್ಮಕೈಂಕರ್ಯದ ಅಸಲಿಯತ್ತಿನ ಬಗ್ಗೆ ಮಧುರೈ ವಕೀಲರ ಸಂಘದ ಅಧ್ಯಕ್ಷ ಶರವಣನ್ ಹೊಸ ಹಗರಣವೊಂದನ್ನು ಬಯಲಿಗೆಳೆದಿದ್ದಾರೆ. ಅದು ರಾಮನಾಥಪುರದ ಸೀಮಪ್ ರೆಸಿಡೆನ್ಸಿ ಎಂಬ ಐಷಾರಾಮಿ ಹೋಟೆಲಿನ ಕರ್ಮಕಾಂಡ.

ತಮಿಳುನಾಡಿನ ರಾಮನಾಥಪುರದಲ್ಲಿ ಆಧೀನಮ್ ಮಠದ ಸೊತ್ತಾದ ಪುರಾತನ ಅರಮನೆ ಶೈಲಿಯ ಬಂಗಲೆಯೊಂದಿದೆ. ಅದನ್ನು ಆ ಕಾಲಕ್ಕೆ ಮಠಕ್ಕೊಂದು ದಾನ ಕೊಟ್ಟವನು ಪಾಂಡ್ಯರ ದೊರೆ ಭಾಸ್ಕರ ಸೇತುಪತಿ. ಆಧೀನಮ್ ಮಠದ ಶಿವಾಚಾರಕ್ಕೆ ಮಾರುಹೋಗಿದ್ದ ಭಾಸ್ಕರ ಸೇತುಪತಿ ಮಹಾರಾಜು ತನ್ನ ಅರಮನೆಯನ್ನು ಮಠಕ್ಕೆ ದಾನ ಮಾಡುವಾಗಲೇ ಅದನ್ನು ಶಿವಾಚಾರಕ್ಕಷ್ಟೇ ಬಳಸಬೇಕೆಂಬ ಷರತ್ತು ವಿಧಿಸಿದ್ದ. ಅಲ್ಲಿ ಶಿವಪೂಜೆ, ಭಜನೆ, ರುದ್ರಯಾಗ, ಪ್ರಸಾದ, ದಾಸೋಹವಲ್ಲದೆ ಮತ್ತೇನೂ ನಡೆಯಕೂಡದೆಂದು ವಾಗ್ದಾನ ಪಡೆದೇ ಆಗಿದ್ದ ಆಧೀನಮ್ ಸ್ವಾಮಿಗಳಿಗೆ ದೊರೆ ಭಾಸ್ಕರ ಸೇತುಪತಿ ತನ್ನ ಅರಮನೆ ಬಿಟ್ಟುಕೊಟ್ಟಿದ್ದ. ಆದರೆ ಅರುಣಗಿರಿನಾಥ 292 ನೇ ಆಧೀನಮ್ ಆಗಿ ವಕ್ಕರಿಸುತ್ತಿದ್ದಂತೆ ರಾಮನಾಥಪುರದ ಅರಮನೆ ಪಾಳುಬಿತ್ತು. ಶಿವಪೂಜೆ, ಪ್ರಸಾದ ನಿಂತೇ ಹೋಯಿತು. ಹಾಗೇ ಪಾಳುಬಿದ್ದ ಅರಮನೆಯ ಈಗಿನ ಮಾರುಕಟ್ಟೆ ಮೌಲ್ಯ ಕಮ್ಮಿಯೆಂದರೂ ಐನೂರು ಕೋಟಿ. ಇನ್ನು ಅರುಣಗಿರಿನಾಥನ ದುರಾಸೆ ಕೆರಳದಿರುತ್ತಾ? ಇಲ್ಲಿಗೆ ಐದು ವರ್ಷದ ಹಿಂದೆ ಮುಂಬಯಿಯ ಕಂಪನಿಯೊಂದಕ್ಕೆ ಐಷಾರಾಮಿ ಹೋಟೆಲ್ ನಡೆಸಲು ಮೂರು ಕೋಟಿ ಅಡ್ವಾನ್ಸ್ ಪಡೆದ ಅರುಣಗಿರಿನಾಥರೇ ನಿಂತು 'ಸೀಮಪ್ ರೆಸಿಡೆನ್ಸಿ' ಹೋಟೆಲ್‌ನ್ನು ಉದ್ಘಾಟಿಸಿದರು. ಈಗ ಹೋಟೆಲ್ ದಂಧೆ ಭರದಿಂದ ಸಾಗಿದೆ. ಅಲ್ಲಿನ ಪ್ರತಿ ಸುಸಜ್ಜಿತ ರೂಮೊಂದಕ್ಕೆ ದಿನವೊಂದಕ್ಕೆ 6 ಸಾವಿರ ರೂಪಾಯಿಯ ಬಾಡಿಗೆ. ತಿಂಗಳೊಂದಕ್ಕೆ ಇದರ ಬಾಡಿಗೆಯೆಂದು ಐದು ಲಕ್ಷ ರೂಪಾಯಿ ಜೇಬಿಗಿಳಿಸುತ್ತಾನೆ ಅರುಣಗಿರಿನಾಥ ಸ್ವಾಮಿ.


ಶರವಣನ್

ಶಿವಾಚಾರಕ್ಕೆಂದು ದಾನ ಕೊಟ್ಟ ಅರಮನೆಯನ್ನೇ ಐಷಾರಾಮಿ ಹೋಟೆಲಾಗಿ ಪರಿವರ್ತಿಸಿದವನು ಶಿವಭಕ್ತಿಯ ಪ್ರತೀಕವಾಗಿದ್ದ ಮಠವನ್ನು ಅನಾಚಾರಿಯೊಬ್ಬನಿಗೆ ಮಾರಿಕೊಳ್ಳದೇ ಇರುತ್ತಾನಾ? ಇದಕ್ಕಿಂತ ಶಿವನಿಂದೆಯುಂಟೆ? ಎಂದು ಪ್ರಶ್ನಿಸುತ್ತಾರೆ ಶರವಣನ್.

ಮೇ 6ರ ಭಾನುವಾರ ದಾವಣಗೆರೆಯಲ್ಲಿ ನೆರೆದ ಸರಿಸುಮಾರು ಐದು ಲಕ್ಷ ಮಂದಿ ಕುರುಬರ ಬೃಹತ್ ಸಮಾವೇಶ ಕುರಿತಂತೆ ಕರ್ನಾಟಕದ ಬಹುತೇಕ ಪತ್ರಿಕೆ-ಮೀಡಿಯಾಗಳಿಗೆ ತಾತ್ಸಾರವಿರಬಹುದು. ನ್ಯಾಯಬದ್ಧ ಪ್ರಚಾರವನ್ನೂ ನೀಡದೆ ದಮನಿಸಲೆತ್ನಿಸಬಹುದು. ಇದು ಸಿದ್ದರಾಮಯ್ಯನವರನ್ನು ಮುಂದಿನ ಮುಖ್ಯಮಂತ್ರಿ ಮಾಡಲು ಕುರುಬ ಸಮೂಹ ನಡೆಸಿದ ಬಲಾಬಲ ಪ್ರದರ್ಶನವೆಂಬಂತೆ ಬಣ್ಣ ಕಟ್ಟಲೂಬಹುದು. ಕುರುಬರ ವಿರುದ್ಧ ಬಲಾಢ್ಯ ಜಾತಿಗಳನ್ನು ಎತ್ತಿಕಟ್ಟುವ, ಸಿದ್ದರಾಮಯ್ಯಗೆ ಜಾತಿಯ ಹಣೆಪಟ್ಟಿಕಟ್ಟುವ ಎಲ್ಲಾ ಕುಚೋದ್ಯಗಳ ಮಧ್ಯೆಯೂ ದಾವಣಗೆರೆಯ ಕುರುಬರ ಸಮಾವೇಶಕ್ಕೆ ಬೇರೆಯದೇ ಮಹತ್ವವೊಂದಿದೆ.....

ಬ್ರಾಹ್ಮಣರ ಹುನ್ನಾರಕ್ಕೆ ಅಹಿಂದ ತಿರುಗೇಟು



ಕುರುಬರ ಕಹಳೆ ಸಿದ್ದು ಮೇಲುಗೈ

• ರಾ. ಸೋಮನಾಥ್

ಕುರುಬರು ಎದ್ದು ನಿಂತಿದ್ದಾರೆ. ದಾರಿಯಿನ್ನೂ ಸ್ಪಷ್ಟವಿಲ್ಲ, ಆದರೆ ಗುರಿ ಪಕ್ಕಾ, ನಾಯಕತ್ವದ ಬಗ್ಗೆ ಗೊಂದಲವಿಲ್ಲ, ಆಕ್ರೋಶವಿನ್ನೂ ಭುಗಿಲೆದ್ದಿಲ್ಲ, ಸದ್ಯಕ್ಕಂತೂ ಒಗ್ಗಟ್ಟಿಗೆ ಯಾವುದೇ ಧಕ್ಕೆಯಿಲ್ಲ.



ಮೇ 6ರ ಭಾನುವಾರ ದಾವಣಗೆರೆಯಲ್ಲಿ ನೆರೆದ ಸರಿಸುಮಾರು ಐದು ಲಕ್ಷ ಮಂದಿ ಕುರುಬರ ಬೃಹತ್ ಸಮಾವೇಶ ಕುರಿತಂತೆ ಕರ್ನಾಟಕದ ಬಹುತೇಕ ಪತ್ರಿಕೆ-ಮೀಡಿಯಾಗಳಿಗೆ ತಾತ್ಸಾರವಿರಬಹುದು. ನ್ಯಾಯಬದ್ಧ ಪ್ರಚಾರವನ್ನೂ ನೀಡದೆ ದಮನಿಸಲೆತ್ನಿಸಬಹುದು. ಇದು ಸಿದ್ದರಾಮಯ್ಯನವರನ್ನು ಮುಂದಿನ ಮುಖ್ಯಮಂತ್ರಿ ಮಾಡಲು ಕುರುಬ ಸಮೂಹ ನಡೆಸಿದ ಬಲಾಬಲ ಪ್ರದರ್ಶನವೆಂಬಂತೆ ಬಣ್ಣ ಕಟ್ಟಲೂಬಹುದು. ಕುರುಬರ ವಿರುದ್ಧ ಬಲಾಢ್ಯ ಜಾತಿಗಳನ್ನು ಎತ್ತಿಕಟ್ಟುವ, ಸಿದ್ದರಾಮಯ್ಯಗೆ ಜಾತಿಯ ಹಣೆಪಟ್ಟಿಕಟ್ಟುವ ಎಲ್ಲಾ ಕುಚೋದ್ಯಗಳ ಮಧ್ಯೆಯೂ ದಾವಣಗೆರೆಯ ಕುರುಬರ ಸಮಾವೇಶಕ್ಕೆ ಬೇರೆಯದೇ ಮಹತ್ವವೊಂದಿದೆ.

ಅದು ಹಿಂದುಳಿದ ವರ್ಗಗಳ ಮೂಕವೇದನೆ. ಸೂಕ್ಷ್ಮವಾಗಿ ಗಮನಿಸಿದರೆ ಜಾತಿಯ ಕಾರಣಕ್ಕಾಗಿ ಕುರುಬರು ಬೀದಿಗಿಳಿದದ್ದು ಕಮ್ಮಿಯೇ. ಬಲಾಢ್ಯ ಲಿಂಗಾಯತರು, ಒಕ್ಕಲಿಗರ ಆಧಿಪತ್ಯದ ಬಗ್ಗೆ ಮಿಕ್ಕೆಲ್ಲಾ ಸಣ್ಣ ಜಾತಿಗಳಿಗೆ ಹೇಗೆ ಆಕ್ರೋಶವಿದೆಯೋ ಹಾಗೆ ಕುರುಬರಿಗೂ ಇದೆ. ಕರ್ನಾಟಕದ ಈಡಿಗರಾಗಲಿ, ವಾಲ್ಮೀಕಿ ನಾಯಕರಾಗಲಿ, ಉಪ್ಪಾರರು, ಬೆಸ್ತರು, ಗಾಣಿಗರು, ದಲಿತರು, ದೇವಾಂಗ ಮುಂತಾದ ಸಣ್ಣಪುಟ್ಟ ಜಾತಿಗಳಿಗೆ ಲಿಂಗಾಯತರು ಮತ್ತು ಒಕ್ಕಲಿಗರ ಬಗ್ಗೆ ಇರುವಷ್ಟು ಅಸಹನೆ ಕುರುಬರ ಮೇಲಿಲ್ಲ, ಹಾಗೇ ಒಕ್ಕಲಿಗರು ಮತ್ತು ಲಿಂಗಾಯತ ಸಮೂಹದ ಉದಾರಿಗಳಿಗೆ ಕುರುಬರ ಬಗ್ಗೆ ಅಂತ ತಕರಾರಿಲ್ಲ, ಕುರುಬ ಎಂಬ ಪದವೇ ಕೆಲವೊಮ್ಮೆ ಹೀಯಾಳಿಕೆಗೆ ಬಳಕೆಯಾಗುವಂತೆ ಕುರುಬರೆಂದರೇನೇ ನಿರುಪದ್ರವಿಗಳು, ಅಪಾಯಹೀನರೆಂಬ ಭಾವನೆ ಮಿಕ್ಕೆಲ್ಲಾ ಜನಸಮೂಹಗಳಿಗಿದೆ.

100 ವರ್ಷದ ಬಳಿಕ

ಇಂಥಾ ಪರಿಸ್ಥಿತಿಯಲ್ಲಿ ಚುನಾವಣೆಗಿನ್ನೂ ವರ್ಷ ಬಾಕಿಯಿರುವಂತೆ ಏಕಾಏಕಿ ಕುರುಬರ ಸಮಾವೇಶ ನಡೆದಿದೆ. ಹೆಚ್ಚೂಕಮ್ಮಿ ಐದು ಲಕ್ಷ ಮಂದಿ ದಾವಣಗೆರೆಯಲ್ಲಿ ಜಮೆಯಾಗುವುದು, ಅದೂ ಕಾಗಿನೆಲೆ ಮಹಾಸಂಸ್ಥಾನದ ನಿರಂಜನಾನಂದಪುರಿ ಸ್ವಾಮೀಜಿಯ ನೇತೃತ್ವದಲ್ಲಿ ಒಂದಾಗಿದ್ದು, ಬಿಜೆಪಿಯ ರಾಜ್ಯಾಧ್ಯಕ್ಷ ಈಶ್ವರಪ್ಪ ಮತ್ತು ಪುಢಾರಿ ವರ್ತೂರು ಪ್ರಕಾಶ್ ಹೊರತಾಗಿ ಉಳಿಕೆ ಎಲ್ಲಾ ಕುರುಬರ ನಾಯಕರೂ ಪಕ್ಷಭೇದ ಮರೆತು ಒಗ್ಗಟ್ಟು ಮೆರೆದದ್ದು, ಹರಿಯಾಣ ಮತ್ತು ಆಂಧ್ರದ ಕುರುಬನಾಯಕರೂ ಇದಕ್ಕೆ ಕೈಜೋಡಿಸಿದ್ದು ಮತ್ತು ಸಿದ್ದರಾಮಯ್ಯ ಇಡೀ ಸಮಾವೇಶದ ಏಕಮೇವಾದ್ವಿತೀಯ ನಾಯಕನಾಗಿ ಹೊರಹೊಮ್ಮಿದ್ದು; ಇತ್ಯಾದಿ ಪ್ರತಿಯೊಂದಕ್ಕೂ ಅದರದೇ ಆದ ಕಾರಣವಿದೆ.



ಈಗ ದಾವಣಗೆರೆಯಲ್ಲಿ ನಡೆದದ್ದು ಹಾಲುಮತ ಸಮಾವೇಶ. ಮೇಲುನೋಟಕ್ಕಿದು ಇಲ್ಲಿಗೆ ನೂರು ವರ್ಷಗಳ ಹಿಂದೆ ಗದಗಿನ ಶಿರಹಟ್ಟಿ ತಾಲ್ಲೂಕು ಲಕ್ಷ್ಮೇಶ್ವರದಲ್ಲಿ ನಡೆದ ಮೊಟ್ಟಮೊದಲ ಹಾಲುಮತ ಸಮಾವೇಶಕ್ಕೆ ನೂರು ವರ್ಷ ಸಂದ ಪ್ರಯುಕ್ತ ಜ್ಞಾಪಕಾರ್ಥವಾಗಿ ನಡೆದ ಶತಮಾನೋತ್ಸವ ಸಮಾರಂಭ.

ಸದ್ಯ ಕುರುಬರ ಸಂಘಕ್ಕೆ ಅಧ್ಯಕ್ಷನಾಗಿರುವ ರಘುನಾಥರಾವ್ ಮಲ್ಕಾಪುರೆ ಹುಟ್ಟಾ ಆರೆಸ್ಸೆಸ್ ಮತ್ತು ಬ್ರಾಹ್ಮಣವಾದಿ. ಆದರೆ ಗೌರವಾಧ್ಯಕ್ಷ ಶಾಂತಪ್ಪ ಮತ್ತು ಪ್ರಧಾನ ಕಾರ್ಯದರ್ಶಿ ರಾಮಚಂದ್ರಪ್ಪ ಮತ್ತಿತರ ಪದಾಧಿಕಾರಿಗಳು ಅಹಿಂದ ಚಳವಳಿಯ ಮುಂಚೂಣಿಯಲ್ಲಿದ್ದವರು. ರಾಜಕೀಯವಾಗಿ ಕುರುಬರು ಬಲಾಢ್ಯ ಜಾತಿಗಳಂತೆ ಪಟ್ಟಭದ್ರರಲ್ಲ, ರಾಜ್ಯದ ನಾಲ್ಕನೇ ದೊಡ್ಡ ಮತ್ತು ಹಿಂದುಳಿದ ಜಾತಿಗಳ ಪೈಕಿ ಮೊದಲನೇ ಸ್ಥಾನದಲ್ಲಿರುವುದು ಕುರುಬರೇ. ಆದರೆ ಚಾರಿತ್ರಿಕವಾಗಿ ಥೇಟು ಕನಕದಾಸನಂತೆ ಪುರೋಹಿತಶಾಹಿ ವಿರುದ್ಧ ಆಕ್ರೋಶ ಹೊತ್ತವರೆ.

ಇದೇ ಪುರೋಹಿತ ವರ್ಗ ಉಡುಪಿಯಲ್ಲಿ ಕನಕ ಗೋಪುರವನ್ನು ಕೆಡವಿದಾಗ, ಕನಕನಕಿಂಡಿಗೆ ನವಗ್ರಹ ಕಿಂಡಿ ಎಂದು ಹೆಸರು ಬದಲಿಸ ಹೊರಟಾಗೆಲ್ಲ ಕುರುಬ ಸಮೂಹ ಬೀದಿಗಿಳಿದು ಅಷ್ಟಮಠಗಳ ವಿರುದ್ಧ ಹೋರಾಡಿದೆ. ಈಗ ಇದೇ ಅಷ್ಟಮಠಗಳ ಬ್ರಾಹ್ಮಣಿಕೆಯ ಪ್ರತಿಪಾದಕ ಸಂಘಪರಿವಾರ ಮತ್ತು ಬಿಜೆಪಿಯ ಸರ್ಕಾರವಿದೆ. ದುರಂತವೆಂದರೆ ಯಾವ ಪುರೋಹಿತ ವರ್ಗ ಆ ಕಾಲದಿಂದಲೂ ಕನಕ ಆದಿಯಾಗಿ ಶೂದ್ರವರ್ಗವನ್ನು ಗರ್ಭಗುಡಿಯಿಂದ ಹೊರಗಿಟ್ಟಿತ್ತೋ ಅದೇ ಕನಕನ ಕುರುಬ ಸಮುದಾಯದ ಈಶ್ವರಪ್ಪನವರ ಸಾರಥ್ಯದಲ್ಲೇ ಬ್ರಾಹ್ಮಣ ವಿರೋಧಿ ಪ್ರಜ್ಞೆಯನ್ನು ದಮನಿಸತೊಡಗಿದೆ.

ಇಂಥ ಷಡ್ಯಂತ್ರದ ಫಲವೇ ಬಿಜೆಪಿ ಅಧಿಕಾರಕ್ಕೆ ಬಂದಮೇಲೆ ಕನಕಗೋಪುರ ಕೆಡವಿದ್ದು ಮತ್ತು ಕನಕನ ಕಿಂಡಿಯ ಹೆಸರು ತೆಗೆದು ನವಗ್ರಹ ಕಿಂಡಿ ಮಾಡಿದ್ದು. ಆವತ್ತು ಕನಕದಾಸರನ್ನು ಕೃಷ್ಣಸನ್ನಿಧಿಯಿಂದ ಹೊರದಬ್ಬಿದ ಇದೇ ಪುರೋಹಿತವರ್ಗ ವಕಾಲತ್ತು ವಹಿಸಿ ಪೇಜಾವರರ ಪರ ಕುರುಬರ ವಿರುದ್ಧ ಬೀದಿ ಜಗಳಕ್ಕಿಳಿದದ್ದು ಇದೇ ಈಶ್ವರಪ್ಪ. ಈಶ್ವರಪ್ಪನವರ ಆರೆಸ್ಸೆಸ್ ಚಮಚಾಗಿರಿ ಯಾವ ಮಟ್ಟಕ್ಕಿತ್ತೆಂದರೆ; ಅಲ್ಲಿ ಕನಕಗೋಪುರ ಇದ್ದದ್ದು ನಿಜ ಅನ್ನೋದೇ ಆದ್ರೆ ನಾನು ರಾಜಕೀಯದಿಂದಲೇ ನಿವೃತ್ತಿಯಾಗ್ತೀನಿ ಎಂದು ತನ್ನ ಕುಲಬಾಂಧವರ ವಿರುದ್ಧವೇ ತೊಡೆತಟ್ಟಿ ನಿಂತರು.

ಹಾಲುಮತ ಸಮಾವೇಶ

ಇಂಥ ಬ್ರಾಹ್ಮಣಶಾಹಿ ಕುತಂತ್ರದ ವಿರುದ್ಧ ಇಡೀ ರಾಜ್ಯದ ಕುರುಬ ಸಮೂಹ ಬೀದಿಗಿಳಿದು ಪ್ರತಿಭಟಿಸಿದ್ದೇ ಇತ್ತೀಚಿನ ದಿನಗಳಲ್ಲಿ ಕುರುಬ ಸಮೂಹ ನಡೆಸಿದ ರಾಜ್ಯಮಟ್ಟದ ಜನಸಂಗ್ರಾಮವಾಗಿತ್ತು. ಆನಂತರ ಸಿದ್ದು ನೇತೃತ್ವದಲ್ಲಿ ಹುಬ್ಬಳ್ಳಿಯಲ್ಲಿ ನಡೆದ ಬೃಹತ್ ಅಹಿಂದ ರ್‍ಯಾಲಿಯ ಮುಂಚೂಣಿಯಲ್ಲಿದ್ದದ್ದು ಇದೇ ಕುರುಬ ಸಮೂಹ.

ಕಾಂಗ್ರೆಸ್ಸಿಗೀಗ ಸಿದ್ದು ಬಿಟ್ಟರೆ ವರ್ಚಸ್ವೀ ಲೀಡರ್ ಯಾರಿದ್ದಾರೆ?

ಕೇವಲ ಕುರುಬರ ಬೆಂಬಲ ಮಾತ್ರದಿಂದಲೇ ನಾನು ಮುಖ್ಯಮಂತ್ರಿಯಾಗ್ತೀನಿ ಎಂಬುದೇ ಶುದ್ಧ ಭ್ರಮೆ. ಅದಕ್ಕೆ ಎಲ್ಲಾ ಜಾತಿಗಳ ಬೆಂಬಲ ಮತ್ತು ಆಶೀರ್ವಾದ ಬೇಕು. ಈ ನಿಟ್ಟಿನಲ್ಲಿ ಕುರುಬ ಜನಾಂಗ, ಮಿಕ್ಕೆಲ್ಲ ಹಿಂದುಳಿದ ಜಾತಿಗಳಿಗೆ ನಾಯಕತ್ವ ನೀಡಬೇಕೇ ಹೊರತು ಆಧಿಪತ್ಯ ಸಾಧಿಸಹೋದರೆ ಅದು ನಮಗೇ ಆಪತ್ತು....!

ಹಾಲುಮತ ಸಮಾವೇಶದ ವೇದಿಕೆಯೇರಿ ಸಿದ್ದು ಆಡಿದ ಈ ಮಾತುಗಳಿಗೂ ಇತ್ತೀಚೆಗೆ ತನ್ನ ಬೆಂಬಲಿಗರ ಸಮಾವೇಶದಲ್ಲಿ ಯಡ್ಡಿ ಆಡುತ್ತಿರುವ ಮಾತುಗಳಿಗೂ ಇರುವ ವ್ಯತ್ಯಾಸವಿದು. ತನ್ನ ಭಾಷಣದುದ್ದಕ್ಕೂ ಸಿದ್ದು ಯಾವುದೇ ಜಾತಿ-ನಾಯಕರ ವಿರುದ್ಧ ಚಕಾರವೆತ್ತಲಿಲ್ಲ, ಯಾರ ವಿರುದ್ಧ ಕಿಡಿಕಾರಲೂ ಇಲ್ಲ. ಅದೇರೀತಿ ಮತ್ತಷ್ಟು ಜಾತಿವಾದಿಗಳಾಗುವಂತೆ ಕುರುಬರನ್ನೂ ಪ್ರಚೋದಿಸಲಿಲ್ಲ. ಇದು ಸಿದ್ದು ಎಂಥಾ ಸೂಕ್ಷ್ಮ ಸಂವೇದನೆಯ ನಾಯಕನೆಂಬುದಕ್ಕೆ ನಿದರ್ಶನವಷ್ಟೇ.

ಹಾಲುಮತ ಸಮಾವೇಶದ ಯಶಸ್ಸು ಮತ್ತು ಈಶ್ವರಪ್ಪ, ವರ್ತೂರು ಥರದವರ ಗೈರು ಹಾಜರಿಯಿಂದಾಗಿ ಕುರುಬರ ಮಟ್ಟಿಗೆ ಸಿದ್ದು ಪ್ರಶ್ನಾತೀತ ನಾಯಕನೆಂಬುದು ನಿಚ್ಚಳಗೊಂಡಿದೆ. ಅಲ್ಲಿಗೆ ಸಿದ್ದು ಪಾಲಿಗೆ ಕಾಂಗ್ರೆಸ್ ಹಿತಶತ್ರುಗಳ ಬಾಯಿಯೂ ಬಂದಾಗಿದೆ. ಏಕೆಂದರೆ ಸದ್ಯ ಕಾಂಗ್ರೆಸ್ ಅಧಿಪತಿಗಳಂತಿರುವ ಖರ್ಗೆ, ಆಸ್ಕರ್, ಕೃಷ್ಣ, ಹರಿಪ್ರಸಾದ್, ಮೊಯ್ಲಿ, ಪರಮೇಶ್ವರ್ ಮುಂತಾದವರ್‍ಯಾರಿಗೂ ಸಿದ್ದು ಮುಖ್ಯಮಂತ್ರಿಯಾಗುವುದು ಬೇಕಿಲ್ಲ, ವಿಪರ್ಯಾಸವೆಂದರೆ ಸಿದ್ದು ಹೊರತಾಗಿ ತನ್ನ ಸ್ವಂತ ವರ್ಚಸ್ಸಿನಿಂದ ಕಾಂಗ್ರೆಸ್ಸನ್ನು ಅಧಿಕಾರಕ್ಕೆ ತರಬಲ್ಲ ಮತ್ತೊಬ್ಬ ಮಾಸ್ ಲೀಡರ್ ಕಾಂಗ್ರೆಸ್ಸಿನಲ್ಲಿಲ್ಲ.

ಏನೇ ಅಂದರೂ ಕೃಷ್ಣರನ್ನು ಒಕ್ಕಲಿಗರ್‍ಯಾರೂ ದೇವೇಗೌಡರ ಮಟ್ಟಕ್ಕೆ ಒಪ್ಪುವುದಿಲ್ಲ, ಖರ್ಗೆಯನ್ನು ದಲಿತರ ಹೊರತಾಗಿ ಮೇಲ್ಜಾತಿ ಕಾಂಗ್ರೆಸ್ಸಿಗರೇ ಸಹಿಸುವುದಿಲ್ಲ, ಇನ್ನು ಲಿಂಗಾಯತರಲ್ಲಿ ಯಡ್ಡಿಯಂತೆ ಲಿಂಗಾಯತರನ್ನೆಲ್ಲ ಒಗ್ಗೂಡಿಸಬಲ್ಲ ಕಾಂಗ್ರೆಸ್ಸಿಗರಿಲ್ಲ, ಜನಾರ್ದನ ಪೂಜಾರಿ ವೈಯಕ್ತಿಕವಾಗಿ ಸಮರ್ಥರಾದರೂ ಬೀದಿಗಿಳಿದು ಜನರನ್ನು ಸಂಘಟಿಸುವುದು ಕಷ್ಟ. ಮೊಯ್ಲಿಗೆ ಅವರದೇ ಆದ ಇತಿಮಿತಿಗಳಿವೆ. ಪರಮೇಶ್ವರ್ ಕಾಂಗ್ರೆಸ್ ನಿಷ್ಠೆ ಏನೇ ಇದ್ದರೂ ತಳಮಟ್ಟದಲ್ಲಿ ಹಿಡಿತವಿಲ್ಲ, ಹೆಚ್ಚೂಕಮ್ಮಿ ಎಸ್.ಎಂ. ಕೃಷ್ಣರ ಮಿನಿಯೇಚರ್‌ನಂತೆ ಕಾಣುವ ಪರಮೇಶ್ವರ್ ಆಗಲಿ, ಹಿಂದುಳಿದವರ ವಕಾಲತ್ತು ವಹಿಸುವ ಹರಿಪ್ರದಾಸ್ ಆಗಲಿ, ಲಿಂಗವಂತ ಶಾಮನೂರು ಶಿವಶಂಕರಪ್ಪನವರಾಗಲಿ, ದಲಿತರ ಮುಖವಾಣಿಯಂತೆ ಪೋಜು ಕೊಡುವ ಕೆ.ಎಚ್. ಮುನಿಯಪ್ಪನವರಾಗಲಿ ಅವರ ಮಟ್ಟಿಗೆ ನಾಯಕರೇ ಹೊರತು ರಾಜ್ಯಮಟ್ಟದಲ್ಲಿ ವರ್ಚಸ್ಸಿಲ್ಲ.

ಹಾಗೆ ನೋಡಿದರೆ ಬಂಗಾರಪ್ಪ ನಂತರ ಕರ್ನಾಟಕದ ರಾಜಕಾರಣ ಕಂಡ ಮಾಸ್ ಲೀಡರ್ ಎಂದರೆ ಅದು ಸಿದ್ದುವೆ. ಬೆನ್ನಿಗೆ ಪ್ರಭಾವಶಾಲಿ ಜನಸಮೂಹವಿದೆ. ಯಾವುದೇ ಹಗರಣ ಕರ್ಮಕಾಂಡಕ್ಕೆ ಸಿಲುಕಿ ಮುಖ ಕೆಡಿಸಿಕೊಂಡಿಲ್ಲ, ಇನ್ಯಾವುದೇ ಜನಾಂಗದ ವಿರೋಧವನ್ನು ಕಟ್ಟಿಕೊಂಡಿಲ್ಲ, ಜೊತೆಗೆ ಅಹಿಂದ ಚಳವಳಿ ಬೇರೆ ಬೆನ್ನಿಗಿದೆ. ಬಹುಶಃ ಇದೆಲ್ಲವನ್ನೂ ಲೆಕ್ಕ ಹಾಕಿಯೇ ಇರಬೇಕು ಮೊನ್ನೆ ತುಮಕೂರಿಗೆ ಬಂದು ಸಿದ್ಧಗಂಗಾ ಸ್ವಾಮಿಗಳ ಕಾಲಿಗೆ ಬಿದ್ದ ಸೋನಿಯಾ ಮೇಡಮ್ ವೇದಿಕೆಯ ಮೊದಲ ಸಾಲಿಗೆ ಕೃಷ್ಣರ ಜೊತೆ ಕೂರಿಸಿದ್ದು ಸಿದ್ದು ಒಬ್ಬರನ್ನೇ.

ಇದು ಕಾಂಗ್ರೆಸ್ಸಿಗೆ ಸಿದ್ದು ಎಷ್ಟೊಂದು ಅನಿವಾರ್ಯವೆಂಬುದು ಸೂಚಿಸುತ್ತದೆ. ಈ ಹಿನ್ನೆಲೆಯಲ್ಲೇ ನೋಡಿದರೆ ದಾವಣಗೆರೆಯ ಹಾಲುಮತ ಸಮಾವೇಶವೆಂಬುದು ಕಾಂಗ್ರೆಸ್ ಪಾಲಿಗೆ ಸಿದ್ದು ಮಹತ್ವವೇನೆಂಬುದನ್ನು ಸಾರಿ ಹೇಳಿದೆ. ಸದ್ಯಕ್ಕಂತೂ ಸಿದ್ದು ಬಿಟ್ಟರೆ ಕಾಂಗ್ರೆಸ್ ಪಾಲಿಗೆ ಬೇರೆ credible face ಗಳೇ ಕಾಣಿಸುತ್ತಿಲ್ಲ.



ಮುಖ್ಯ ಅತಿಥಿಗಳ ಪಟ್ಟಿಗೆ ಸೇರಿಸಲಾಗಿತ್ತು, ಆದರೆ ಸಿದ್ದರಾಮಯ್ಯನವರ ಹೆಸರು ಈಶ್ವರಪ್ಪನವರಿಗಿಂತಲೂ ಮೇಲಿತ್ತು, ಯಾವತ್ತು ಆಹ್ವಾನ ಪತ್ರಿಕೆ ಕಣ್ಣಿಗೆ ಬಿತ್ತೋ ಮುಖ್ಯಮಂತ್ರಿ ಸದಾನಂದಗೌಡರನ್ನು ಕರೆದು ಸನ್ಮಾನಿಸುವ ತನ್ನ ಹುನ್ನಾರ ಫಲಿಸಲಿಲ್ಲವೋ ಈಶ್ವರಪ್ಪ ತಲೆ ಕೆಟ್ಟಿದೆ; ಇಲ್ಲಾ ಆವತ್ತು ಪಕ್ಷದ ಮಹತ್ವದ ಸಭೆ ಇದೆ ಎಂದು ಪಿಳ್ಳೆನೆಪವೊಡ್ಡಿದ್ದಾರೆ. ಬಹುಶಃ ಅದು ಬಿಜೆಪಿಯ ಕುತಂತ್ರವಾಗಿರಲೂಬಹುದು.

...ಲಕ್ಷೇ ಕುರುಬ ಸಮೂಹ ಜಾಗೃತಿಗಾಗಿ ನಡೆದ
...ದಲ್ಲಿ ಜನಾಂಗದ ಹೆಣ್ಣುಮಕ್ಕಳಿಗೆ ಕಡ್ಡಾಯ
...ರದಕ್ಷಿಣೆ ನಿಷೇಧ, ಯುವಕರಿಗೆ ಪಾನನಿಷೇಧ
...ಉದಾತ್ತ ಧ್ಯೇಯಗಳನ್ನು ಹೊತ್ತೇ ನಡೆದ
...ವವದು. ಆದರೆ ಇದಕ್ಕಿಂತಲೂ ಮುಖ್ಯವಾಗಿ
...ರ್ಕಾರ ಅಧಿಕಾರಕ್ಕೆ ಬಂದ ಮೇಲೆ ಮುಖ್ಯಮಂತ್ರಿ
...ರಪ್ಪ 'ಸಾದರು' ಜಾತಿಯವರನ್ನು ಪ್ರವರ್ಗ 2ಎ
...ಗೆ ಅಳವಡಿಸಿದ್ದು ಇಡೀ ಕುರುಬ ಸಮೂಹವನ್ನೇ
...ಸಿತ್ತು, ಕೋಲಾರದ ಗಡಿಯಲ್ಲಿರುವ 'ಸಾದರು'
...ಸಾದರ ಲಿಂಗಾಯತರಿಗೂ ಅಜಗಜಾಂತರ

ಇಷ್ಟೆಲ್ಲ ಕುತಂತ್ರ ಅಡೆತಡೆಗಳ ನಡುವೆಯೂ ದಾವಣಗೆರೆ ಸಮಾವೇಶ ಅಭೂತ ಪೂರ್ವವಾಗಿತ್ತು, ಹಾಕಿದ್ದು 1 ಲಕ್ಷದಷ್ಟು ಕುರ್ಚಿಗಳಾದರೂ ಇಡೀ ಮೈದಾನ ತುಂಬಿತುಳುಕಿತ್ತು, ಇನ್ನೂ ವಿಶೇಷವೆಂದರೆ ಹೆಸರಿಗಿದು ಹಾಲುಮತ ಸಮಾವೇಶವಾದರೂ ಕುರುಬ ಸಮೂಹದ ರಕ್ತಗತ ಔದಾರ್ಯದ ಪ್ರತೀಕವಾಗಿ ಎಲ್ಲಾ ಹಿಂದುಳಿದ ಜಾತಿಗಳ ಪ್ರಮುಖರನ್ನೂ ವಿಶೇಷ ಆಹ್ವಾನಿತರಾಗಿ ಬರಮಾಡಿಕೊಳ್ಳಲಾಗಿತ್ತು, ಈಡಿಗರ ಸಂಘ, ತಿಗಳರ ಸಂಘ,



...ದೆ. ಹೆಚ್ಚೆಂದರೆ ಹದಿನೈದೋ ಇಪ್ಪತ್ತೋ
...ರುವ ಸಾದರನ್ನು ಪ್ರವರ್ಗ 2ಎಗೆ ಯಡ್ಡಿ
... ಲಿಂಗಾಯತ ವರ್ಗದ ಬಹುಸಂಖ್ಯಾತ ಸಾದರ
...ತರೆಲ್ಲ ತಾವೂ 2ಎಗೆ ಸೇರುತ್ತೇವೆಂದು ನಕಲಿ
...ಣಪತ್ರ ಪಡೆಯತೊಡಗಿದರು. ಕುರುಬರ
...ಗೂ ಕೈಯಿಟ್ಟು ಉದ್ಯೋಗ, ಶಿಕ್ಷಣಾವಕಾಶಗಳನ್ನು
...ಡಗಿದರು.

...ರ ಜಾತಿಗೂ ಸಾದರ ಲಿಂಗಾಯತರಿಗೂ
...ತ್ಯಾಸವೇ ಮರೆಯಾಗಿ ಕುರುಬರ
... ಸೌಲಭ್ಯಕ್ಕೆ ಧಕ್ಕೆಯಾಗಿದ್ದು, ಅದು
...ಗಿ ಲಿಂಗಾಯತರ
...ಡಗಿದ್ದು ಕುರುಬರ
...ವ ಮೂಲಕಾರಣ.
...ದುಕಿಗೇ
...ಟ್ಟು ಬಿಜೆಪಿ ಮತ್ತು
...ರಪ್ಪನವರ ವಿರುದ್ಧ
...ಗೇ ಕುರುಬ
... ರೊಚ್ಚಿಗೆದ್ದಿದೆ. ಈ
...ವ ವಿರುದ್ಧ
...ವುದು
...ವಾಗೇ ಹಾಲುಮತ
...ಶ ರೂಪುಗೊಂಡಿದೆ.



...ವೇಶದ ಹಿನ್ನೆಲೆಯಲ್ಲಿ ಕುರುಬರ ನಾಯಕರಾದ
...ಮಚಂದ್ರಪ್ಪ ಇತ್ಯಾದಿಯಾಗಿ ಮೊದಲು ಕಂಡಿದ್ದೇ
...ಜಾಧ್ಯಕ್ಷ ಈಶ್ವರಪ್ಪನವರನ್ನು, ಏಕೆಂದರೆ ಇದು
... ಪಕ್ಷದ ಪರ ಸಮಾವೇಶವಲ್ಲ ಎಂಬ ಭಾವನೆ
... ಎಂದೇ ಸಾಕಷ್ಟು ಎಚ್ಚರ ವಹಿಸಿ
...ವರನ್ನು ಆಹ್ವಾನಿಸಲಾಗಿತ್ತು, ಆರಂಭದಲ್ಲಿ ನಾನು
... ಬರ್ತೀನಿ ಎಂದೇ ಮಾತು ಕೊಟ್ಟಿದ್ದ ಈಶ್ವರಪ್ಪ
...ಗೆಯಲ್ಲಿ ಉಲ್ಟಾ ಹೊಡೆದಿದ್ದೇ ಮುಖ್ಯಮಂತ್ರಿ
...ಗೌಡರಿಗೆ ಸನ್ಮಾನ ಮಾಡೋದಾದ್ರೆ ಮಾತ್ರ
...ದು ರೊಳ್ಳೆತೆಗೆದರು.

ಮಿಂಚಿದ ಸಿದ್ದು

... ಕುರುಬರ ಸಮಾವೇಶವನ್ನೇ ಹೈಜಾಕ್ ಮಾಡುವ
...ನ್ನಾರ ಸಮಾಜದ ನಾಯಕರಿಗೆ ಅರ್ಥವಾಗಿತ್ತು,
...ತಂತ್ರಕ್ಕೆ ಸಮಾವೇಶ ಬಲಿಯಾಗದಿರಲಿ ಎಂಬ
... ಆಹ್ವಾನ ಪತ್ರಿಕೆಯಲ್ಲಿ ಈಶ್ವರಪ್ಪನವರ ಹೆಸರನ್ನು

ಹೆಳವ ಸಮಾಜ ಬಲಿಜ ಸಂಘ, ಬಿಲ್ಲವ ಅಸೋಸಿಯೇಷನ್, ಕುರುಹಿನಸೆಟ್ಟಿ ಸಂಘ, ತೊಗಟವೀರರ ಸಂಘ, ಭಾವಸಾರ ಕ್ಷತ್ರಿಯ ಸಮಾಜ, ಪದ್ಮಸಾಲಿ ಸಂಘ, ಹಡಪದ ಸಮಾಜ ಸೇವಾಸಂಘ, ಕುಂಬಾರರ ಸಂಘ, ಮಡಿವಾಳರ ಸಂಘ, ವಿಶ್ವಕರ್ಮ ಸಮಾಜ, ಗಾಣಿಗರ ಸಂಗ, ಸವಿತಾ ಸಮಾಜ, ಕ್ಷತ್ರಿಯ ದೇವಾಂಗ ಸಂಘ, ನಾಮದೇವ ಸಿಂಪಿ ಸಮಾಜ... ಹೀಗೆ ಕರ್ನಾಟಕದ ಮೂವತ್ತಕ್ಕೂ ಅಧಿಕ ಸಣ್ಣಪುಟ್ಟ ಜಾತಿಗಳೆಲ್ಲದರ ನಾಯಕರು, ಪದಾಧಿಕಾರಿಗಳನ್ನು ವೇದಿಕೆಗೆ ಆಹ್ವಾನಿಸಲಾಯಿತು.

ಬಹುಶಃ ಬೇರೆ ಯಾವುದೇ ಪ್ರಮುಖ ಜಾತಿಯೊಂದರ ಸಮಾವೇಶ ಈ ಮಟ್ಟದಲ್ಲಿ ಮಿಕ್ಕೆಲ್ಲಾ ಜಾತಿ-ವರ್ಗಗಳ ಪ್ರಾತಿನಿಧಿತ್ವವನ್ನು ಗಳಿಸಲು ಸಾಧ್ಯವೇ ಇಲ್ಲ, ಆ ಮಟ್ಟಿಗೆ ಹಾಲುಮತ ಸಮಾವೇಶ ಸಣ್ಣಪುಟ್ಟ ಜಾತಿಗಳ ಬೆಂಬಲ ಗಳಿಸಿತ್ತು, ಇನ್ನೊಂದರ್ಥದಲ್ಲಿ ಇದು ಅಹಿಂದ ಸಮಾವೇಶವೇ ಆಗಿತ್ತು.

ಇನ್ನು ಸಿದ್ದರಾಮಯ್ಯನವರ ಭಾಷಣವಂತೂ ಅಂಬೇಡ್ಕರ್ ತತ್ವವನ್ನೇ ಮತ್ತೆ ಮತ್ತೆ ಪ್ರತಿಪಾದಿಸಿದಂತಿತ್ತು, ಎಲ್ಲೂ ಜಾತಿವಾದಿಯಾಗಿ ಸಿದ್ದು ಮಾತಾಡಲಿಲ್ಲ, ಕುರುಬರು ಸೇರಿದಂತೆ ಹಿಂದುಳಿದ ವರ್ಗದ ಎಲ್ಲಾ ಜಾತಿಗಳಿಗೆ ಹೇಗೆ ಅಂಬೇಡ್ಕರ್‌ವಾದವೆಂಬುದು ಅನಿವಾರ್ಯ ಎಂಬುದನ್ನು ಸಿದ್ದು ಒತ್ತಿ ಹೇಳಿದರು. ನಿರಂಜನಾನಂದಪುರಿ ಸ್ವಾಮೀಜಿ ಕೂಡ ಕೆಳಜಾತಿಗಳ ಜೊತೆ ಕುರುಬರ ಐಕ್ಯತೆಯನ್ನೇ ಪ್ರತಿಪಾದಿಸಿದರು.

ಅಲ್ಲಿಗೆ ಸಿದ್ದುವನ್ನು ಕುರುಬರ ನಾಯಕ, ಜಾತಿವಾದಿ ಎಂಬ ಹಣೆಪಟ್ಟಿ ಕಟ್ಟುವ ಬಿಜೆಪಿ ಹುನ್ನಾರವೇ ತಲೆಕೆಳಕಾಗಿತ್ತು, ಅಷ್ಟೇ ಅಲ್ಲ, ಕುರುಬರ ಮೀಸಲಾತಿಗೆ ಕೈಯಿಟ್ಟು, ಆರ್ಥಿಕವಾಗಿ ಆ ಜನಾಂಗವನ್ನು ಹಣಿಯುವ ಬಿಜೆಪಿ ಹುನ್ನಾರವೂ ಬಯಲಾಗಿತ್ತು, ಒಂದಂತೂ ಸ್ಪಷ್ಟ, ಕುರುಬರು ಎದ್ದು ನಿಂತಿದ್ದಾರೆ. ಅಪ್ಪಮುತಗಳ ಪುರೋಹಿತವರ್ಗದ ಜಾಗದಲ್ಲಿ ಬಿಜೆಪಿಯಿದ್ದರೆ ರೊಚ್ಚಿಗೆದ್ದ ಕನಕನ ಪ್ರತೀಕವಾಗಿ ಕುರುಬ ಸಮೂಹದ ರಣಕಹಳೆ ಕೇಳಿಬರುತ್ತಿದೆ.



ಕಠಾರಿ ವೀರ ಹೊಸ ಸೆಟ್ಟು ಹಳೆ ಡೈಲಾಗು

ಕನ್ನಡ ಚಿತ್ರರಂಗದ ಅತ್ಯಂತ ಅದ್ದೂರಿಯ, ವಿವಾದಾತ್ಮಕ ಮತ್ತು ಮೊತ್ತಮೊದಲ ತ್ರೀಡಿ ತಾಂತ್ರಿಕತೆಯನ್ನು ಹೊಂದಿರುವ 'ಕಠಾರಿವೀರ ಸುರಸುಂದರಾಂಗಿ' ಚಿತ್ರ ತೆರೆಕಂಡಿದೆ. ತೆಲುಗಿನ ಸುರೇಶ್ ಕೃಷ್ಣ ನಿರ್ದೇಶನದ ಈ ಚಿತ್ರದಲ್ಲಿ ಉಪೇಂದ್ರ, ರಮ್ಯಾ ಮತ್ತು ಅಂಬರೀಶ್ ನಟಿಸಿದ್ದಾರೆ. ಆದರೂ 'ಕಠಾರಿವೀರ...' ಪ್ರೇಕ್ಷಕನಿಗೆ ಅಷ್ಟೇನೂ ಮುದನೀಡುವುದಿಲ್ಲ.

ಈ ವರ್ಷ ಬಿಡುಗಡೆಗೊಂಡಿರುವ ಯಾವ ಕನ್ನಡ ಚಿತ್ರವೂ ಬಿಡುಗಡೆಯ ಮುನ್ನ ಹುಟ್ಟುಹಾಕಿದ್ದಷ್ಟು ನಿರೀಕ್ಷೆಯನ್ನು ಬಾಕ್ಸ್ ಆಫೀಸಿನಲ್ಲಿ ಉಳಿಸಿಕೊಳ್ಳಲಿಲ್ಲ. 'ಕಠಾರಿವೀರ...' ನೂ ಅದೇ ಸಾಲಿಗೆ ಸೇರುತ್ತದೆ. ಮೊನ್ನೆ ಮೊನ್ನೆಯಷ್ಟೆ ತೆರೆಕಂಡ ಪುನೀತ್ ರಾಜ್‌ಕುಮಾರ್ ಅಭಿನಯದ 'ಅಣ್ಣಾ ಬಾಂಡ್' ಚಿತ್ರಕ್ಕೆ ಹೋಲಿಸಿದರೆ 'ಕಠಾರಿವೀರ...' ಪರವಾಗಿಲ್ಲ ಎನಿಸುತ್ತದೆ. ವಿರಾಮದ ಮೊದಲು ಚಿತ್ರ ನೋಡುಗರನ್ನು ರಂಜಿಸುತ್ತಾ ಒಂದು ಹೊಸ ಲೋಕಕ್ಕೆ ಕೊಂಡೊಯ್ದರೂ ವಿರಾಮದ ನಂತರ ಕಥೆ ಕುಂಟುತ್ತಾ ಸಾಗುವುದರಿಂದ ಬೋರ್ ಹೊಡೆಸುತ್ತದೆ.

ಈ ಚಿತ್ರದಲ್ಲಿ ತ್ರೀಡಿ ತಾಂತ್ರಿಕತೆಯಿದ್ದರೂ ಅದರಿಂದ ಚಿತ್ರಕ್ಕೆ ವಿಶೇಷವಾದ ಮೆರುಗೇನೂ ಸಿಕ್ಕಿಲ್ಲ. ಚಿತ್ರ ನೋಡುವಾಗ ಪ್ರೇಕ್ಷಕನಿಗೆ ತ್ರೀಡಿ ತಂತ್ರಜ್ಞಾನದಿಂದಾಗಿ ಪುಳಕವಾಗಲಿ, ರೋಮಾಂಚನವಾಗಲಿ ಆಗುವುದೇ ಇಲ್ಲ. ಕೇವಲ ನಾಲ್ಕೈದು ಬಾರಿ ಮಾತ್ರ ತ್ರೀಡಿ ತಾಂತ್ರಿಕತೆಯ ಅನುಭವ ಪ್ರೇಕ್ಷಕರಿಗೆ ಸಿಗುತ್ತದೆ. ಹಾಲಿವುಡ್‌ನ 'ಅವತಾರ್' ಅಥವಾ ಭಾರತದ ಮೊದಲ ತ್ರೀಡಿ ಚಿತ್ರ 'ಮೈ ಡಿಯರ್ ಕುಟ್ಟಿಚಾತನ್' ನೋಡಿದಾಗ ಆದ ದಿವ್ಯ ಅನುಭವವನ್ನು ಈ ಚಿತ್ರದಲ್ಲಿ ನೀವು ನಿರೀಕ್ಷಿಸಿದರೆ ನಿಮಗೆ ಖಂಡಿತವಾಗಿ ನಿರಾಶೆಯಾಗುತ್ತದೆ.

ಕನ್ನಡ ಸಿನಿಮಾಗಳಲ್ಲಿ ಹಿಂದೆಂದೂ ಕಾಣದಂತಹ ಭವ್ಯವಾದ ಸೆಟ್ಟುಗಳು ಈ ಸಿನಿಮಾದಲ್ಲಿದ್ದು ಅವು ಪ್ರೇಕ್ಷಕರ ಕಣ್ಣು ಕುಕ್ಕುತ್ತವೆ. 'ಕಠಾರಿವೀರ...'ನ ಮೇಲೆ ತೆಲುಗಿನ 'ಯಮದೊಂಗ', 'ಯಮಗೋಲ', 'ಜಗದೇಕ ವೀರುಡು ಅತಿಲೋಕ ಸುಂದರಿ' ಮೊದಲಾದ ಚಿತ್ರಗಳ ಪ್ರಭಾವ ಕಾಣಿಸುತ್ತದೆ. ಹಾಗೆಯೇ ಕನ್ನಡದೇ ಚಿತ್ರಗಳಾದ 'ಇಂದ್ರನನ್ನು ಗೆದ್ದ ನರೇಂದ್ರ', 'ಹಲೋ ಯಮ' ಚಿತ್ರಗಳ ಒಂದಿಷ್ಟು ಪ್ರಭಾವವೂ ಕಾಣಿಸುತ್ತದೆ. ಅಂದರೆ ಸುಮಾರು ನಾಲ್ಕೈದು ಚಿತ್ರಗಳಿಂದ ಒಳ್ಳೆಯ ಅಂಶಗಳನ್ನು ಎತ್ತಿಕೊಂಡು ತುಂಬ ಜಾಣ್ಮೆಯಿಂದ ಈ ಚಿತ್ರದ ಕತೆಯನ್ನು ಹೆಣೆದಿದ್ದಾರೆ.

ತೆಲುಗಿನ 'ಯಮದೊಂಗ' ಚಿತ್ರವನ್ನು ಕನ್ನಡಕ್ಕೆ ಜಾಣ್ಮೆಯಿಂದ ಭಟ್ಟಿ ಇಳಿಸಿರುವ ಉಪೇಂದ್ರ ಅದಕ್ಕೆ ತನ್ನ ಮಾಮೂಲಿ ಡೈಲಾಗ್‌ಗಳ ಲೇಪನವನ್ನು ಹಚ್ಚಿ ಪ್ರೇಕ್ಷಕರನ್ನು ರಂಜಿಸುತ್ತಾರೆ. ಹಾಗೆ ನೋಡಿದರೆ ಉಪೇಂದ್ರ ಅವರ ಹಳೆ ಚಿತ್ರಗಳ ಡೈಲಾಗ್‌ಗಳೇ ಇಲ್ಲಿ ಮತ್ತೆ ರಿಪೀಟ್ ಆಗುತ್ತದೆಯೇ ವಿನಃ ಉಪ್ಪಿ ಬತ್ತಳಿಕೆಯಿಂದ ಹೊಸ ಡೈಲಾಗ್‌ಗಳು ಹೊರಬಂದಿಲ್ಲ. ಯಮರಾಜನಾಗಿ ನಟಿಸಿರುವ ಅಂಬರೀಶ್ ತಮ್ಮ ಪಾತ್ರಕ್ಕೆ ಜೀವ ತುಂಬಿದ್ದಾರೆ. ನಾಯಕಿ ರಮ್ಯಾ ಸುರಸುಂದರಿಯಾಗಿ ಕಾಣಿಸಿಕೊಂಡದ್ದನ್ನು ಹೊರತುಪಡಿಸಿಕೊಂಡರೆ ಅವರಿಗೆ ನಟನೆಗೆ ಈ ಚಿತ್ರದಲ್ಲಿ ಅವಕಾಶವೇ ಇಲ್ಲ.

ರಾಜ್ಯ ಪ್ರಶಸ್ತಿ ವಿಜೇತ ಕಥೆಗಾರ ಎಂಬ ಹೆಗ್ಗಳಿಕೆಯ ಮುನಿರತ್ನ ಅವರಿಗೆ ಕಥೆಯ ವಿಷಯದಲ್ಲಿ ಶಹಭಾಶ್ ಎನ್ನಲು ಸಾಧ್ಯವೇ ಇಲ್ಲ. ಆದರೆ ಒಬ್ಬ ನಿರ್ಮಾಪಕನಾಗಿ ಇಂತಹ ಅದ್ದೂರಿಯ ಚಿತ್ರ ನಿರ್ಮಾಣ ಮಾಡುವ ಸಾಹಸಕ್ಕೆ ಕೈ ಹಾಕಿದ್ದನ್ನು ಮಾತ್ರ ಮೆಚ್ಚಲೇಬೇಕು.


ಈ ಚಿತ್ರದಲ್ಲಿ ವೇಣು ಅವರ ಛಾಯಾಗ್ರಹಣದ ಬಗ್ಗೆ ಭೇಷ್ ಎನ್ನಲೇ ಬೇಕು. ಆದರೆ ಸಂಗೀತ ನಿರ್ದೇಶಕ ಹರಿಕೃಷ್ಣ ನಿರಾಶೆ ಮೂಡಿಸುತ್ತಾರೆ. ಬಹುಶಃ ಅವರು ಒಂದೆರಡು ಹಾಡುಗಳಿಗೆ ಒಳ್ಳೆಯ ಟ್ಯೂನ್ ಕೊಟ್ಟಿದ್ದರೆ ಈ ಚಿತ್ರಕ್ಕೆ ಸಹಾಯವಾಗುತ್ತಿತ್ತೋ ಏನೋ. ಚಿತ್ರದ ಆರಂಭದಲ್ಲಿ ಕಿಚ್ಚ ಸುದೀಪ್ ನೀಡುವ ಕಾಮೆಂಟರಿ ಕೂಡ ಅಷ್ಟೇನೂ ಪರಿಣಾಮಕಾರಿಯಾಗಿಲ್ಲ. ಹೀಗಾಗಿ ಈ ಚಿತ್ರ ಯಾವುದೇ ಲಾಜಿಕು ಮತ್ತು ಮ್ಯಾಜಿಕಿಗೆ ಅಂಟಿಕೊಂಡಿಲ್ಲ.



ಏನಿದ್ದರೂ ಉಪೇಂದ್ರ ಅವರ ಹಳೆ ಚಿತ್ರಗಳ ಡೈಲಾಗ್‌ಗಳನ್ನು ಮತ್ತೊಮ್ಮೆ ಕೇಳಿ [illegible] ಆನಂದಪಡಬಹುದಷ್ಟೆ.

– ಶ್ರೀಶೈ

ಬಳ್ಳಾರಿ ರೆಡ್ಡಿ ಹವಾ ಕಾಂಗ್ರೆಸ್ ಧಂಡಾ!



ಶತಮಾನಕ್ಕಿಂತಲೂ ಉದ್ದನೆಯ ಇತಿಹಾಸವಿರುವ ಕಾಂಗ್ರೆಸ್ ಪಕ್ಷಕ್ಕೆ ಬಳ್ಳಾರಿಯಲ್ಲಿ ಇಂತಹ ದಯನೀಯ ಸ್ಥಿತಿ ಬಹುಶಃ ಎಂದೂ ಎದುರಾಗಿರಲಿಲ್ಲ. ದೇಶಕ್ಕೆ ಸ್ವಾತಂತ್ರ್ಯ ಬಂದನಂತರ ಬಳ್ಳಾರಿ ಜಿಲ್ಲೆಯಾದ್ಯಂತ ಕಾಂಗ್ರೆಸಿನ ಝುಂಡಾ ಈಗಿನಂತೆ ಎಂದೂ ಮುರಿದು ಬಿದ್ದಿರಲಿಲ್ಲ. ಹೊಸ ಝುಂಡಾವನ್ನು ಹಾರಿಸುವ ತಾಕತ್ತು ಜಿಲ್ಲೆಯ ಯಾವ ಕಾಂಗ್ರೆಸ್ ನಾಯಕನಿಗೂ ಇದ್ದಂತಿಲ್ಲ.

ವಿಚಿತ್ರವೆಂದರೆ ಕಾಂಗ್ರೆಸ್ ಇಂತಹ ಪರಿಸ್ಥಿತಿಯನ್ನು ಎದುರಿಸುತ್ತಿರುವಾಗ ಅಕ್ರಮ ಗಣಿಗಾರಿಕೆಯಿಂದಾಗಿ ಜನಾರ್ದನ ರೆಡ್ಡಿ ಜೈಲು ಪಾಲಾಗಿದ್ದರೂ ಜಿಲ್ಲೆಯಲ್ಲಿ ರೆಡ್ಡಿಗಳ ಸದ್ದು ಕಿಂಚಿತ್ತೂ ಅಡಗಿಲ್ಲ. ಈಗ ಬಳ್ಳಾರಿಯೆಂಬ ನಗರವನ್ನು ಹೊಕ್ಕರೆ ರಣಬಿಸಿಲ ಜೊತೆಗೇ ರೆಡ್ಡಿಗಳ ಅಬ್ಬರವೂ ರಣಕೇಕೆ ಹಾಕುತ್ತಿದೆ.

ದುರ್ದೈವದ ಸಂಗತಿಯೆಂದರೆ ಮೊಣಕಾಲು ನೋವು, ಸೊಂಟಬಾಧೆ, ಇತ್ಯಾದಿಗಳಿಂದ ನರಳುತ್ತಿರುವ ಮುದಿಯರ ಕೈಗಳಲ್ಲಿ ಬಳ್ಳಾರಿಯ ಭವಿಷ್ಯವನ್ನು ಇಡುವ ಮೂಲಕ ಕಾಂಗ್ರೆಸ್ ಪಕ್ಷ ರಾಜಕೀಯ ಹೇಡಿತನವನ್ನು ತೋರಿದೆ. ಇಂತಹ ಪರಿಸ್ಥಿತಿಯಲ್ಲಿ ಯಾರು ದಿಕ್ಕು ಬಳ್ಳಾರಿಗೆ?

ಜನಾರ್ದನ ರೆಡ್ಡಿ ಜೈಲು ಸೇರಿದ ಮೇಲೆ ಇಲ್ಲಿನ ಪ್ರಜ್ಞಾವಂತರು ನಿಟ್ಟುಸಿರು ಬಿಟ್ಟಿದ್ದರು. ಕೊಲೆ ಮಾಡಿದವನಿಗೆ ಶಿಕ್ಷೆ ಆಗೇ ಆಗುತ್ತದೆ ಎಂದು ಅವರೆಲ್ಲ ನಂಬಿದ್ದರು. ಇನ್ನು ಮೇಲಾದರೂ ಬಳ್ಳಾರಿಯಲ್ಲಿ ರೆಡ್ಡಿ ರಾಜಕಾರಣ ಮಗ್ಗುಲು ಬದಲಾಯಿಸುತ್ತದೆ ಎಂದು ಆಶಿಸಿದ್ದರು. ಆದರೆ ಇವತ್ತು ಅಂತಹವರಿಗೆಲ್ಲ ನಿರಾಶೆಯಾಗಿದೆ. ಅದಕ್ಕಿಂತಲೂ ದೊಡ್ಡ ದುರಂತ ಯಾವುದೆಂದರೆ ಬಳ್ಳಾರಿಯ ಬಹಳಷ್ಟು ಮತದಾರರು "ರೆಡ್ಡಿ ಜೈಲು ಸೇರಿರುವುದು ಏನು ಮಹಾ" ಎಂಬ ತಾತ್ಸಾರವನ್ನು ವ್ಯಕ್ತಪಡಿಸುತ್ತಿರುವುದು.

ಜನಾರ್ದನ ರೆಡ್ಡಿಯ ಮನೆಯ ಮೇಲೆ ಸಿಬಿಐ ಮಾಡಿದಾಗ ಸಿಕ್ಕ ಕೋಟ್ಯಾಂತರ ರೂಪಾಯಿ ಹಣ ವಜ್ರ ವೈಢೂರ್ಯ ಇಡೀ ದೇಶವನ್ನೇ ಬೆಚ್ಚಿಬಿ ರೆಡ್ಡಿ ಜೈಲುಪಾಲಾದ ನಂತರ ಆರ್ಥಿಕವಾಗಿ ರಾಜಕೀಯವಾಗಿಯೂ ಅವರು ಅಂತ್ಯಗೊಂಡರು ಎಲ್ಲರೂ ಭಾವಿಸಿದ್ದರು. ಆದರೆ ಅದೆಲ್ಲ ಈಗ ಸು ಜನಾರ್ದನ ರೆಡ್ಡಿ ಕಳೆದ ಎಂಟು ತಿಂಗಳುಗಳಿಂದ ಎಣಿಸುತ್ತಿದ್ದರೂ ಹೊರಗೆ ಆತನ ಮಿತ್ರ ಶ್ರೀರಾ ರೆಡ್ಡಿ ಗ್ಯಾಂಗಿನ 'ಹವಾ'ವನ್ನು ಉಳಿಸಿಕೊಂಡಿದ್ದಾನೆ. ಪಕ್ಷವನ್ನು ಶ್ರೀರಾಮುಲು ತೊರೆದಿದ್ದರೂ, ಆ ವಿರುದ್ಧ ಬಂಡಾಯವೆದ್ದಿದ್ದರೂ ಜಿಲ್ಲೆಯಾದ್ಯಂತ ಆತ ರೆಡ್ಡಿಗಳ ಹವಾ ಮೈಂಟೇನ್ ಮಾಡುತ್ತಿದ್ದಾನೆಂದ ಪ್ರದೇಶದ ಮೇಲೆ ರೆಡ್ಡಿ ಗ್ಯಾಂಗಿನ ಹಣ ಬಲ, ಜ ಮತ್ತು ತೋಳ್ಬಲ ಎಂತಹದ್ದಾಗಿದೆ ಎಂದು ಊಹಿಸಬ

ಇಂತಹ ಪರಿಸ್ಥಿತಿಯಲ್ಲಾದರೂ ಕಾಂಗ್ರೆ ಎಚ್ಚೆತ್ತುಕೊಂಡು ಜನಾರ್ದನ ರೆಡ್ಡಿಯ ಅನುಪಸ್ಥಿತಿ ಬಳಸಿಕೊಳ್ಳುವ ತಂತ್ರವನ್ನು ಹೊಸೆಯಬಹುದಿತ್ತು. ಕಾಂಗ್ರೆಸ್ ಹಾಗೆ ಮಾಡಿಲ್ಲ. ಆ ಪಕ್ಷದ ಯಾವ ನಾಯ ಬೀದಿಗಿಳಿದು ಹೋರಾಟ ಮಾಡಿಲ್ಲ. ಜನರ ವಿಶ್ವಾ ಗಳಿಸಲು ಮುಂದಾಗಿಲ್ಲ. ರೆಡ್ಡಿಗಳ ಸೊಕ್ಕು ಮುರಿ ಧೈರ್ಯ ತೋರಿಲ್ಲ. ಇದು ಕಾಂಗ್ರೆಸ್ ಪಕ್ಷದ ದ ಮಾತ್ರವಲ್ಲ, ಬಳ್ಳಾರಿಯ ದುರಂತವೂ ಹೌದು.

ಈ ಎಲ್ಲದರ ಹಿನ್ನೆಲೆಯಲ್ಲಿ ಬಳ್ಳಾರಿ ಆಗಿರುವುದನ್ನು, ಆಗುತ್ತಿರುವುದನ್ನು ಸೆರೆ ಹಿಡಿ ಚಿತ್ರಣಗಳು ಇಲ್ಲಿವೆ.

• ಟಿ.ಎನ್.ಷಣ

ಕಾಂಗ್ರೆಸ್ಸಿಗರ ಜಗಳದಲ್ಲಿ ಜನ್ಮವೆತ್ತ ರಾಕ್ಷಸರು

ಒಂದು ಕಾಲದಲ್ಲಿ ಬಳ್ಳಾರಿ ಜಿಲ್ಲೆಯು ಕಾಂಗ್ರೆಸ್ ಪಕ್ಷದ ಭದ್ರಕೋಟೆ ಎಂತಿತ್ತು, ಗೆಜ್ಜಗಟ್ಟದ ಬಸವರಾಜೇಶ್ವರಿ ಬಳ್ಳಾರಿಯ ಕಾಂಗ್ರೆಸ್ ನಾಯಕಿ ಆಗಿರುವವರೆಗೂ ಎಲ್ಲವೂ ಸರಿ ಇತ್ತು. ಆದರೆ ಯಾವಾಗ ಬಸವರಾಜೇಶ್ವರಿ ಶಿವನ ಪಾದ ಸೇರಿದರೋ ಆಗ ಬಳ್ಳಾರಿ ಕಾಂಗ್ರೆಸ್ಸಿಗರ ನಡುವೆ ರಾಜಕೀಯ ಕದನ ಶುರುವಾಯಿತು. ಒಂದು ಗುಂಪಿಗೆ ದಿವಾಕರ ಬಾಬು ಅಧಿಪತಿಯಾದರೆ, ಇನ್ನೊಂದು ಗುಂಪಿಗೆ ಕೊಂಡಯ್ಯನೇ ನಾಯಕ.



ಫ್ಯೂಡಲ್ ಮುಳ್ಳೂರು ಕುಟುಂಬದ ದಿವಾಕರ ಬಾಬುಗೆ ಆಂಧ್ರದ ಪರಿಟಾಲು ರವಿಯ ಜೊತೆ ಸಂಪರ್ಕವಿತ್ತು. ಪರಿಟಾಲು ರವಿ ಮತ್ತು ದಿವಾಕರ ಬಾಬು ಇಬ್ಬರೂ ಕಮ್ಮಾಗಳಾಗಿದ್ದರಿಂದ ಅವರ ನಡುವೆ ಜಾತಿ ನಂಟೂ ಇತ್ತು. ಆದರೆ ಕೊಂಡಯ್ಯನಿಗೆ ದೆಹಲಿಯಲ್ಲಿರುವ ಕಾಂಗ್ರೆಸ್ ನಾಯಕರ ಬೆಂಬಲವಿತ್ತು. ಅದೇ ಆತನಿಗೆ ಅಹಂಕಾರ ತಂದಿತ್ತು.

ದಿವಾಕರ ಬಾಬು ಮತ್ತು ಕೊಂಡಯ್ಯ ಇಬ್ಬರ ಬಳಿಯೂ ದುಡ್ಡಿತ್ತು. ಆದರೆ ದಿವಾಕರ ಬಾಬು ಹತ್ತಿರ ತಾಕತ್ತಿದ್ದರೆ, ಕೊಂಡಯ್ಯರಿಗೆ ಅಧಿಕಾರವಿತ್ತು. ಇವರಿಬ್ಬರ ನಡುವೆ ಮೇಲುಗೈಗೆ ಕದನ ನಡೆಯುತ್ತಿದ್ದಾಗಲೇ ಜನಾರ್ದನ ರೆಡ್ಡಿಯ ಎನ್ನೋಬಲ್ ಇಂಡಿಯಾ ತೋಪೆದ್ದು ಹೋಯಿತು. ಸಾಲಗಾರರು ಮುಗೇಬಿದ್ದರು. ಆಗ ಈ ರೆಡ್ಡಿ ಕೊಂಡಯ್ಯನ ಪಾದ ಹಿಡಿದ.

ಕೊಂಡಯ್ಯನಿಗೂ ಈ ರೆಡ್ಡಿಯ ಅಗತ್ಯವಿತ್ತು. ಕಮ್ಮಾ ದಿವಾಕರ ಬಾಬು ಎದುರು ಈ ರೆಡ್ಡಿಯೇ ಸಮಾ ಎಂದು ಕೊಂಡಯ್ಯ ಭಾವಿಸಿದರು. ಸಾಲದ್ದಕ್ಕೆ ರೆಡ್ಡಿಯ ಮಗ್ಗುಲಲ್ಲೇ ಶ್ರೀರಾಮುಲು ಇದ್ದ. ಶ್ರೀರಾಮುಲು ನಾಯಕ ಜಾತಿಯವನು. ಬಳ್ಳಾರಿ ಜಿಲ್ಲೆಯ ತುಂಬಾ ಈತನ ನಾಯಕ ಜಾತಿಯವರೇ ಹರಡಿಕೊಂಡಿದ್ದಾರೆ. ಕೊಂಡಯ್ಯ ಇಂತಹ ಅವಕಾಶವನ್ನು ಬಿಟ್ಟಾರೇ? ತಕ್ಷಣವೇ ರೆಡ್ಡಿಯ ಆರ್ಥಿಕ ಸಂಕಷ್ಟಕ್ಕೆ ನೆರವಾಗಲು ಆತನಿಗೆ ಹತ್ತು ಲಕ್ಷದ ಇಡಿಗಂಟು ಕೊಟ್ಟರು. ಅಲ್ಲಿಂದಲೇ ರೆಡ್ಡಿಯ ಬದರೂ ಜಿಗಿತುಕೊಂಡಿತು.

ಯಾವಾಗ ಕೊಂಡಯ್ಯ ಜನಾರ್ದನ ರೆಡ್ಡಿಯನ್ನು ತಮ್ಮ ಪಕ್ಕದಲ್ಲಿಟ್ಟು ಕೊಂಡರೋ ಆಗ ದಿವಾಕರ ಬಾಬು ಕೆಂಡಾಮಂಡಲವಾದ. ಕೊಂಡಯ್ಯನ ಬಲ ಮುರಿಯಬೇಕೆಂದರೆ ಜನಾರ್ದನ ರೆಡ್ಡಿಯನ್ನು ಬಗ್ಗುಬಡಿಯಬೇಕು ಎಂದು ದಿವಾಕರ ಬಾಬು ಸ್ಕೆಚ್ ಹಾಕಿದ. ಅಷ್ಟು ಹೊತ್ತಿಗಾಗಲೇ ಎನ್ನೋಬಲ್ ಇಂಡಿಯಾ ತೋಪಾಗಿದ್ದರೂ ತನ್ನ ಅವ್ಯವಹಾರವನ್ನು ಬಿಟ್ಟಿರಲಿಲ್ಲ. ಜಿಲ್ಲಾದ್ಯಂತ ರೆಡ್ಡಿಯ ಈ ಕಂಪನಿ ಕೆಟ್ಟ ಹೆಸರು ಪಡೆದಿತ್ತು. ಇದನ್ನೇ ದಿವಾಕರ ಬಾಬು ದಾಳವಾಗಿ ಬಳಸಿಕೊಂಡ. ಆರ್‌ಬಿಐಗೆ ಜನಾರ್ದನ ರೆಡ್ಡಿಯ ಎನ್ನೋಬಲ್ ಇಂಡಿಯಾ ಕಂಪನಿಯ ಜಾತಕವನ್ನೇ ಸಲ್ಲಿಸಿ ಅದರ ಪರವಾನಗಿಯನ್ನು ರದ್ದು ಮಾಡಬೇಕೆಂದೂ, ಬಳ್ಳಾರಿಯ ಬಡವರನ್ನು ಕಾಪಾಡಬೇಕೆಂದು ದಿವಾಕರ ಬಾಬು ದೂರು ಕೊಟ್ಟ.

ಆದರೆ ಎನ್ನೋಬಲ್ ಇಂಡಿಯಾ ವಿರುದ್ಧದ ದಿವಾಕರ ಬಾಬುವಿನ ಷಡ್ಯಂತ್ರಗಳು ವರ್ಕೌಟ್ ಆಗಲಿಲ್ಲ. ಯಾಕೆಂದರೆ ಆಗ ಆರ್‌ಬಿಐ ಗವರ್ನರ್ ಆಗಿದ್ದವರು ಐಯಪ್ಪ ರೆಡ್ಡಿ ಎಂಬ ಆಂಧ್ರ ಮೂಲದವರು. ಆತ ಈ ಜನಾರ್ದನ ರೆಡ್ಡಿಗೆ ಸಂಬಂಧಿಕರೂ ಆಗಿದ್ದರು.

ಅಲ್ಲಿಂದಲೇ ರೆಡ್ಡಿ ವರ್ಸಸ್ ಬಾಬುಗಳ ಕದನ ತೀವ್ರಗೊಂಡದ್ದು. ಇತ್ತ ರೆಡ್ಡಿ ವಿರುದ್ಧದ ಮತ್ಸರವನ್ನು ದಿವಾಕರ ಬಾಬು ಶುರುಹಚ್ಚಿಕೊಂಡರೆ ಅತ್ತ ಶ್ರೀರಾಮುಲು ಮೂಲಕ ಬಳ್ಳಾರಿಯ ವಾಲ್ಮೀಕಿ ಸಮಾಜವನ್ನು ರೆಡ್ಡಿ ತನ್ನ ತೆಕ್ಕೆಗೆ ತೆಗೆದುಕೊಳ್ಳುವ ಮೂಲಕ ಬಾಬುವಿಗೆ ಸೆಡ್ಡು ಹೊಡೆದ.

ಆ ಕಾಲದಲ್ಲೂ ಬಳ್ಳಾರಿಯಲ್ಲಿ ಗಣಿಗಾರಿಕೆ ನಡೆದಿತ್ತು. ದಿವಾಕರ ಬಾಬು, ಅಲ್ಲಂ ವೀರಭದ್ರಪ್ಪ ಮತ್ತು ಇತರೆ ಕಾಂಗ್ರೆಸ್ ನಾಯಕರು ಗಣಿ ಮಾಲೀಕರಾಗಿದ್ದರು. ಆದರೆ ಆಗ ಆ ಗಣಿಗಳಿಂದ ದೊಡ್ಡ ಮಟ್ಟದ ಲಾಭವೇನೂ ಬರುತ್ತಿರಲಿಲ್ಲ. ಬದಲಾಗಿ ಅದು ನಷ್ಟದ ವ್ಯವಹಾರ ಎಂದೇ ಪರಿಗಣಿಸಲಾಗುತ್ತಿತ್ತು.

ಆದರೆ ಯಾವಾಗ ಚೀನಾದ ಬೀಜಿಂಗ್‌ನಲ್ಲಿ ಒಲಂಪಿಕ್ ಗೇಮ್ಸ್ ನಿಗದಿಯಾಯಿತೋ, ಯಾವಾಗ ಅಲ್ಲಿನ ಬೃಹತ್ ಕಟ್ಟಡಗಳಿಗೆ ಬಳ್ಳಾರಿಯ ಗಣಿಗಳಲ್ಲಿರುವ ಕಬ್ಬಿಣದ ಅದಿರೇ ಸೂಕ್ತ ಎಂದು ಗೊತ್ತಾಯಿತೋ ಆಗ ಬಳ್ಳಾರಿಯ ನಸೀಬು, ಅಲ್ಲಿನ ನಾಯಕರ ಹಣೆಬರಹ ಎಲ್ಲವೂ ಉಲ್ಟಾ ಹೊಡೆಯಲಾರಂಭಿಸಿತು.



ಆಂಧ್ರದ ವೈ.ಎಸ್. ರಾಜಶೇಖರ ರೆಡ್ಡಿಯೊಂದಿಗಿನ ಗೆಳೆತನದ ಮೂಲಕ ಜನಾರ್ದನ ರೆಡ್ಡಿ ಆಂಧ್ರದ ಓಬಳಾಪುರಂ ಪ್ರದೇಶದಲ್ಲಿ ಗಣಿಯನ್ನು ಪಡೆದ. ಈಗ ರೆಡ್ಡಿ ಕೈಗೂ ಗಣಿಯ ಗುದ್ದಲಿ ಸಿಕ್ಕಿತು. ಜೊತೆಗೆ ರೆಡ್ಡಿ ಮತ್ತು ದಿವಾಕರ ಬಾಬು ನಡುವಿನ ರಾಜಕೀಯ ಜಿದ್ದಿಗೆ ಈಗ ಗಣಿ ಮಾಫಿಯಾದ ಅಯಾಂಗಲ್ ಬಂತು ಸೇರಿಕೊಂಡಿತು.

ಯಾವಾಗ ಮೈನಿಂಗ್ ದಂಧೆ ಜೋರಾಯಿತೋ, ಯಾವಾಗ ಪಟ್ಟಾ ಭೂಮಿಯಲ್ಲೂ ಡಿಗ್ಗಿಂಗ್ ಎಗ್ಗಿಲ್ಲದೆ ಶುರುವಾಯಿತೋ ಆಗಲೇ ಜನಾರ್ದನ ರೆಡ್ಡಿ ಎನ್ನೋಬಲ್ ಇಂಡಿಯಾ ಎನ್ನುವ ವಂಚಕ ಸಂಸ್ಥೆಯನ್ನು ಮಕಾಡೆ ಮಲಗಿಸಿ ಓಬಳಾಪುರಂ ಬೆಟ್ಟಗಳ ಗರ್ಭದಿಂದ ಕೋಟ್ಯಾಂತರ ರೂಪಾಯಿ ಬಾಚತೊಡಗಿದ. ಹಣವನ್ನು ಸಾಧ್ಯವಾದಷ್ಟು ವೇಗದಲ್ಲಿ ಗಳಿಸಬೇಕೆಂಬ ಹಟಕ್ಕೆ ಬಿದ್ದ ರೆಡ್ಡಿ ತನ್ನ ದಂಧೆಗೆ ಶ್ರೀರಾಮುಲು ಎಂಬ ಹುಂಬನ ಘರ್ಜನೆಯನ್ನೇ ಮೂಲ ಬಂಡವಾಳವಾಗಿಸಿಕೊಂಡ. ಹೀಗೆ ರೆ ಶ್ರೀರಾಮುಲು ಗ್ಯಾಂಗ್ ಬಳ್ಳಾರಿ ಎಂಬ ನತದೃಷ್ಟ ಜಿಲ್ಲೆಯನ್ನು ಮುಷ್ಟಿಯೊಳಗೆ ಬಂಧಿಸಿಬಿಟ್ಟಿತು.

ಕೂಡ್ಲಿಗಿ ಶಾಸಕ ನಾಗೇಂದ್ರ ಅಲ್ಲಿಯವರೆಗೂ ದಿವಾಕರ ಬಾಬು ಅಡ್ಡಿಯಲ್ಲಿ ಸದಸ್ಯನಾಗಿದ್ದ. ರಾಘವೇಂದ್ರ ಚಿತ್ರಮಂದಿರದ ಹತ್ತಿರ ಆಫೀಸಿನಲ್ಲಿ ಕೂರುತ್ತಿದ್ದ ನಾಗೇಂದ್ರ ನಗರದ ಶ್ರೀಮಂತರ ಆಸ್ತಿ, ಕುಟುಂ ಪ್ರೇಮಪ್ರಕರಣಗಳಿಗೆ ಪಂಚಾಯ್ತಿ ಮಾಡಿ ಹಣ ಸಂಪಾದಿಸುತ್ತಿದ್ದ. ಅ ಅಂಥದೊಂದು ಅಡ್ಡೆಯ ಮೇಲೂ ಜನಾರ್ದನ ರೆಡ್ಡಿಯ ಪಟಾ ಮುಗೇಬಿತ್ತು. ರಾಮುಲುವಿನ ವ್ಯಗ್ರತನದ ಪರಿಚಯವಾಗುತ್ತಲೇ ದಿವಾ ಬಾಬುಗೆ ಗುಡ್‌ಬೈ ಹೇಳಿದ ನಾಗೇಂದ್ರ ಶ್ರೀರಾಮುಲು ಮಗ್ಗುಲ ಬಂದು ಕೂತುಬಿಟ್ಟ. ಹೀಗೇ ದಿವಾಕರ ಬಾಬುನ ಸಾಮ್ರಾಜ್ಯದ ಲಿಂಕುಗ ಕಳಚುತ್ತ ಹೋರಟವು. ಕೊನೆಗೂ ಮುಳ್ಳೂರು ಕುಟುಂಬದ ಸರ್ವಾಧಿಕಾರ ಚಟ್ಟ ಕಟ್ಟುವಲ್ಲಿ ರೆಡ್ಡಿ ಯಶಸ್ವಿಯಾದ.

ಅಕ್ರಮ ಗಣಿಗಾರಿಕೆಯಿಂದ ಗಳಿಸಿದ್ದ ಹಡಬೆ ದುಡ್ಡು ರೆಡ್ಡಿ-ಶ್ರೀರಾಮು ಗ್ಯಾಂಗಿನಲ್ಲಿ ರಾಜಕೀಯ ಆಕಾಂಕ್ಷೆಗಳನ್ನು ಹುಟ್ಟಿಸಿತು. ಮತ್ತೆ ಮುನ್ಸಿಪಾಲ್ ಚುನಾವಣೆಯಲ್ಲಿ ಸ್ಪರ್ಧಿಸಿದ ರಾಮುಲು ತನ್ನ ಹಣಬಲದಿಂದಲೇ ಮೊದ ಬಾರಿಗೆ ಗೆದ್ದುಬುಟ್ಟ. ಇದನ್ನು ಕಂಡು ರೆಡ್ಡಿ ಸಹೋದರರಲ್ಲೂ ರಾಜಕೀಯ ಆಸೆಗಳು ಚಿಗುರೊಡೆದವು.

ಅದೇ ಹೊತ್ತಿಗೆ ಬಳ್ಳಾರಿಯಿಂದ ಕಾಂಗ್ರೆಸ್‌ನ ಅಧಿನಾಯಕಿ ಸೋನಿಯ ಗಾಂಧಿ ಸ್ಪರ್ಧಿಸುತ್ತಾರೆಂದು, ಆಕೆಯ ವಿರುದ್ಧ ಬಿಜೆಪಿ ಸುಷ್ಮಾ ಸ್ವರಾ ಎಂಬ ಕೂಗುಮಾರಿಯನ್ನು ನಿಲ್ಲಿಸುತ್ತಿದೆ ಎಂದು ಸುದ್ದಿ ದೆಹಲಿಯಿಂ ಹೊರಬಿತ್ತು.

ಆರೆಸ್ಸೆಸ್ಸಿನ ಪಳೆಯುಳಿಕೆಯಂತಿರುವ ಡಾ.ಶ್ರೀನಿವಾಸಮೂರ್ತಿ ಎಂಬಾತ ಮನೆಗೆ ಸುಷ್ಮಾ ಸ್ವರಾಜ್ ವರಮಹಾಲಕ್ಷ್ಮಿ ಪೂಜೆಯ ನೆಪದಲ್ಲಿ ಬಳ್ಳಾರಿ ಬಂದುಹೋಗುವುದನ್ನ ಮಾಡುತ್ತಿದ್ದರು. ಇದನ್ನು ಶ್ರೀರಾಮು ಸದುಪಯೋಗ ಮಾಡಿಕೊಂಡ. ಶ್ರೀರಾಮುಲು ಬಗ್ಗೆ ಮ ಬಳ್ಳಾರಿ ಜಿಲ್ಲೆಯಲ್ಲಿರುವ ಬಹುಸಂಖ್ಯಾತ ವಾಲ್ಮೀಕಿ ಸಮುದಾಯ ಬಗ್ಗೆ ಶ್ರೀನಿವಾಸಮೂರ್ತಿಯೇ ಸುಷ್ಮಾ ಅವರಿಗೆ ಸಣ್ಣದೊಂದ ಬಯೋಡಾಟ ನೀಡಿದರು. ಅದುವರೆಗೂ ಕಾಂಗ್ರೆಸ್ಸಿನ ಕಾರ್ಯಕರ್ತ ರಾಗಿದ್ದ ಜನಾರ್ದನ ರೆಡ್ಡಿ ಮತ್ತು ಶ್ರೀರಾಮುಲು ಭಾರತೀಯ ಜನತಾ ಪಾರ್ಟಿಯನ್ನು ಸೇರಿದರು.

ಅದನ್ನು ಕಂಡು ಕೊಂಡಯ್ಯ ತಲೆಯ ಮೇಲೆ ಕೈಹೊತ್ತು ಕೂತರು. ಜನಾರ್ದನ ರೆಡ್ಡಿಯ ಕೈಗೆ ಕಾಸುಕೊಟ್ಟು ಕೈಹಿಡಿದು ಮೇಲೆತ್ತಿದ್ದು ವ್ಯರ್ಥವಾಯಿತು ಎಂದು ಜಿಗುಪ್ಸೆ ಪಟ್ಟರು. ಆದರೆ ಜನಾರ್ದನ ರೆ ಬಿಜೆಪಿಯ ಪಾಲಾಗಿದ್ದು ದಿವಾಕರ ಬಾಬುವಿ ಹಾಲು ಕುಡಿದಷ್ಟು ಖುಷಿ ನೀಡಿತು.




ಒಂದಂತೂ ಸತ್ಯ. ಜಿಲ್ಲಾ ಕಾಂಗ್ರೆಸ್‌ನ ಮೇಲುಗೈ ಸಾಧಿಸಲು ಕೊಂಡಯ್ಯ ಮತ್ತು ದಿವಾಕರಬಾಬು ನಡುವಿನ ಜಗಳದ ರೆಡ್ಡಿ-ಶ್ರೀರಾಮುಲು ಎಂಬ ಭೂತಗಳ ಜನ್ಮವೆತ್ತಿದವು. ಬಳ್ಳಾರಿಯನ್ನೇ ಮುಕ್ಕಿದವು.

420 ಮತ್ತು ರೌಡಿ ಒಂದಾಗಿದ್ದು

ಈ ಜನಾರ್ದನ ರೆಡ್ಡಿ ಮತ್ತು ಶ್ರೀರಾಮುಲುಗಳ ...ಟುಳ ಬಳ್ಳಾರಿಯಲ್ಲಿ ಶುರುವಾಗಿದ್ದೇ 2000ರ ನಂತರ. ...ಯತನಕ ಈ ಖದೀಮರಿಬ್ಬರು ಬಳ್ಳಾರಿಯ ಪಾಲಿಗೆ ...20ಗಳಾಗಿದ್ದರು. ಪುದಿ ರೌಡಿಗಳಾಗಿದ್ದರು.

ಬಳ್ಳಾರಿಯ ಎಸ್.ಪಿ ಸರ್ಕಲ್ ಹತ್ತಿರ ಎನ್ನೋಬಲ್ ...ಡಿಯಾ ಎಂಬ ವಂಚಕ ಕಂಪನಿ...ನ್ನು ಜನಾರ್ದನ ರೆಡ್ಡಿ ಸ್ಥಾಪಿಸಿದ್ದ. ...ತಿದಿನ ಎನ್ನೋಬಲ್ ಕಂಪನಿಯ ...ಂದೆ ತನ್ನ ಹಳೆಯ ಅಟ್‌ಲಾಸ್ ...ಕಲ್ಲಿನ ಸ್ಟಾಂಡ್ ಹಾಕುತ್ತಿದ್ದ ರೆಡ್ಡಿ ...ನರನ್ನು ಮುಂಡಾ ಮೋಚುವುದರಲ್ಲೇ ...ಗ್ನನಾಗಿರುತ್ತಿದ್ದ. ಸಮಯ ಸಿಕ್ಕಾಗ ರೆಡ್ಡಿ ...ತ್ತು ಆವನ ಸಹೋದರರು ಕಾಂಗ್ರೆಸ್ ...ರ್ಟಿಯ ಕಾರ್ಯಕರ್ತರಾಗಿ ಆ ಪಕ್ಷದ ...ಂಡಾ ಹಿಡಿದು ಸೋನಿಯಾ ಗಾಂಧಿಗೆ ...ತುಪರಾಕು ಹಾಕುತ್ತಿದ್ದರು. ಅಲ್ಲಂ ...ರಭದ್ರಪ್ಪ, ಕೊಂಡಯ್ಯ, ದಿವಾಕರ ...ಬುಗಳಿಗೆ ಸಲಾಂ ಹೊಡೆಯುತ್ತಿದ್ದರು.



ಎನ್ನೋಬಲ್ ಇಂಡಿಯಾ ಕಂಪ...ಯ ಆಫೀಸಿನಿಂದ ಅನತಿ ದೂರದಲ್ಲೇ ದೇವಿನಗರದ ...ಪಡನೇ ಕ್ರಾಸಿನಲ್ಲಿ ಶ್ರೀರಾಮುಲು ವಾಸಿಸುತ್ತಿದ್ದ ಮನೆ ...ತ್ತು. ಆಗ ಶ್ರೀರಾಮುಲುಗೆ ಯಾವ ರಾಜಕೀಯ ...ಯೂ ಇರಲಿಲ್ಲ. ಆದರೆ ಆತನಲ್ಲಿ ಪಾಳೇಗಾರಿಕೆಯ ...ತ್ತು, ರಟ್ಟೆ ಬಲಿತಿತ್ತು. ಪಕ್ಕದ ಆಂಧ್ರ ಪ್ರದೇಶದ ...ಸಂತಪುರದ ಗೂಂಡಾಗಳೊಂದಿಗೆ ಸಂಪರ್ಕವಿತ್ತು. ...ಬವರೊಂದಿಗೆ ಬಡಿದಾಡಿಕೊಂಡಿದ್ದ ಶ್ರೀರಾಮುಲು ...ಗಳಿಗೆ ಹತ್ತಾರು ಹಾಫ್‌ಮರ್ಡರ್ ಕೇಸುಗಳಲ್ಲಿ ನೆತ್ತರು ...ಟಿಕೊಂಡಿತ್ತು. ಅಷ್ಟೊತ್ತಿಗಾಗಲೇ ಶ್ರೀರಾಮುಲು ...ರಡು ಬಾರಿ ಕಾಂಗ್ರೆಸ್ ಪಕ್ಷದಿಂದ ನಗರಸಭಾ ಚುನಾ...ಣೆಗೆ ನಿಂತು ಮಣ್ಣು ಮುಕ್ಕಿದ್ದ. ಆದರೆ ಆತನ ...ಂಡಾಗಿರಿಯೇ ಆತನಿಗೆ ಬಳ್ಳಾರಿಯಲ್ಲಿ ಒಂದು ಖದರು ...ದಿತ್ತು.

ರೆಡ್ಡಿಯ ಎನ್ನೋಬಲ್ ಇಂಡಿಯಾ ಕಂಪನಿಯು ಸೈಟು, ಶೇರು, ಡಬ್ಲಿಂಗು ಇತ್ಯಾದಿ ಆಮಿಷಗಳನ್ನೊಡ್ಡಿ ಬಳ್ಳಾರಿ ಮತ್ತು ಸುತ್ತಮುತ್ತ ಪ್ರದೇಶಗಳಲ್ಲಿ ಸಾವಿರಾರು ಜನರಿಂದ ಲಕ್ಷಾಂತರ ರೂಪಾಯಿ ಕಸಿದಿತ್ತು. ಆದರೆ ದುಡ್ಡು ಕೊಟ್ಟ ಜನರು ಎಂದೂ ಸೈಟನ್ನಾಗಲಿ, ಶೇರನ್ನಾಗಲಿ, ಡಬಲ್ ಆದ ತನ್ನ ಹಣವನ್ನಾಗಲಿ ಕಾಣಲಿಲ್ಲ. ಅದನ್ನೆಲ್ಲ ಜನರಿಗೆ ಕೊಡುವ ಉದ್ದೇಶವೂ ರೆಡ್ಡಿಗೆ ಇರಲಿಲ್ಲ. ಸಾಮಾನ್ಯ ಪೇದೆಯೊಬ್ಬನ ಮಗನಾಗಿದ್ದ ರೆಡ್ಡಿ ಜನರಿಂದ ಸಂಗ್ರಹಿಸಿದ್ದ ಹಣವೆಲ್ಲ ಎಂದೇ ಮಂಗಮಾಯ ಮಾಡಿಯಾಗಿತ್ತು.

ಇವನಿಂದ ಮೋಸ ಹೋಗಿದ್ದ ಸಾವಿರಾರು ಜನ ರೆಡ್ಡಿಯ ಚೆಡ್ಡಿಗೇ ಕೈಹಾಕಿದರು. ಅವರ ಆಕ್ರೋಶದಿಂದ ಪಾರಾಗಲು ರೆಡ್ಡಿ ಒಂದು ಕುತಂತ್ರ ರೂಪಿಸಿದ. ಎಸ್.ಪಿ. ಸರ್ಕಲ್ ಹತ್ತಿರವೇ ಠಳಾಯಿಸುತ್ತಿದ್ದ ಶ್ರೀರಾಮುಲುವನ್ನು ಕರೆದ ಜನಾರ್ದನ ರೆಡ್ಡಿ ಆತನನ್ನು ಎನ್ನೋಬಲ್ ಕಂಪನಿಯ ನಿರ್ದೇಶಕನನ್ನಾಗಿ ನೇಮಿಸಿದ.

ಅಲ್ಲಿಯತನಕ ಗಲ್ಲಿಗಳಲ್ಲಿ ಬಡಿದಾಡುತ್ತಿದ್ದ, ಓಸಿ ದಂಧೆಯಲ್ಲಿ ಕಾಸು ಕಾಣುತ್ತಿದ್ದ ಶ್ರೀರಾಮುಲುವಿನ ಕಣ್ಣು ರೆಡ್ಡಿಗೆ ಸುಲಭವಾಗಿ ಜನರಿಂದ ಸಿಗುತ್ತಿದ್ದ ಲಕ್ಷಲಕ್ಷ ರೂಪಾಯಿಗಳ ಮೇಲೆ ಬಿತ್ತು. ಎನ್ನೋಬಲ್ ಕಂಪನಿಯಲ್ಲಿ ಹಣ ಹೂಡಿದ್ದ ಜನ ತಮ್ಮ ರೊಕ್ಕ ಕೇಳಲು ಬಂದರೆ ಈ ಹೊಸ ನಿರ್ದೇಶಕ ರಾಮುಲು ಹಣ ಬದಲಿಗೆ ಒದೆ ಕೊಟ್ಟು ಸಮಾ ಗದುಮಿದ. ಆತನ ದಾಳಿಯಿಂದ ತತ್ತರಿಸಿದ ಜನ ನವ ರಂಧ್ರಗಳನ್ನೂ ಮುಚ್ಚಿಕೊಂಡು ಸುಮ್ಮನಾದರು. ಹೀಗೆ ರೆಡ್ಡಿ ಎಂಬ 420 ಮತ್ತು ಶ್ರೀರಾಮುಲು ಎಂಬ ರೌಡಿ ಜೊತೆಗೂಡಿ ಬಳ್ಳಾರಿಯ ತುಂಬಾ ಭಯದ ವಾತಾವರಣವನ್ನು ಹುಟ್ಟುಹಾಕಿದರು.

ಅದು ಇವತ್ತಿನವರೆಗೂ ಮುಂದುವರೆದಿದೆ. ❦

ಪಾದಯಾತ್ರೆಗೆ ತೆಲಂಗಾಣ ಚಳವಳಿಯೇ ಸ್ಫೂರ್ತಿ?

ಶ್ರೀಮುಲು ಬಿಜೆಪಿಯನ್ನು ತೊರೆದಿದ್ದರೂ ಆತ ಬಳ್ಳಾರಿಯಲ್ಲಿ ಏಕಾಂಗಿಯಾಗಿಲ್ಲ, ಬದಲಾಗಿ ಆ ಜಿಲ್ಲೆಯ ಬಿಜೆಪಿ ಶಾಸಕರು ಮತ್ತು ಬಳ್ಳಾರಿ ಮಹಾನಗರ ಪಾಲಿಕೆಯ ಬಿಜೆಪಿ ಸದಸ್ಯರು. ಎಲ್ಲರೂ ಆತನ ಜೇಬಿನಲ್ಲಿಯೇ ಇವತ್ತಿಗೂ ಇದ್ದಾರೆ. ಜೊತೆಗೆ ಇತ್ತೀಚಿಗಿನತನಕ ಕಾಂಗ್ರೆಸ್ ಮತ್ತು ಜೆಡಿಎಸ್‌ನಲ್ಲಿ ಕಾರ್ಯಕರ್ತರಾಗಿದ್ದ ಕೆಲವರು ಈಗ ರಾಮುಲು ಹಿಂದೆ 'ಜೈ' ಎಂದು ಕೂಗುತ್ತಾ ಆತನ ಪಾದಯಾತ್ರೆಯಲ್ಲಿ ಹೆಜ್ಜೆ ಹಾಕುತ್ತಿದ್ದಾರೆ.



ಶ್ರೀರಾಮುಲು ಈಗ ಹೈದರಾಬಾದ್-ಕರ್ನಾಟಕ ಪ್ರದೇಶದ ಉದ್ಧಾರಕ್ಕಾಗಿ ಪಾದಯಾತ್ರೆ ಮಾಡುತ್ತಿದ್ದೇನೆ ಎನ್ನುತ್ತಿದ್ದಾನೆ. ಆದರೆ ಇದರ ಹಿಂದೆ ನೆರೆಯ ಆಂಧ್ರ ಪ್ರದೇಶದಲ್ಲಿ ಪ್ರತ್ಯೇಕ ತೆಲಂಗಾಣ ರಾಜ್ಯಕ್ಕಾಗಿ ಹೋರಾಟ ನಡೆಯುತ್ತಿದೆಯೋ ಹಾಗೆಯೇ ಮುಂದೆ ಪ್ರತ್ಯೇಕ ಹೈದರಾಬಾದ್-ಕರ್ನಾಟಕ ರಾಜ್ಯಕ್ಕೆ ಒಂದು ಚಳವಳಿಯನ್ನು ರೂಪಿಸಲು ಅಡಿಪಾಯವನ್ನು ಹಾಕುವ ಹುನ್ನಾರವೂ ಇರುವುದು ಸುಳ್ಳಲ್ಲ.

ರಾಜ್ಯದ ಹಳೇ ಮೈಸೂರು ಭಾಗದಲ್ಲಿನ ರಾಜಕಾರಣಕ್ಕಿಂತಲೂ ಈತನಿಗೆ ಹೈದರಾಬಾದ್-ಕರ್ನಾಟಕದ ಮೇಲೇ ಹೆಚ್ಚು ನಿಗಾ ಇದೆ. ಬಳ್ಳಾರಿ, ಗುಲಬರ್ಗ, ರಾಯಚೂರು, ಬೀದರ್, ಬಿಜಾಪುರ, ಗದಗ ಮತ್ತು ಕೊಪ್ಪಳ ಜಿಲ್ಲೆಗಳ ವಿಧಾನಸಭಾ ಕ್ಷೇತ್ರಗಳ ಮೇಲೆ ರಾಜಕೀಯ ಹಿಡಿತ ಸಾಧಿಸುವುದು ಈತನ ಉದ್ದೇಶ. ಮುಂದಿನ ವಿಧಾನಸಭಾ ಮತ್ತು ಲೋಕಸಭಾ ಚುನಾವಣೆಗಳ ಮೇಲೆ ಕಣ್ಣಿಟ್ಟೇ ಶ್ರೀರಾಮುಲು ಈ ಪಾದಯಾತ್ರೆಯನ್ನು ಶುರು ಮಾಡಿದ್ದು ಈಗ ಎಲ್ಲರಿಗೂ ಗೊತ್ತಿರುವ ಸತ್ಯ.

ಬರುವ ಚುನಾವಣೆಯಲ್ಲಿ ಕನಿಷ್ಠ 20 ವಿಧಾನಸಭಾ ಕ್ಷೇತ್ರಗಳಲ್ಲಿ ತನ್ನ ಬಿಎಸ್‌ಆರ್ ಪಾರ್ಟಿಯ ಮೂಲಕ ತಮ್ಮವರನ್ನೇ ಗೆಲ್ಲಿಸಿಕೊಂಡರೆ ರಾಜ್ಯ ರಾಜಕೀಯದ ಮೇಲೆ ಶ್ರೀರಾಮುಲುಗೆ ಹಿಡಿತ ಸಾಧ್ಯವಾಗುತ್ತದೆ. ಬಿಎಸ್‌ಆರ್ ಪಕ್ಷಕ್ಕಿಂತಲೂ ಬೇರೆ ಪಾರ್ಟಿಯವರು ಹೆಚ್ಚು ಕ್ಷೇತ್ರಗಳನ್ನು ಗೆದ್ದರೂ ಬಳ್ಳಾರಿಯ ಗೂಂಡಾ ಗ್ಯಾಂಗಿನ ನೆರವಿಲ್ಲದೆ ಸರ್ಕಾರ ರಚಿಸುವುದು ಕಷ್ಟವೇ ಸರಿ. ಅದೇ ಆ ಪಾದಯಾತ್ರೆಯ ಹಿಂದಿನ ಅಸಲಿ ಮರ್ಮ. ❦

ಪದ್ಮಾವತಿ ಯಾದವ್ ಮರ್ಡರ್ ಕೇಸೂ ತಗುಲಿಕೊಳ್ಳಲಿದೆಯೇ?

...ಬಳ್ಳಾರಿಯ ಕಾರ್ಪೊರೇಟರ್ ಪದ್ಮಾವತಿ ಯಾದವ್ ಬರ್ಬರವಾಗಿ ಕೊಲೆಯಾಗಿ ಎರಡು ವರ್ಷಗಳೇ ...ದುಹೋಗಿವೆ. ಆದರೆ ಜನಾರ್ದನ ರೆಡ್ಡಿಯ ಅಧಿಪತ್ಯದಲ್ಲಿರುವ ನಗರಪಾಲಿಕೆಯ ಸದಸ್ಯೆಯಾಗಿದ್ದ ಪದ್ಮಾವತಿ ...ಾದವ್ ಕೊಲೆಯಾಗಿದ್ದಾದರೂ ಯಾಕೆ ಎಂಬ ಪ್ರಶ್ನೆಗೆ ಇವತ್ತಿಗೂ ಉತ್ತರ ಸಿಕ್ಕಿಲ್ಲ. ...ಪಕ್ಕೆ ಕಾರಣ ಈ ಕೊಲೆಯ 'ತನಿಖೆ' ಮಾಡಿದವರು ರೆಡ್ಡಿಯ ಕೃಪಾಶೀರ್ವಾದ ...ಂದಿರುವ ರಾಜ್ಯ ಪೊಲೀಸರು.



ಆದರೀಗ ಸಿಬಿಐ ಪೊಲೀಸರು ಪದ್ಮಾವತಿ ಯಾದವ್ ಕೊಲೆ ಪ್ರಕರಣವನ್ನು ತನಿಖೆ ಮಾಡಲಿದ್ದಾರಂತೆ. ಈ ಸುದ್ದಿ ಕೇಳುತ್ತಿದ್ದಂತೆ ರೆಡ್ಡಿಯ ಪಟಾಲಮ್ ಥರಗುಟ್ಟಿಹೋಗಿದೆ.



ಈ ರೆಡ್ಡಿ ಗ್ಯಾಂಗಿನ ಕೆಲವರು ಮೂಗುಬೊಟ್ಟು ಪ್ರಿಯರು. ಈ ಹಿಂದೆ ಇವರಲ್ಲಿ ಕೆಲವರು ಸೆರಗು ಹಿಡಿಯಲು ಹೋದದ್ದು, ಹುಡುಗಿಯರನ್ನು ಕಿಡ್ನಾಪ್ ಮಾಡಲು ಪ್ರಯತ್ನಿಸಿದ್ದು, ಕಟ್ಟಿಕೊಂಡವಳು ಇದ್ದರೂ ಇತರರನ್ನು ಇಟ್ಟುಕೊಂಡದ್ದು... ಇದೆಲ್ಲ ಬಳ್ಳಾರಿ ಜನರಿಗೆ ಗೊತ್ತು.

ಈ ಪದ್ಮಾವತಿ ಯಾದವ್ ಜೊತೆಗೆ ಒಬ್ಬ ರೆಡ್ಡಿ ಸಹೋದರ ಸಂಬಂಧ ಇಟ್ಟುಕೊಂಡಿದ್ದು ನಗರಪಾಲಿಕೆಯ ಗೋಡೆಗೋಡೆಗೂ ಗೊತ್ತಿತ್ತು. ಸ್ವಲ್ಪ ದಿನಗಳಲ್ಲೇ ಈ ಸುದ್ದಿ ಆ ರೆಡ್ಡಿಯ ಧರ್ಮಪತ್ನಿಯ ಕಿವಿಗೂ ಮುಟ್ಟಿತು. ಪಾಲಿಕೆಯ ಗೋಡೆಗಳು ಸುಮ್ಮನಿದ್ದರೂ ಈ ಧರ್ಮಪತ್ನಿ ಸುಮ್ಮನಿರಲಿಲ್ಲ. ಆಂಧ್ರದಿಂದ ಸುಪಾರಿ ಕೊಲೆಗಡುಕರನ್ನು ಕರೆದು ಪದ್ಮಾವತಿಯನ್ನು ...ಪ್ ಮಾಡಿಸಿದಳು ಎಂಬುದು ಬಳ್ಳಾರಿಯ ಫುಟ್‌ಪಾತ್ ಮಾತು.

ಈ ರಕ್ತಸಿಕ್ತ ಕೊಲೆಯ ವಿವರಗಳು ಸಿಬಿಐ ಕೈಸೇರಿದೆಯಂತೆ, ಸದ್ಯದಲ್ಲೇ ತನಿಖೆ ಮಾಡಿ ಆ ರೆಡ್ಡಿ ಸಹೋದರನನ್ನೂ ...ತನ ಕಿಲ್ಲರ್ ಪತ್ನಿಯನ್ನೂ ಜೈಲಿಗೆ ದೂಡಲಿದೆಯಂತೆ.

ಇದನ್ನು ಕೇಳಿ ರೆಡ್ಡಿಗಳ ಕುಟುಂಬಗಳು ಕಂಗಾಲಾಗಿವೆಯಂತೆ... ❦

ಜೈಲು ಸೇರಿ ಎಂಟು ತಿಂಗಳಾಯಿತು

ಜನಾರ್ದನ ರೆಡ್ಡಿ ಜೈಲು ಸೇರುವ ಮೊದಲು ಆತ ವರ್ತಿಸುತ್ತಿದ್ದ ರೀತಿಯೇ ವಿಚಿತ್ರವಾಗಿತ್ತು. ಆತನನ್ನು ಬಲ್ಲವರು ಹೇಳುವ ಪ್ರಕಾರ ಆತನದ್ದು ವಿಕೃತ ಮನಸ್ಸು.

ಸಿಬಿಐ ತಂಡ ಜನಾರ್ದನ ರೆಡ್ಡಿಯ ಮನೆಯ ಮೇಲೆ ರೇಡು ಮಾಡಿದಾಗ ಬಂಗಾರದ ಸಿಂಹಾಸನ, ವಜ್ರಖಚಿತ ಕಿರೀಟ ಸಿಕ್ಕಿದ್ದವು ಎಂಬ ಸುದ್ದಿಯೇ ರೆಡ್ಡಿಯ ಸೈಕೋ ಪ್ರವೃತ್ತಿಗೆ ಪುಷ್ಟಿ ನೀಡಿದ್ದವು.



ಗಣಿ ಲೂಟಿಯಿಂದ ದುಡ್ಡು ಹರಿದುಬರುತ್ತಲೇ ರೆಡ್ಡಿ ವಿಚಿತ್ರ ಕನಸುಗಳನ್ನು ಕಾಣಲಾರಂಭಿಸಿದ. ಭ್ರಾಮಕ ಪ್ರಪಂಚವನ್ನು ತನ್ನ ಸುತ್ತ ಹುಟ್ಟು ಹಾಕಿಕೊಂಡ. ಚಿನ್ನದ ಸಿಂಹಾಸನದಲ್ಲಿ ಕುಳಿತು ತನ್ನ ತಲೆ ಮೇಲೆ ವಜ್ರಖಚಿತ ಕಿರೀಟ ಇಟ್ಟುಕೊಂಡು ತಾನು ಶ್ರೀಕೃಷ್ಣ ದೇವರಾಯ ಆಧುನಿಕ ಅವತಾರ ಎಂಬಂತೆ ವರ್ತಿಸುತ್ತಿದ್ದ.

ಅಷ್ಟೇ ಅಲ್ಲ, ಕೊಪ್ಪರಿಗಟ್ಟಲೆ ದುಡ್ಡಿದ್ದರೆ ಸಾಕು ತಾನು ಈ ದೇಶದ ಪ್ರಧಾನಿ ಕೂಡ ಆಗಬಹುದೆಂಬ ಕನಸು ಕಟ್ಟಿಕೊಂಡ ರೆಡ್ಡಿ. ಯಡ್ಡಿಯನ್ನು ಮುಖ್ಯಮಂತ್ರಿ ಗದ್ದುಗೆಯಿಂದ ಇಳಿಸಿ ತಾನೇ ಕರ್ನಾಟಕದ ಮುಖ್ಯಮಂತ್ರಿ ಆಗಲು ಈ ರೆಡ್ಡಿ ನಡೆಸಿದ ರೆಸಾರ್ಟ್ ರಾಜಕಾರಣವನ್ನು ಎಲ್ಲರೂ ಟಿವಿ ಪರದೆಯ ಮೇಲೆ ನೋಡಿದ್ದರು. ಇಂತಹ ರೆಡ್ಡಿ ತನ್ನ ಅಕ್ರಮ ಹಣದ ಬಲದಿಂದಲೇ ದೆಹಲಿಯ ಪ್ರಧಾನ ಮಂತ್ರಿ ಗದ್ದುಗೆಯನ್ನು ಅಲಂಕರಿಸುವ ಕನಸು ಕಂಡಿದ್ದರೆ ಅಚ್ಚರಿ ಇಲ್ಲ.

ಜನಾರ್ದನ ರೆಡ್ಡಿ ಜೈಲು ಸೇರಿ ಈ ವಾರಕ್ಕೆ ಸರಿಯಾಗಿ ಎಂಟು ತಿಂಗಳುಗಳಾಗುತ್ತವೆ. ಸದ್ಯದಲ್ಲಿ ಆತ ಬಿಡುಗಡೆಗೊಳ್ಳುವ ಸೂಚನೆಗಳು ಕಾಣಿಸುತ್ತಿಲ್ಲ.

ಅದಕ್ಕಿಂತ ಮುಖ್ಯವಾಗಿ ಈಗ ಆತನ ಗೆಳೆಯ ಆಂಧ್ರದ ಜಗನ್ ರೆಡ್ಡಿಯನ್ನೂ ಜೈಲಿಗೆ ದೂಡುವ ತಯಾರಿಯಲ್ಲಿದೆ ಸಿಬಿಐ. ಹಾಗೊಮ್ಮೆ ಜಗನ್ ಕೂಡ ಕಂಬಿ ಎಣಿಸಿದರೆ, ಜನಾರ್ದನ ರೆಡ್ಡಿ ಇನ್ನೂ ಒಂದು ವರ್ಷ ಬಿಡುಗಡೆ ಕಾಣದಿದ್ದರೆ ಅಚ್ಚರಿ ಇಲ್ಲ.

ಬದುಕೆಂಬ ವಿಪರ್ಯಾಸ ಎಂತಹದ್ದು ನೋಡಿ. ಕೇವಲ ಹನ್ನೆರಡು ವರ್ಷಗಳ ಹಿಂದೆ ಈ ರೆಡ್ಡಿ ಕೇರ್ ಆಫ್ ಫುಟ್‌ಪಾತ್ ಎಂಬಂತಹ ಸ್ಥಿತಿಯಲ್ಲಿದ್ದ. ಆನಂತರ ಈ ರಾಜ್ಯದ ರಾಜಕಾರಣವನ್ನೇ ತನ್ನ ಕಿರುಬೆರಳ ಮೇಲೆ ನಿಯಂತ್ರಿಸುವಷ್ಟರಮಟ್ಟಿಗೆ ಬೆಳೆದ. ಈಗ ಅದೇ ರೆಡ್ಡಿ ಚಂಚಲಗುಡ ಜೈಲಿನಲ್ಲಿ ಕಂಬಿ ಎಣಿಸುತ್ತಿದ್ದಾನೆ. ಮಾಡಿದ್ದುಣ್ಣೊ ಮಾರಾಯಾ ಎನ್ನುವುದು ಇದಕ್ಕೇ ಅಲ್ಲವೇ? ❦

ಪಾದಯಾತ್ರೆಯಿಂದ ಕಾಂಗ್ರೆಸ್ ಕಲಿತದ್ದೇನು?


ಬೆಂಗಳೂರಿನಿಂದ ಬಳ್ಳಾರಿಯತನಕ ಸಿದ್ದರಾಮಯ್ಯ ...ತ್ವದಲ್ಲಿ ನಡೆದ ಕಾಂಗ್ರೆಸ್ ಪಕ್ಷದ ಬೃಹತ್ ಪಾದಯಾತ್ರೆ ...ನಿಸ್ಸ ರೋಮಾಂಚನವಷ್ಟೇ ಆಗಿ ಉಳಿದದ್ದು ಒಂದು ...ರ್ಥ ವಿಪರ್ಯಾಸ.

...ನದಲ್ಲಿ ರೆಡ್ಡಿಗಳ ಅಟ್ಟಹಾಸದ ವಿರುದ್ಧ ರಟ್ಟೆ ...ದ ಮೂಲಕ ಸೆಡ್ಡುಹೊಡೆದಿದ್ದ ಸಿದ್ದರಾಮಯ್ಯ, ತಮ್ಮ ...ಪಕ್ಷ ಆ ಪಾದಯಾತ್ರೆಯಲ್ಲಿ ಭಾಗವಹಿಸುವಂತೆ ...ಮಾಡುವಲ್ಲಿ ಯಶಸ್ವಿಯಾಗಿದ್ದರು. ಮಳೆ ಬಿಸಿಲು, ಡಯಾಬಿಟೀಸ್ ಹಾರ್ಟ್ ಪ್ರಾಬ್ಲಮ್ ಇತ್ಯಾದಿಗಳನ್ನು ಲೆಕ್ಕಿಸದೆ ಕಾಂಗ್ರೆಸ್ ಪಕ್ಷದ ಹಿರಿ-ಕಿರಿಯರೆಲ್ಲ ಆ ಪಾದಯಾತ್ರೆಯಲ್ಲಿ ಹೆಜ್ಜೆ ಹಾಕಿದ್ದರು. ಬಳ್ಳಾರಿಯಲ್ಲಿ ವೇದಿಕೆಯನ್ನೇರಿದ ಕಾಂಗ್ರೆಸ್ ಲೀಡರ್‌ಗಳು ರೆಡ್ಡಿಗಳ ವಿರುದ್ಧ ಕೆಂಡಕಾರಿದ್ದರು, ವೀರಾವೇಶದ ಮಾತುಗಳನ್ನಾಡಿದ್ದರು.

ಆದರೆ ಆನಂತರ ಆದದ್ದೇನು ಎಂಬುದು ಎಲ್ಲರಿಗೂ ಗೊತ್ತಿದೆ.

ಅವತ್ತು ವೇದಿಕೆಯ ಮೇಲೆ ದೊಡ್ಡ ದೊಡ್ಡ ಭಾಷಣಗಳನ್ನು ಬಿಗಿದಿದ್ದ ನಾಯಕರು ಆನಂತರ ಬಳ್ಳಾರಿಯತ್ತ ತಿರುಗಿಯೂ ನೋಡಲಿಲ್ಲ.

ಅಷ್ಟೇ ಅಲ್ಲ, ದಶಕಗಳ ಕಾಲ ಸ್ಥಳೀಯ ನಾಯಕರಂತೆ ಮೆರೆದ ಬಳ್ಳಾರಿಯ ಕಾಂಗ್ರೆಸ್ ಪಕ್ಷದ ಹಿರಿಯರೂ ರೆಡ್ಡಿಗಳ ವಿರುದ್ಧ ಸೆಡ್ಡು ಹೊಡೆಯಲಿಲ್ಲ. ಅಲ್ಲಂ ವೀರಭದ್ರಪ್ಪ ಬೀದಿಗಿಳಿದು ರೆಡ್ಡಿಗಳ ಫ್ಯೂಡಲ್ ರಾಜಕಾರಣವನ್ನು ಪ್ರತಿಭಟಿಸಲಿಲ್ಲ. ಕೊಂಡಯ್ಯನಿಗೆ ಕೆಂಡಾಮಂಡಲವಾಗುವ ಗುಣವೇ ಇಲ್ಲ. ಇನ್ನು ದಿವಾಕರ ಬಾಬುವಂತೂ ಬಾಲ ಕತ್ತರಿಸಿಕೊಂಡ ಪರಿಸ್ಥಿತಿಯಲ್ಲೇ ಮುಂದುವರೆದು ಕರುಣಾಜನಕ ಸ್ಥಿತಿಯಲ್ಲಿದ್ದಾರೆ.



ಬಳ್ಳಾರಿ ಸಮಾವೇಶದಲ್ಲಿ ಸಿದ್ದರಾಮಯ್ಯ ಮತ್ತು ಕಾಂಗ್ರೆಸಿಗರು


ಈ ಮಧ್ಯೆ ಎಂ.ಪಿ.ಪ್ರಕಾಶರ ಪುತ್ರ ಎಂ.ಪಿ.ರವೀಂದ್ರ ಹರಪ್ಪನಹಳ್ಳಿ ಕ್ಷೇತ್ರದ ಕ್ಯಾಂಡಿಡೇಟ್ ಆಕಾಂಕ್ಷಿ ಆಗಿದ್ದರೂ, ಬಳ್ಳಾರಿ ಗ್ರಾಮಾಂತರ ಪ್ರದೇಶದ ಕಾಂಗ್ರೆಸ್ ಅಧ್ಯಕ್ಷನಾಗಿದ್ದರೂ ಆತ ಜಿಲ್ಲೆ ರಾಜಕಾರಣದಲ್ಲಿ ಆಟಕ್ಕುಂಟು ಲೆಕ್ಕಕ್ಕಿಲ್ಲದಂತಾಗಿದ್ದಾರೆ.

ಇನ್ನು ಜೆಡಿಎಸ್ ಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಲ್ಲ. ಈ ಪಕ್ಷದಲ್ಲಿ ಹೇಳಹೆಸರಿಲ್ಲದಂತಿದ್ದವರೂ ಈಗ ಶ್ರೀರಾಮುಲು ಪಾದಾರವಿಂದಗಳಲ್ಲಿ ಲೀನವಾಗಿದ್ದಾರೆ.


ಈಗ ರೆಡ್ಡಿ ಗ್ಯಾಂಗಿನ ಲೀಡರ್ ಜನಾರ್ದನ ಜೈಲಿನಲ್ಲಿದ್ದಾನೆ. ಆದರೂ ಆತ ಚಂಚಲಗುಡದಲ್ಲಿ ಕೂಟ ಹಾಕುತ್ತಿರುವ ತಾಳಕ್ಕೆ ಸರಿಯಾಗಿ ಶ್ರೀರಾಮುಲು ಪಾದಯಾತ್ರೆಯಲ್ಲಿ ಹೆಜ್ಜೆ ಹಾಕುತ್ತಿದ್ದಾನೆ.

ಇದನ್ನೆಲ್ಲ ನೋಡಿದರೆ ಬಳ್ಳಾರಿ ಮತ್ತೊಂದು ಅವಧಿಗೆ ರೆಡ್ಡಿಗಳ ಕಪಿಮುಷ್ಟಿಯಲ್ಲಿ ನರಳುವುದು ಬಹುತೇಕ ಗ್ಯಾರಂಟಿ ಎಂಬಂತಾಗಿದೆ.


ಇದಲ್ ಬಳ್ಳಾರಿ ಜಿಲ್ಲೆಯ ದುರ್ದೈವವಲ್ಲದೆ ಮತ್ತಿನ್ನೇನು? ❦



ಮನ ಕರಗದವರಲ್ಲಿ



ಕಥೆ



• ಬಸು ಬೇವಿನಗಿಡದ

ಮಗನ ಸಲುವಾಗಿ ಆಕೆ ಎಷ್ಟೊ ನಿದ್ದೆಯಿಲ್ಲದ ರಾತ್ರಿಗಳನ್ನು ಕಳೆದಳು. ಗೆಳೆಯರ ಜೊತೆ ಹೊರಗೆ ಹೋಗುತ್ತಿದ್ದ ರಾಮು ರಾತ್ರಿ ತಡವಾಗಿ ಬರುತ್ತಿದ್ದ. "ಊಟ ಮಾಡೋ" ಅಂದರೆ "ಹೊಟೇಲಿನ್ಯಾಗ ಉಂಡೀವಿ" ಅನ್ನುತ್ತಿದ್ದ. ಗೆಳೆಯರು ಎಲ್ಲ ಒಳ್ಳೆಯವರೆ ಇದ್ದಂತಿರುತ್ತಿದ್ದರು. "ಲಗೂನ ಬರ್ರೊ, ಅಪ್ಪ-ಅವ್ವನ್ನ ಮಾತು ಕೇಳ್ರೊ, ಏನಾರ ಉದ್ಯೋಗಕ್ಕ ಹತ್ರೊ" ಅವ್ವ ಮಗನಲ್ಲಿ, ಅವನ ಸ್ನೇಹಿತರಲ್ಲಿ ಅಂಗಲಾಚುತ್ತಿದ್ದಳು. ರಾಮಣ್ಣ ಸೈತ ಒಮ್ಮೊಮ್ಮೆ ತಾಯಿಗೆ ಪ್ರೀತಿ ಬರುವಂತೆ "ಆತು ಯವ್ವಾ, ಇನ್ನ ಮ್ಯಾಲ ನೀ ಹೇಳಿದಂಗ ಕೇಳ್ತೀನಿ" ಎನ್ನುತ್ತಿದ್ದ.

"ಏ ಸುಜಾ, ಹಂಗ್ಯಾಕ ಕುಂತೀ? ಏನ ವಿಚಾರ ಮಾಡ್ಲಿಕ್ಹತ್ತಿ? ಎಷ್ಟ ದಿನ ಅಂತ ಬರೀ ಅದನ್ನ ನೆನಸಿಕೊಂತ ಕುಂಡ್ರತಿ? ಹೀಂಗ ಅಳಕೊಂತ ಕುಂತ್ರ ತೀರಗಾವಾ? ಅಂವಂದು ಅಂವಂಗ, ನಿಂದು ನಿನಗ. ಅವನ ನೋಟವಾಗ ಅಷ್ಟ ಇತ್ತು, ಎಲ್ಲಾ ಮುಗೀತು..." ಅಪ್ಪನ ಕಣ್ಣೀರು ಪಳಪಳ ಇಳಿದವು. ದುಃಖ ತಡೆಯಲಾರದೆ ಸುಜಾತಾ ತನ್ನ ಅಣ್ಣ ಮಲಗುತ್ತಿದ್ದ ಪಲ್ಲಂಗದ ಮೇಲೆ ದೊಪ್ಪನೆ ಬೀಳುತ್ತ "ರಾಮಣ್ಣಾ ಎಲ್ಲಿದೀಯೊ" ಎಂದು ಖಾಲಿ ಹಾಸಿಗೆಯನ್ನು ತನ್ನ ಕಣ್ಣೀರಿನಿಂದ ತೋಯಿಸಿದಳು. ಅವನಿನ್ನೂ ಇದ್ದಾನೆನ್ನುವ ರೀತಿಯಲ್ಲಿ ಅದನ್ನು ಸ್ಪರ್ಶಿಸಿದಳು. ಎಂಟು ದಿನದ ಹಿಂದೆ ರಾಮಣ್ಣ ಇದ್ದ. ಈಗಿಲ್ಲ ಎಂದರೆ ನಂಬುವುದಾದರೂ ಹೇಗೆ?

ಎದೆಯುದ್ದ ಬೆಳೆದ ಮಗನನ್ನು ಅಪ್ಪ ಹೊಡೆಯುತ್ತಿದ್ದ. ಆದರೆ ಎಷ್ಟು ಬೈದರೂ ಹೊಡೆದರೂ ಅಣ್ಣ ಸುಧಾರಿಸಲಿಲ್ಲ! ಇನ್ನು ಮೇಲೆ ಹೊಡೆಯಲು ನಾನಿದ್ದರಲ್ಲವೆ ಎಂದು ಸವಾಲು ಹಾಕುವವನಂತೆ ಸತ್ತು ಹೋದ. "ರಾಮಣ್ಣಗ ಆರಾಮಿಲ್ಲ ಲಗೂ ಬಾ" ಅಂತ ಹೇಳಿ ಕಳುಹಿಸಿದ್ದರು. ತಾನು ಬರುವ ಹೊತ್ತಿಗೆ ಎಲ್ಲ ಮುಗಿದುಹೋಗಿತ್ತು, ಅಣ್ಣನ ಶವ ಮಣ್ಣಿನಲ್ಲಿ ಮುಚ್ಚಿಹೋಗಿತ್ತು, ಪ್ರಜ್ಞೆ ತಪ್ಪಿ ಬಿದ್ದ ಸುಜಾತಾಳನ್ನು ಎತ್ತಿ ನೀರು ಹನಿಸಿದರು. ಅವಳ ಬಾಯಿಯಿಂದ ಬರಿ "ರಾಮಣ್ಣ ನನ್ನ ರಾಮಣ್ಣ ಎಲ್ಲಿ ಹ್ವಾದ್ಯೋ?" ಎಂಬ ಗದ್ಗದಿತ ಧ್ವನಿ ಎಷ್ಟೊ ಹೊತ್ತಿನ ತನಕ ಕೇಳಿಬರುತ್ತಿತ್ತು.

ಅವನು ಮಲಗುತ್ತಿದ್ದ ಹಾಸಿಗೆಯ ಮೇಲೆ ಅವನ ಜೀವಕೋಶಗಳೇನಾದರೂ ಬಿದ್ದಿವೆಯೇನೊ ಎಂದು ತಂಗಿ ತಡಕಾಡಿದಳು. ಅವುಗಳನ್ನು ಕೂಡಿಸಿ ಅವನನ್ನು ಮತ್ತೆ ಹುಟ್ಟಿಸಬಹುದೇನೊ ಎಂದು ಸುಮ್ಮನೆ ಆಗಲಾರದ್ದನ್ನು ಕಲ್ಪಿಸುವಳು. ಕಿಟಕಿಯಿಂದ ಸೂರ್ಯನ ಬಿಸಿಲು ಇದೇ ಹಾಸಿಗೆಯ ಮೇಲೆ ಬೀಳುವತನಕ ಅವನು ಮಲಗಿ ಕೊಳ್ಳುತ್ತಿದ್ದ. ತಾನು ಅವನು ಹೊದ್ದುಕೊಂಡಿದ್ದ ಚಾದರ ಜಗ್ಗುತ್ತಿದ್ದೆ. "ಎಷ್ಟೊತ್ತು ಮಲಕ್ಕೊಳ್ಳೋದು? ಏಳೋ, ನಡಿ, ನನ್ನ ಕರ್ನಾಟಕ ಕಾಲೇಜಿನ ಸ್ಟಾಪಿನ ತನಕ ಬಿಟ್ಟು ಬರೂವಂತೆ" ಬೊಗಸೆ ನೀರು ತಂದು ಅವನ ಮುಖಕ್ಕೆ ಗೊಜ್ಜುತ್ತಿದ್ದೆ.

"ಏ ಸೂಜಿ, ನೋಡಾ, ನಿನ್ನ ಹೊಡೀತೀನಿ ಮತ್ತ ಸುಮ್ಮನ ಇಲ್ಲಿಂದ ಹೊಕ್ಕಿಯಿಲ್ಲೊ" ಜಗ್ಗಿದ ಚಾದರನ್ನು ತನ್ನ ಕೈಯಿಂದ ಕಸಿದುಕೊಳ್ಳುತ್ತ ಮುಖ, ಕೈ, ಕಾಲುಗಳನ್ನು ಮತ್ತೆ ಚಾದರದೊಳಗೆ ಹುದುಗಿಸಿ ಮುದುಡಿಯಾಗಿ ಗೊರಕೆ ಹೊಡೆಯುತ್ತಿದ್ದ. ಅವ್ವ ಅಡಿಗೆಮನೆಯಿಂದಲೆ "ಸುಜಾ, ನೀನು ಬಾ ಇತ್ಲಾಗ, ಅಂವಗ ಯಾಕ ಕಾಡಸ್ತಿ? ಅಂವ ರಾತ್ರಿ ಲೇಟಾಗಿ ಬಂದಾನ. ಸ್ವಲ್ಪ ಮಕ್ಕೊಳ್ಳಿ ಬಿಡು. ಕಣ್ಣಿಗೆ ಕಣ್ಣ ಹಚ್ಚಿ ಒಂದ ತಾಸು ನಿದ್ದಿ ಮಾಡ್ಲಿ. ಇವರೂ ಇದೇ ಈಗ 'ಅಂವ ಇನ್ನೂ ಎದ್ದಿಲ್ಲೇನು!' ಅಂತ ಹಲ್ಲ ಮಸದ ಹೋಗ್ಯಾರ. ಅಂಥಾದ್ರಾಗ ನಿಂದೊಂದ ಕಾಟ ಬ್ಯಾರೆ. ಚೈತನ್ಯನಗರ ಬಸ್ ಬರ್ತದ ನೋಡು. ಅದಕ್ಕ ಹೋಗ ಬಾ, ಸೀದಾ ಹುಬ್ಬಳ್ಳಿಗೆ ಹೋಗ್ತದ."

"ಅದು ನನಗೂ ಗೊತ್ತೈತೀ. ಗಂಡಮಗಾ ಅಂತ ಅಂವಂಗ ಉಬ್ಬಿಸಿದು. ನಾಯೇನು, ಎಷ್ಟ ಆದ್ರೂ ಮತ್ತೊಂದ ಮನಿಗೆ ಹೋಗಾಕಿ ನೋಡು."

"ಹಂಗಲ್ಲ ಸುಜಾತಾ, ನೀನ ನೋಡ್ತಿಯಲ್ಲ, ಅಂವ ಇತ್ತೀಚೆಗೆ ಯಾಕೊ ಬರೇ ಸಿಟ್ಟು, ಸೆಡುವು, ಜಗಳ ಮಾಡೋದು, ಊಟ ಬಿಡೋದು ಮಾಡ್ಲಿಕತ್ಯಾನ. ಏನು ಮಾಡೋದು ಒಂದೂ ತಿಳೀವಲ್ದು. ಇವರ್ನ ಕೇಳಿದ್ರಂತೂ ಅಂವ ತಮ್ಮ ಮಗಾ ಅಲ್ಲ ಅನ್ನವರಂಗ ಹೋಗ್ತಾರು. ಮೊನ್ನೆ ಎಲ್ಲಾರ ಮುಂದ ಅಂವಗ ಬೈದರಲ್ಲ, ಆವತ್ತಿನಿಂದ ಅಂವ ಚೆಂದಾಗಿ ಊಟ ಮಾಡವಲ್ಲ. 'ನಾ ದುಡಕೊಂಡು ಬಂದು ತಿಂತೀನಿ. ನಂದೂ ಅಂವಗ ಹಾಕು' ಅಂತ ಅಪ್ಪಗ ಹೊಳ್ಳಿ ಹೊಳ್ಳಿ ಅಂತಾನು." ಅವ್ವ ಮುಂಜಮುಂಜಾನೆಯೆ ಅಳಲು ಶುರು ಮಾಡಿದ್ದಳು. ಮಗ ನಿದ್ದೆ ಮಾಡಿ ಮನೆ ಸ್ವಲ್ಪ ಹೊತ್ತಾದರೂ ನೆಮ್ಮದಿಯಿಂದಿರಲಿ ಎಂದು ಸೆರಗಿನಿಂದ ಕಣ್ಣು ಒರೆಸಿಕೊಂಡಳು.

ಸುಜಾತಾಳಿಗೆ ಅಂದು ನಿಜಕ್ಕೂ ಹೆದರಿಕೆಯಾಗಿತ್ತು, ಅವ್ವನ ಕಣ್ಣೀರು, ಅವಳ ಮುಖದಲ್ಲಿದ್ದ ಹೆದರಿಕೆ ಮೊದಲ ಬಾರಿಗೆ ಅವಳನ್ನು ಗಾಬರಿಗೊಳಿಸಿದವು. ಏನೊ ತಮ್ಮ ಮನೆಯಲ್ಲಿ ಈ ಅಣ್ಣನದೊಂದು ಚಿಂತೆಯಾಯಿತು. ಮೊದಲು ಅವನನ್ನು ಎಲ್ಲರೂ ಎಷ್ಟು ಹೊಗಳುತ್ತಿದ್ದರು. ಅವನ ತರಹ ತಾನೂ ಓದಬೇಕೆಂದು ಅಪೇಕ್ಷೆ ಪಡುತ್ತಿದ್ದರು. ಇಂಜಿನಿಯರಿಂಗ್‌ನಲ್ಲಿ ತನಗೆ ತಿಳಿಯಲಾರದನ್ನು ಅವನು ಹೇಳುತ್ತಿದ್ದ. ತನಗೆ ಅವನಿಗೆ ಎರಡು ವರ್ಷದ ಅಂತರ. ಆದರೆ ಅವನು ಮೂರನೆಯ ವರ್ಷ ಇಂಜಿನಿಯರಿಂಗ್‌ಗೆ ಬರುವ ಹೊತ್ತಿಗೆ ಯಾಕೊ ಓದಿನಲ್ಲಿ ಆಸಕ್ತಿ ಕಳೆದುಕೊಂಡ. ಕಾಲೇಜಿಗೆ ಹೋಗುತ್ತೇನೆ ಅಂತ ಎಲ್ಲೆಲ್ಲಿಯೊ ಹೋಗುತ್ತಿದ್ದ. ಅವನು ಕಾಲೇಜಿಗೆ ಬರುತ್ತಿಲ್ಲವೆಂದು ತನಗೆ ಗೊತ್ತಿತ್ತು, ತಾನು ಬಾಯಿ ಬಿಟ್ಟಿರಲಿಲ್ಲ, ಆದರೆ ಅವನೆ ಒಂದು ದಿನ "ನಾನು ಕಾಲೇಜ ಒಲ್ಲೆ" ಅಂತ ಅಪ್ಪನೆದುರು ಹೇಳಿದ. ಅವ್ವ ಗೋಗರೆದಳು. ಅಪ್ಪ ಮಂದಿ ಕೂಡಿಸಿದ. ಸ್ನೇಹಿತರಿಂದ ಹೇಳಿಸಿದ. ಮಗ ಯಾವುದಕ್ಕೂ ಮಣಿಯಲಿಲ್ಲ, ಬೈಕ್ ತೆಗೆದುಕೊಂಡು ತಿರುಗತೊಡಗಿದ. ಬೈದರೆ ಬೈಕ್ ಬಿಟ್ಟುಹೋಗುತ್ತಿದ್ದ. ಒಮ್ಮೊಮ್ಮೆ ಕೋಣೆಯಲ್ಲಿ ಸುಮ್ಮನೆ ಕೂಡುತ್ತಿದ್ದ. ಅಂತಹ ದಿನಗಳಲ್ಲಿಯೆ ಆಕೆ ಅವನಲ್ಲಿ ಗೆಲುವು ತುಂಬಿಸಲು ಯತ್ನಿಸುತ್ತಿದ್ದಳು. ಅಣ್ಣನ ಜೊತೆ ಹರಟುತ್ತಿದ್ದಳು. ಅವನ ಮನಸ್ಸು ಸರಿಯಿದ್ದರೆ ಅವ್ವನೊಡನೆ, ತಂಗಿಯೊಡನೆ ನಕ್ಕು ನಲಿಯುತ್ತಿದ್ದ. ತಂಗಿಯನ್ನು ಬೈಕ್ ಮೇಲೆ ಕೂಡ್ರಿಸಿಕೊಂಡು ಸ್ಟಾಪಿನವರೆಗೂ ಬಿಟ್ಟುಬರುತ್ತಿದ್ದ. ಆದರೆ ಸಿಟ್ಟು ಬಂದರೆ ಜಪ್ಪಯ್ಯ ಎಂದರೂ ಬರುತ್ತಿರಲಿಲ್ಲ.

ಹೊರಗೆ ಹೋಗಿದ್ದ ಅಪ್ಪ ಮನೆಗೆ ಬಂದರೆ ಮತ್ತೆ ಜಗಳವೆಂದು ಸುಜಾತಾ ಲಗೂಲಗೂ ಒಂದು ಚಪಾತಿ ತಿಂದು ಒಂಭತ್ತೂವರೆಯ ಚೈತನ್ಯನಗರ ಬಸ್ ಹತ್ತಿದಳು. ಹುಬ್ಬಳ್ಳಿ ಮುಟ್ಟುವತನಕ ಸುಮ್ಮನೆ ಮಲಗಿದ್ದ ಅಣ್ಣ, ಹೆದರಿಕೊಂಡಿದ್ದ ಅವ್ವ ಅವಳ ಕಣ್ಮುಂದೆ ಬರುತ್ತಿದ್ದರು. ಈ ಸಲ ಅವಳ ಇಂಜಿನಿಯರಿಂಗ್ ಮುಗಿಯುತ್ತಿದೆ. ಎಂ.ಟೆಕ್. ಮಾಡಬೇಕೆಂದು ಆಸೆಯಿದೆ. ಆದರೆ ಅವ್ವ-ಅಪ್ಪನಿಗೆ ಇಷ್ಟವಿಲ್ಲ. ತನ್ನ ಮದುವೆಗೆ ಆಗಲೆ ಅಲ್ಲಿ-ಇಲ್ಲಿ ವರ ನೋಡುತ್ತಿದ್ದಾರೆ. ಬಹಳಷ್ಟು ಓದಿದರೆ ಗಂಡು ಸಿಗುವುದು ಕಷ್ಟವೆಂದು ಅವ್ವ ಹೇಳುತ್ತಿದ್ದಳು. ಸುಜಾತಾಳಿಗೆ ವಿಚಿತ್ರವೆನ್ನಿಸುತ್ತಿತ್ತು, ಹೆಚ್ಚಿಗೆ ಓದಿದ ಹೆಂಡತಿಯಿದ್ದರೆ ಗಂಡನ ಮರ್ಯಾದೆಗೆ ಕುತ್ತು! ಅವಳು ಸುಂದರಿಯಾಗಿದ್ದರಂತೂ ಅವನಿಗೆ ವೈರಿಯಂತೆ! ಬಸ್ಸಿನಲ್ಲಿ ತಾನು ಎಷ್ಟೊಂದು ಸಲ ನೋಡುವುದಿಲ್ಲ, ಗಂಡ-ಹೆಂಡತಿ ಎಲ್ಲಿಯಾದರೂ ಹೊರಟಿದ್ದರೆ ಗಂಡನೆ ಟಿಕೆಟ್ ತೆಗೆಸಬೇಕು. ಗದ್ದಲವಿದ್ದರೆ ಗಂಡ ತನ್ನ ಟಿಕೆಟ್ ತೆಗೆಸಿದಯೊ ಇಲ್ಲವೊ ಎಂದು ಆತಂಕದಿಂದ ಹೆಣ್ಣು ಮಕ್ಕಳು ಇಡೀ ಬಸ್ಸಿನಲ್ಲಿ ತಮ್ಮ ದೇವರನ್ನು ಹುಡುಕುತ್ತಿರುತ್ತಾರೆ. ಹತ್ತು ರೂಪಾಯಿ ಬೇಕಾದರೂ ಆಕೆ ಅವನನ್ನೆ ಕೇಳಬೇಕು. ಉಳಿದ ಚಿಲ್ಲರೆಯನ್ನು ಅವನ ಕೈಗೆ ಸುರಿಯಬೇಕು. ತಮ್ಮ ಮನೆಯಲ್ಲಿಯೂ ಅಷ್ಟೆ. ಅವ್ವನಿಗೆ ಸಣ್ಣ ನೌಕರಿಯಿದ್ದರೂ ಪಗಾರವನ್ನೆಲ್ಲ ಅಪ್ಪನಿಗೆ ತಂದು ಕೊಡುತ್ತಾಳೆ. ಬಸ್ಸಿಗೆ, ಗಿರಣಿಗೆ, ಕಾಯಿಪಲ್ಲೆಗೆ, ಅದಕ್ಕ ಇದಕ್ಕೆ ಎಂದು ಅಪ್ಪ ಲೆಕ್ಕ ಹಾಕಿ ರೊಕ್ಕ ಕೊಡುತ್ತಾನೆ. ಅಪ್ಪನ ಕಡೆ ಅಷ್ಟೊಂದು ದುಡ್ಡಿದೆ. ಆದರೂ ಅವನು "ಕುಂತ ಉಂಡ್ರ ಎಷ್ಟ ದಿನ ಆದೀತು. ದುಡಿಬೇಕು, ಮನ್ಯಾಗ ರೊಕ್ಕ ಒಟ್ಟಬೇಕು" ಅನ್ನುತ್ತಿದ್ದ. ದುಡಿಯದ ಮಗನ ಬಗ್ಗೆ ಕೆಂಡಾಮಂಡಲವಾಗುತ್ತಿದ್ದ.

ತಾನು ನೌಕರಿ ಮಾಡುತ್ತೇನೆಂದರೆ ಅವ್ವ ಅನ್ನುತ್ತಾಳೆ: "ಹೂಂ, ಮಾಡು, ಆದರ ಅಕಸ್ಮಾತ್ ಗಂಡನ ಮನಿಯವರು ಬ್ಯಾಡೆಂದ್ರ ಬಿಡಬೇಕು ನೋಡು." ರಾಮಣ್ಣ ಒಬ್ಬನೆ ತನ್ನ ಬೆಂಬಲಕ್ಕೆ ನಿಲ್ಲುತ್ತಿದ್ದ. "ಸೂಜಿ, ನೀನು ಅಪ್ಪ, ಅವ್ವನ ಮಾತು ಕೇಳಿದಿಯಂದ್ರ ಉರಲ ಹಾಕ್ಕೊಂಡಾಂಗ ನೋಡು. ಅವರು ತೋರಿಸಿದ ವರನ ಮದ್ವಿಯಾದಿಯಂದ್ರ, ಗಂಡನ ಕಾಲ ತೊಳದು ಅದ ಪಂಚಾಮೃತ ಅಂತ ಕುಡೀಬೇಕಾಗತೈತಿ. ನಾ ಹೇಳ್ತಿನಿ. ನಿನಗ ತಿಳಿದಿದ್ದ ಮಾಡು. ಇವರಿಗೆ ಹೇಳಬ್ಯಾಡ. ನೌಕರಿ ಬ್ಯಾಡ ಅಂತಾರಲ್ಲ, ಒಂದ ತಿಂಗಳ ಪಗಾರ ತಂದ ಕೊಡು. ಆಮ್ಯಾಲ ನೌಕರಿ ಬಿಡಬ್ಯಾಡಂತ ತಾಂವ ಬೆನ್ನ ಬೀಳ್ತಾರು."

ತಾನು ಉರಲು ಹಾಕಿಕೊಳ್ಳುತ್ತೇನೆ ಅಂತ ಅಣಕಿಸಿದ ರಾಮಣ್ಣ ತಾನೆ ಕೊರಳು ನೀಡಿದ್ದು ಯಾಕೆ? ಅಷ್ಟೊಂದು ಬಲಾಢ್ಯನಾಗಿದ್ದ ಅಣ್ಣ ಯಾವ ಸಂಗತಿಗಾಗಿ ಸೋತುಬಿಟ್ಟ? ಅದು ಮಾತ್ರ ಎಂದಿಗೂ ಗೊತ್ತಾಗುವಂತಿರಲಿಲ್ಲ, ಕೇವಲ ಊಹೆಗಳನ್ನು ಹೊಂದಿಸಿಕೊಳ್ಳುತ್ತ ಹಳೆಯ ನೆನಪುಗಳಲ್ಲಿ ಅವನನ್ನು ಕರಗಿಸುತ್ತ ಹೋಗಬೇಕು.

ಅವಳು ಬೆಂಗಳೂರಿನ ದೊಡ್ಡ ಸಾಫ್ಟವೇರ್ ಕಂಪನಿಯೊಂದನ್ನು ಸೇರಿ ತಿಂಗಳಿಗೆ ಐವತ್ತು ಸಾವಿರ ರೂಪಾಯಿ ಸಂಬಳ ತರತೊಡಗಿದಾಗ ಅಣ್ಣ ಹೇಳಿದಂತೆ ಆಗಿತ್ತು, ಮಗಳ ಸಾಧನೆಯನ್ನು ಅಪ್ಪ ಅವ್ವ ಎಲ್ಲೆಡೆ ಕೊಂಡಾಡಿದರು. "ಮಗಳು ಸಾಫ್ಟವೇರ್ ಇಂಜಿನಿಯ[r] ವರ್ಷಕ್ಕೆ ಏಳು ಲಕ್ಷ ರೂಪಾಯಿ ಪ್ಯಾಕೇಜ್. ಇನ್ನ ಮ[…] ಆಕಿಗೆ ತಕ್ಕಂತಹ ವರ ನೋಡಬೇಕು" ಎಂದು ಒಂದೆರಡ[…] ನಾಲ್ಕೈದು ಊರುಗಳಲ್ಲಿ ಡಂಗುರ ಬಾರಿಸಿದರು. ಮಗ[…] ನೌಕರಿಗೆ ಹತ್ತಿದ ಮೇಲೆ ಮಗ ಹತ್ತದಿದ್ದರೆ ಹೇ[…] ಅದೇ ಚಿಂತೆ ಮಹದೇವಪ್ಪರನ್ನು ಕಾಡುತ್ತಿತ್ತು. "ಗಂಡಮ[…] ಮ್ಯಾಲ ಎಷ್ಟ ಆಸೆ ಇಟ್ಕೊಂಡು ಬೆಳೆಸಿದ್ನಿ, ಎಲ್ಲಾ ಹೊಳ[…] ಹುಣಸಿ ಹಣ್ಣ ತೊಳದಂಗ ಮಾಡಿದ. ಇಂವ ಮೊದ[…] ನೌಕರಿಗೆ ಹೋಗಬೇಕಾಗಿತ್ತು, ಇನ್ನೂ ಹಂಗ ಅಡ್ಯಾಡ[…] ಹತ್ತ್ಯಾನ. ಎಂದು ದಾರಿಗೆ ಹತ್ತಾನೊ ದೇವರೆ ಬಲ್ಲ[…] ಸಿಕ್ಕವರೆದುರು ಅಪ್ಪನ ಪ್ರಲಾಪ ನಡೆದಿರುತ್ತಿತ್ತು.

"ಇಂವನ್ನ ಏನ ಮಾಡ್ಲಿ ಅಂತೇನಿ" ಹಗಲು-ರಾ[…] ಅವ್ವನೆದುರು ಹಲ್ಲು ಕಡಿಯುತ್ತಿದ್ದರು.


"ಹೋಗ್ಲಿ ಬಿಡ್ರಿ. ಅಂವನ್ನ ಯಾಕ ಗೋ[…] ಹೊಯ್ಕೋತೀರಿ? ತನಗ ತಿಳಿದ ಮ್ಯಾಲ ಒಂದ ದಂಡಿ[…] ಹತ್ತಾನ. ಅಲ್ಲೀತನಕ ನಾವು ಏನ ಮಾಡಿದ್ರೂ ಅಂ[…] ಹಂಗ" ಅವ್ವ ಅಪ್ಪನ ಸಿಟ್ಟನ್ನು ನಂದಿಸಲು ಪ್ರಯತ್ನಿಸುತ್ತಿದ್ದ[…]

"ಬಾಳ ಮುದ್ದ ಮಾಡಿ ಅಂವನ್ನ ನೀನ ಕೆಡಿಸಿ[…] ಮೊದಲಿಂದ ನಾಕ ಗಜ್ಜ ಹಾಕ್ಕೊಂತ ಬಂದಿದ್ರ ಅಂ[…] ಸರಿ ಇರ್ತಿದ್ದ."

"ಹೋಗ್ರಿ ಹಂಗಾದ್ರ, ಹೊಟ್ಟ್ಯಾಗ ಹುಟ್ಟಿದ ಮಗ[…] ಕೊಂದಬಿಡ್ರಿ." ಹೆತ್ತ ತಾಯಿಯ ಕರುಳು ಮಗನನ[…] ಉಳಿಸಲು ಪ್ರಯತ್ನಿಸುತ್ತಿತ್ತು.

ಮಗನ ಸಲುವಾಗಿ ಆಕೆ ಎಷ್ಟೊ ನಿದ್ದೆಯಿಲ್ಲ[…] ರಾತ್ರಿಗಳನ್ನು ಕಳೆದಳು. ಗೆಳೆಯರ ಜೊತೆ ಹೊರ[…] ಹೋಗುತ್ತಿದ್ದ ರಾಮು ರಾತ್ರಿ ತಡವಾಗಿ ಬರುತ್ತಿದ್ದ. "ಊ[…] ಮಾಡೋ" ಅಂದರೆ "ಹೊಟೇಲಿನ್ಯಾಗ ಉಂಡೀವಿ[…] ಅನ್ನುತ್ತಿದ್ದ. ಗೆಳೆಯರು ಎಲ್ಲ ಒಳ್ಳೆಯವರೆ ಇದ್ದಂತಿರುತ್ತಿದ್ದರು. "ಲಗೂನ ಬರ್ರೊ, ಅಪ್ಪ-ಅವ್ವನ್ನ ಮಾತು ಕೇಳ್ರೊ, ಏನಾ[…] ಉದ್ಯೋಗಕ್ಕ ಹತ್ರೊ" ಅವ್ವ ಮಗನಲ್ಲಿ, ಅವನ ಸ್ನೇಹಿತರ[…] ಅಂಗಲಾಚುತ್ತಿದ್ದಳು. ರಾಮಣ್ಣ ಸೈತ ಒಮ್ಮೊಮ್ಮೆ ತಾಯಿ[…] ಪ್ರೀತಿ ಬರುವಂತೆ "ಆತು ಯವ್ವಾ, ಇನ್ನ ಮ್ಯಾಲ ನೀ[…] ಹೇಳಿದಂಗ ಕೇಳ್ತೀನಿ" ಎನ್ನುತ್ತಿದ್ದ. ಅದು ಎರಡೇ ದಿನ[…] ಆಮೇಲೆ ಅದೇ ಕಥೆ. ಅವನು ಮಾತು ಕೇಳದಿರುವುದು ಅವ್ವ ಅಳುವುದು.

ಯಾರಿಗೂ ಯಾರೂ ಪರಿಚಯವಿರದ ಸುಖ-ದುಃಖಗಳನ್ನು ಕೇಳದ ಈ ದೂರದ ಬೆಂಗಳೂರಿನಲ್ಲಿ ನೌಕರಿ ಮಾಡುತ್ತ ಸುಜಾತಾ ಒಮ್ಮೊಮ್ಮೆ ಖಿನ್ನಳಾಗುತ್ತಿದ್ದಳು. ತಾನೆ ಇಷ್ಟು ಒಂಟಿತನ, ಖಿನ್ನತೆ ಅನುಭವಿಸುತ್ತಿರಬೇಕಾದರೆ ಅವ್ವನ ಪರಿಸ್ಥಿತಿ ಏನಾಗಿರಬೇಡ! ತಾನು ಧಾರವಾಡ ಬಿಟ್ಟು ಬರಬಾರದಾಗಿತ್ತು, ಅಲ್ಲಿಯೆ ಇದ್ದಿದ್ದರೆ ಅಣ್ಣ ಬದುಕಿರುತ್ತಿದ್ದ. ಅವ್ವ ನಗುತ್ತಿರುತ್ತಿದ್ದಳು. ಅಪ್ಪನ ಸಿಟ್ಟು ಕಡಿಮೆಯಾಗಿರುತ್ತಿತ್ತು. ಆದರೆ ದೊಡ್ಡ ಸಂಬಳದ ಈ ನೌಕರಿ ಸಿಕ್ಕಿತು. ತನಗೆ ನೌಕರಿ ಸಿಕ್ಕಿದ್ದು ಅಣ್ಣನಿಗಂತೂ ದೊಡ್ಡ ಸಂತೋಷದ ಸಂಗತಿಯಾಗಿತ್ತು, ಅವ್ವ-ಅಪ್ಪ ಕೂಡ ಖುಷಿಯಿಂದ ಕುಣಿದಾಡುತ್ತಿದ್ದರು. ಆದರೆ ತಂದೆ-ತಾಯಿಯ ಸಂತೋಷ ಎರಡು ವರ್ಷಗಳನ್ನೂ ದಾಟಲಿಲ್ಲ, ಮಗ ಇದುವರೆಗೆ ಕೊಟ್ಟ ದುಃಖ ಸಾಕಾಗಲಿಲ್ಲವೆಂಬಂತೆ ಅವರು ಊ[…] ಸಾಧ್ಯವಿರದಂತಹ, ಅವರಿಗೆ ಹೃದಯಾಘಾತ ಆಗುವಂತಹ ಬರಸಿಡಿಲಿನ ಸುದ್ದಿಯನ್ನು ಸುಜಾತಾ ಒಂದು ದಿನ ತಣ್ಣಗೆ ಕೊಟ್ಟು ಬಿಟ್ಟಳು.



ಮನ ಕರಗದವರಲ್ಲಿ

...ಪ್ರಶಾಂತನ ಪರಿಚಯ ತನಗೆ ...ಯಿತು? ಪ್ರೇಮದ ಬೀಜ ಹೇಗೆ ...ಕುರಿಯೊಡೆಯಿತು? ಮದುವೆಯಾದರೆ ...ನ್ನೆ ಎಂದು ಹೇಗೆ ಗಟ್ಟಿಯಾದೆ? ...ಸುಳ್ಳು ಎಂದು ಹೇಗೆ ಹೇಳಿದೆ? ...ೂ ಗೊತ್ತಿಲ್ಲ. "ಅವಳು ತನ್ನ ಮಗಳೆ ...ಆಕೆ ಅಲ್ಲಿಯೆ ಬೆಂಗಳೂರಿನಲ್ಲಿಯೆ ...ಲಿ" ಎಂದರಂತೆ ಅಪ್ಪ. ಅವ್ವ ... ಫೋನ್ ಮಾಡಿ ಹೇಳಿದಳು. ...ಕೆ ಬರಂಗಿಲ್ಲೇನ ನಿನಗ? ಊರಾಗ ...ಹಡದವರು ಅದಾರ ಅನ್ನೊ ...ಇರಲಿಲ್ಲ? ಎಲ್ಲಿಟ್ಟಿದ್ದಿ ಬುದ್ಧಿ? ...ಗ ಮೊದ್ಲ ಇಷ್ಟ ತ್ರಾಸ ಐತಿ. ...ದ್ರಾಗ ನಿಂದೊಂದವಾ. ನನ್ನ ...ರ ಜೀವಂತ ಇಟ್ಟಿದ್ದಾನು ಪರಮಾತ್ಮ..." ಮುಂದೆ ...ಹೆಜ್ಜೆಯನ್ನು ಹಿಂದಿಡುವುದೆ? ಸುಜಾತಾ ಹೆದರುತ್ತಲೆ ...ಗೆ ಬಂದರೆ ಅವ್ವ-ಅಪ್ಪ ಮನೆಯ ಕದ ತೆರೆಯಲಿಲ್ಲ. ...ಹೊತ್ತು ಹೊರಗೆ ನಿಂತಳು. ಸುತ್ತಮುತ್ತಲ ಮಂದಿ ...ಪರಿಸ್ಥಿತಿಯನ್ನು ನೋಡಿ ನಗುತ್ತಿದ್ದಾರೆ. ಎಷ್ಟು ...ದರೂ ಕಣ್ಣಲ್ಲಿಯ ನೀರು ನಿಲ್ಲುತ್ತಿಲ್ಲ. ಹೆತ್ತವರ ಹೃದಯ ...ಲಿಲ್ಲ. ಈ ಕ್ಷಣಕ್ಕೆ ಭೂಮಿ ಸಿಡಿದು ಎಲ್ಲ ...ಯಾಗಬಾರದೆ ಎಂದೆನಿಸಿತು. ತಾನು ಎಷ್ಟು ...ಾಯಕಳೆಂದು ಅರಿವಾಗತೊಡಗಿತು. ಎಲ್ಲರೆದುರು ...ಮಾನವಾದಂತಾಗಿ ಪ್ರಶಾಂತನನ್ನು ಮರೆತುಬಿಡುವುದೆ ...ಮ ದಾರಿಯೇನೊ ಎಂದು ಸೋತ ಮನಸ್ಸು ...ಸುತ್ತಿತ್ತು. ತಿರುಗಿ ಬೆಂಗಳೂರಿಗೆ ಹೋಗುವುದೆ ...ವೆಂಬ ತೀರ್ಮಾನ ತೆಗೆದುಕೊಳ್ಳಬೇಕೆನ್ನುವಷ್ಟರಲ್ಲಿ ... ಸಪ್ಪಳ ಕೇಳಿಸಿತು. ವೇಗವಾಗಿ ಬಂದ ಬೈಕ್ ಗರ್ರ್... ಎಂಬ ಪರಿಚಿತ ಸಪ್ಪಳದೊಡನೆ ನಿಂತಿದ್ದು ಕೇಳಿಸಿತು. ... ರಾಮಣ್ಣ ಎನ್ನುವದರಲ್ಲಿ ಸಂಶಯವಿರಲಿಲ್ಲ.

...ಅವರು ನಿನ್ನ ಹೊರಗ ನಿಂದರಸಿರತಾರು ಅಂತ ...ಗೊತ್ತಿತ್ತು" ಎಂದೆನ್ನುತ್ತ ಬಾಗಿಲು ಮುರಿಯಿತೇನೋ ...ವಂತೆ ಧಡ್ ಅಂತ ಮುಚ್ಚಿದ ಬಾಗಿಲನ್ನು ಒದ್ದು ... ಕರೆದುಕೊಂಡು ಹೋದ.

...ನೀವೇನು ಮನಶ್ಯಾರೊ ದನಾನೊ. ಮಗಳನ್ನ ...ಒಳಗ ನಿಲ್ಲಿಸಿರಲ್ಲ..." ರಾಮಣ್ಣ ಚೀರುತ್ತಿದ್ದ. ಮಗನ ...ಗೆ ಹೆದರಿದ ಅಪ್ಪ ಹೊರಗೆ ಹೋಗಿಬಿಟ್ಟ.

...ಅಣ್ಣನೆ ಚಹಾ ಮಾಡಿದ. ಅವ್ವ ಸುಮ್ಮನೆ ...ಕುತ್ತಿದ್ದಳು. ಚಹಾ ಕುಡಿಯಲಿಲ್ಲ. ಮಾತೂ ಆಡಲಿಲ್ಲ. ...ತಾ ಕಣ್ಣೀರು ಕುಡಿದಳು. "ಯವ್ವಾ, ನಂದು ತಪ್ಪಾತು!" ...ಮುಂದೆ ಬಂದು ತಬ್ಬಿಕೊಂಡಳು. "ಹೆಂಗರ ಆಗ್ಲಿ, ...ಗ ಆರಾಮ ಇರವಾ" ಅವ್ವನ ಕಣ್ಣಲ್ಲಿ ಅಪ್ಪನ ...ಕೆ ಮನೆ ಮಾಡಿತ್ತು. ಇರು ಅನ್ನಲಿಲ್ಲ. "ಬಾ ನಿನ್ನ ...ಬರ್ತೀನಿ" ಅಣ್ಣನ ಬೈಕು ಕರೆಯುತ್ತಿತ್ತು.

...ಮುಂದೆ ಅಣ್ಣನ ಮಾತಿಗೊ ಹಿರಿಯರ ಮಧ್ಯಸ್ಥಿಕೆಗೊ ...ತಾ. ಪ್ರಶಾಂತನನ್ನು ಮದುವೆಯಾಗುವುದಕ್ಕೆ ಅಪ್ಪ ... ಸೂಚಿಸಿದ. ಬೆಂಗಳೂರಿನಲ್ಲಿ ಮದುವೆಯೂ ...ತು. ಸುಜಾತಾಳಿಗೆ ಎಲ್ಲ ನೆನಪಾಗುವುದು. ತನ್ನ ...ದುವೆಯಲ್ಲಿ ರಾಮಣ್ಣ ಎಷ್ಟು ಸಂತೋಷದಿಂದ ...ಡುತ್ತಿದ್ದ. ತುಂಬ ಗೆಲುವಿನಿಂದ ಬಂದವರನ್ನು ...ಸುತ್ತಿದ್ದ. ಅದು ಅವನದೆ ಮದುವೆ ಕಾರ್ಯಕ್ರಮ ...ಂತೆ ಮುಖ ಅರಳಿತ್ತು. ಅಪ್ಪ ಅಮ್ಮ, ಸಂಬಂಧಿಕರು ...ಥೂ ಅನ್ನುತ್ತಲೆ ಮನಸ್ಸಿಲ್ಲದ ಮನಸ್ಸಿನಿಂದ ಅವಳ ...ದುವೆಗೆ ಬಂದಿದ್ದರು. ಮದುವೆಗೆ ಬಂದಿದ್ದರೂ ಏನೊ ...ಈ ಶುಭ ಕಾರ್ಯ ನಿಂತುಹೋದರೆ ಒಳ್ಳೆಯದೆಂದು ... ಲೆಕ್ಕ ಹಾಕುತ್ತಿದ್ದರು. ಕರೆಂಟ್ ಶಾಕ್ ಹೊಡೆದು ...ವರ ಸಾಯಲೆಂದೊ ಇಲ್ಲವೆ ಅಡಿಗೆ ಮನೆಯ ಸಿಲೆಂಡರ್ ಸಿಡಿದು ದೊಡ್ಡ ಕೋಲಾಹಲವುಂಟಾಗಿ ಈ ವಿವಾಹ ನಡೆಯದಂತೆ ಎಲ್ಲ ಚೆಲ್ಲಾಪಿಲ್ಲಿಯಾಗಬೇಕೆಂದು ಅವರ ಮನಸ್ಸಿನ ಹಾವುಗಳು ಹೆಡೆ ಎತ್ತುತ್ತಿದ್ದವು. ಆದರೆ ಅಂತಹ ಯಾವ ದುರಂತವೂ ಸಂಭವಿಸದೆ ಅವರಿಗೆ ನಿರಾಸೆಯಾಯಿತು. ರಾಮಣ್ಣ ನಿಂತುಕೊಂಡು ಮದುವೆಯ ಛತ್ರದಲ್ಲಿ ಏನೂ ಕೊರತೆಯಾಗದಂತೆ ನೋಡಿಕೊಂಡ. ಸಂತೋಷದಿಂದ "ಊಟ ಮಾಡ್ರಿ" ಎನ್ನುತ್ತಿದ್ದ. ತನ್ನಣ್ಣನನ್ನು ಸುಜಾತಾ ಕೃತಜ್ಞತೆಯಿಂದ ತುಂಬಿಕೊಂಡಳು. ಆ ಘಳಿಗೆಯಲ್ಲಿ ರಾಮಣ್ಣನೆ ತನ್ನ ಅಪ್ಪ ಅನ್ನಿಸಿಬಿಟ್ಟಿದ್ದ. ಅವನು ಕೆಟ್ಟವನು, ದುಂದುವೆಚ್ಚ ಮಾಡುವವನು, ನೌಕರಿಯಿಲ್ಲದೆ ತಿರುಗುವವನು ಎನ್ನುವದೆಲ್ಲ ಮರೆತುಹೋಗಿತ್ತು.

ಇದಾದ ಎಂಟೆ ದಿನದಲ್ಲಿ ಅವನು ಸಾಯುತ್ತಾನೆಂದರೆ ಹೇಗೆ ನಂಬುವುದು? ಮನೆಯ ಮರ್ಯಾದೆ ಉಳಿಸಲು ಅಣ್ಣನಿಗೆ ಹೃದಯಾಘಾತವಾಯ್ತೆಂದು ಸುದ್ದಿ ಹಬ್ಬಿಸಿದರು. "ರಾಮಣ್ಣ ಉರಲ ಯಾಕ ಹಾಕ್ಕೊಂಡ. ಮಾತ ಕೇಳಲಿಲ್ಲಂತ. ಅಪ್ಪನೆ ಹೊಡೆದ ಕೊಂದೊ ಏನೊ?" ಮಂದಿ ಗುಸುಗುಸು ಮಾತನಾಡುತ್ತಿದ್ದರು. ಆದರೆ ಒಳಗಿನ ಕತ್ತಲ ಕೋಣೆಯಲ್ಲಿ ಜೀವವಿಲ್ಲದವರಂತೆ ಕುಳಿತಿರುವ ಅವ್ವ ಮಾತ್ರ ತಿರುಗದೆ ನಿಂತ ಫ್ಯಾನಿನ ಕಡೆ ನೆಟ್ಟ ಕಣ್ಣಿನಿಂದ ನೋಡುತ್ತ, ತನ್ನ ಕೊರಳಿಗೂ ಉಟ್ಟ ಸೀರೆಯನ್ನು ಜಗ್ಗಿಕೊಳ್ಳುತ್ತ ಅವಳು ಸಾಯುವವರ ಹಾಗೆ ಬೀಳುತ್ತಿದ್ದಾಳೆ. ಮಂದಿ, ತಾನು, ಅಪ್ಪ ಅವಳನ್ನು ಸಮಸ್ಥಿತಿಗೆ ತರಲು ಒದ್ದಾಡುತ್ತಿರುವೆವು. ಅಣ್ಣ ಮಾತ್ರ ತಾನು ಸತ್ತು ಈ ಮನೆಯ ಬದುಕಿನ ಗೋಳನ್ನು ಜಾಸ್ತಿ ಮಾಡಿದನೆಂದು ಅವನ ನಗುತ್ತಿರುವ ಫೋಟೊವನ್ನು ಪದೇಪದೇ ಕಣ್ಣಲ್ಲಿ ತುಂಬಿಕೊಳ್ಳುವಳು. ಸಾಯುವ ಮುನ್ಸೂಚನೆ ಅವನ ಮುಖದಲ್ಲಿ ಒಂದು ದಿನವೂ ಕಾಣಲಿಲ್ಲ. ಹೇಗೆ ಸತ್ತ ಏಕೆ ಸತ್ತ? ತೊಂದರೆಯಿದ್ದರೆ ತನ್ನನ್ನು ಒಂದು ಮಾತು ಕೇಳಿದ್ದರೆ ಎಷ್ಟು ನೀಗುತ್ತಿತ್ತೊ ಅಷ್ಟು ಸಹಾಯ ಮಾಡಬಹುದಿತ್ತು. "ಸಿಕ್ಕಾಪಟ್ಟೆ ಸಾಲ ಮಾಡಿದ್ದ. ಗೆಳ್ಯಾರು ಸರಿ ಇರ್ಲಿಲ್ಲ. ಸಾಲಗಾರರ ಕಾಟ ಹೆಚ್ಚಾಗಿ ಕುತ್ತಿಗಿಗೆ ಬಂದ ಕೂಡ್ಲೇ ಬ್ಯಾರೆ ದಾರಿ ಇರ್ಲಿಲ್ಲ. ತಂದಿ ಹತ್ತಿರ ಕೇಳಿದ್ರ ಮನಿ ಬಿಟ್ಟು ಹೋಗು ಅಂತ ಹೇಳಿದ್ನಂತ..." ಊರಲ್ಲಿ ನೂರು ತರದ ಮಂದಿ ನೂರು ತರದ ಕಥೆ ಹೇಳುತ್ತಿದ್ದರು. ಯಾರನ್ನು ನಂಬುವುದು? ಅವನು ಸಾಲ ಮಾಡಿದ್ದರೂ ತೀರಿಸಬಲ್ಲವನಾಗಿದ್ದನೆಂದು ಅವಳಿಗೆ ಗೊತ್ತು. ಆದರೆ ಅಪ್ಪನ ಋಣದ ಸಾಲವನ್ನು ತೀರಿಸಲಾರನೆಂದು ಕೊರಗಿ ಕೊರಳು ಕೊಯ್ದುಕೊಂಡನೆ? ಬೈಗುಳಗಳನ್ನು ಕೇಳಲಾರದೆ ಜೀವ ಕೊಟ್ಟನೆ? ತನ್ನ ಅಣ್ಣ ರಾಮಣ್ಣ ಮಾತ್ರ ಎಂದೂ ತಿರುಗಿ ಬರಲಾರನು.


ಎಲ್ಲ ವಿಧಿವಿಧಾನಗಳನ್ನು ಮುಗಿಸಿ ಗಂಡನ ಜೊತೆ ಅವನ ಮನೆಗೆ ತಿರುಗಿ ಹೋಗುವ ಮುನ್ನ ಸುಜಾತಾ ಊರಿಗೆ ಕೇಳಿಸುವಂತೆ ಅತ್ತಳು. ಅವ್ವ ಬದುಕುವಳೊ ಇಲ್ಲವೊ ಗೊತ್ತಿಲ್ಲ. ಕತ್ತಲ ಕೋಣೆಯಲ್ಲಿ ಚಿತ್ರಗುಪ್ತ ಅವ್ವನಿಗಾಗಿ ಹುಡುಕುತ್ತಿರುವನೆ? "ಏಳ ಯವ್ವಾ, ನನ್ನ ನೋಡಿ ನೀ ಬದುಕಬೇಕು, ನಿನ್ನ ನೋಡಿ ನಾ ಬದಕ್ತೀನಿ" ಜೀವಚ್ಛವವಾಗಿದ್ದ ಅವ್ವನಲ್ಲಿ ಉಸಿರು ತುಂಬಿದಳು. ಎಂದೂ ಅಳದ ಅಪ್ಪ ಮಾತ್ರ ಮಗನನ್ನು ಕಳೆದುಕೊಂಡ ದುಃಖದಲ್ಲಿ ಬಿಕ್ಕಿ ಬಿಕ್ಕಿ ಅಳುತ್ತಿದ್ದಾನೆ. ಹೊರಡುವ ಮುನ್ನ ಮಗಳು ಮಾತ್ರ ಅಪ್ಪನ ಕಣ್ಣೀರನ್ನು ಒರೆಸಲಿಲ್ಲ.

❖

ಒಂದು ಪತ್ರ

ಪ್ರಿಯ ಕ್ಯಾಪ್ಟನ್,

ದಿನಾಂಕ ಮೇ 16, 2012ರ 'ಪತ್ರಿಕೆ'ಯಲ್ಲಿ ಪ್ರಕಟವಾಗಿರುವ 'ಅಡ್ಡಡ್ಡ ಮಲಗಿದ ಅಣ್ಣಾಬಾಂಡ್' ಬರಹ ಓದಿ ರೇಜಿಗೆಯಾಗಿ ಈ ಪತ್ರ ಬರೆಯುತ್ತಿದ್ದೇನೆ. 'ಅಣ್ಣಾಬಾಂಡ್' ಗಾಂಧಿನಗರದ ಗಲ್ಲಾಪೆಟ್ಟಿಗೆ ಲೆಕ್ಕಾಚಾರದಲ್ಲಿ ಮಾಡಿರುವ ಒಂದು ಸಿನಿಮಾ. ಇಂಥಾ ಸಿನಿಮಾಗಳು ಕಲೆ ಮತ್ತು ಬಂಡವಾಳದ ವ್ಯವಹಾರ ಕಲೆಸಿ ಹೋಗಿರುವಂತಹ 'ಗ್ರೇ ಏರಿಯಾ'ದಲ್ಲಿ ರೂಪ ಪಡೆದಿರುತ್ತವೆ ಎಂದು ಹೇಳುವುದಕ್ಕೆ ದೊಡ್ಡ ಪಂಡಿತರೇನೂ ಬೇಕಿಲ್ಲ - ಕರ್ನಾಟಕದ ಬಿ ಮತ್ತು ಸಿ ಸೆಂಟರುಗಳ ಪ್ರೇಕ್ಷಕರಿಗೂ ತಿಳಿದಿರುವಂಥ ಖುಲ್ಲಂ ಖುಲ್ಲಾ ರಹಸ್ಯವಿದು. ಇಂಥ ಸಿನಿಮಾಗಳನ್ನು ವಿಮರ್ಶೆ ಮಾಡುವ ತರಹೇವಾರಿ ವಿಮರ್ಶಾ ವಿಧಾನವನ್ನೂ ಕನ್ನಡದ ಪತ್ರಿಕೆಗಳು ರೂಢಿಸಿಕೊಂಡಿವೆ. ನಿರ್ಮಾಪಕ-ನಿರ್ದೇಶಕರ ಹಿತಾಸಕ್ತಿಯನ್ನು ಕಾಪಾಡಬಯಸುವವರು, ಸಿನಿಮಾದ ಕೆಟ್ಟ ಅಂಶಗಳನ್ನೆಲ್ಲಾ ತಿಪ್ಪೆ ಸಾರಿಸಿ, ಇದ್ದಬದ್ದ ಒಳ್ಳೆ ಅಂಶಗಳನ್ನು ಹೊಗಳುವ ವರಸೆ ತೋರಿಸುತ್ತಾರೆ. ಅದೇ ನಿರ್ಮಾಪಕ-ನಿರ್ದೇಶಕರನ್ನು ಮಟ್ಟ ಹಾಕಬೇಕೆಂದು ಕಾಯುತ್ತಿರುವವರು ಚಿತ್ರದ ಕೆಟ್ಟ ಅಂಶಗಳನ್ನು ಎತ್ತಿ ಇದು ತೋಪಾಗುವ ಸಿನಿಮಾ ಎಂದು ಇಕ್ಕುವುದೂ ಇದೆ. ಇವೆರಡರ ಜೊತೆ, ಚಿತ್ರದ ಒಳ್ಳೆಯ ಹಾಗು ಕೆಟ್ಟ ಅಂಶಗಳನ್ನು ವಿವರಿಸಿ, ಈ ಚಿತ್ರವನ್ನು ನೋಡಬೇಕೋ ಬೇಡವೋ ಎನ್ನುವ 'ಗೈಡ್' ತರಹದ ವಿಮರ್ಶೆಯೂ ರೂಢಿಯಲ್ಲಿದೆ.



ಅಣ್ಣಾ ಬಾಂಡ್: ಯಾವುದು ಪೋಲಿ, ಯಾವುದು ಅಶ್ಲೀಲ?

ಇವೆಲ್ಲ ಈಗ ಹಳೆಯ ಕವಿಸಮಯಗಳು ಅನ್ನಿಸುವಂತೆ ಮಾಡುವ ಹೊಸ ಪ್ರಚೋದಕ ವರಸೆಯೊಂದು ಶುರುವಾಗಿದೆ. ಕೈಬೆರಳ ಲೆಕ್ಕವನ್ನು ಮೀರಿದ ಸಂಖ್ಯೆಯಲ್ಲಿ ಟ್ಯಾಬ್ಲಾಯ್ಡ್ ವಾರಪತ್ರಿಕೆಗಳು ಮತ್ತು ಕೇಬಲ್ ಟಿ.ವಿ. ಚಾನೆಲ್ಲುಗಳ ಹುಟ್ಟಿನೊಂದಿಗೆ, ಬಿಡುಗಡೆಗೊಂಡಿರುವ ಚಿತ್ರವೊಂದನ್ನು 'ಸುದ್ದಿಯ ಹಸಿವ'ನ್ನು ತಣಿಸುವ 'ವಿವಾದ ಜನಕ ವಸ್ತು'ವಾಗಿಯೂ ರೂಪಾಂತರಗೊಳಿಸುವ ಹೊಸ ದಂಧೆಯೂ ಹುಟ್ಟಿಕೊಂಡಿದೆ. ಚಿತ್ರ ಸೋತರೂ ಸೈ ಗೆದ್ದರೂ ಸೈ. ಚಿತ್ರತಂಡದ ಜನರ ಪಡಪೆ ಬಿರುಕೊಂಡದನ್ನು ಹುಡುಕಿ, ಶತ್ರು ಪಾಳಯಗಳನ್ನು ಕಟ್ಟಿ, 'ಸಮರದ ಸೆಟ್' ಹಾಕಿ ವಾರಗಟ್ಟಲೆ ಸುದ್ದಿಸಮಯದ ಹಸಿವನ್ನು ತಣಿಸುವ 'ಬಕಾಸುರ ಪ್ರತಿಭೆ'ಗಳು ಜನಪ್ರಿಯ ಚಲನಚಿತ್ರಗಳಿಗೆ ಹೊಸ 'ವಿವಾದ ಮೌಲ್ಯ'ವನ್ನು ಸೃಷ್ಟಿಸುವ ಕಸುಬನ್ನು ಕಟ್ಟಿ ಬೆಳಗಿಸುತ್ತಿವೆ.

'ಅಡ್ಡಡ್ಡ ಮಲಗಿದ ಅಣ್ಣಾಬಾಂಡ್'ನಂತಹ ಬರಹಗಳ ಮೂಲಕ 'ಪತ್ರಿಕೆ'ಯೂ 'ಬಕಾಸುರ ಪ್ರತಿಭೆ'ಗೆ ಮಣೆ ಹಾಕಿದೆ. ಇದು 'ಪತ್ರಿಕೆ'ಗೆ ಬೇಕಾ? 'ಅಣ್ಣಾಬಾಂಡ್' ಚಿತ್ರದ ನಿರ್ಮಾಪಕ ರಾಘಣ್ಣನನ್ನು, ನಾಯಕ ಅಪ್ಪುವನ್ನೂ ಬೊಟ್ಟು ಚೀಪುವ ಮಕ್ಕಳಂತೆಯೂ, ನಿರ್ದೇಶಕರಾದ ಸೂರಿ, ಯೋಗರಾಜ್ ಭಟ್ಟರನ್ನು ಯಾಮಾರಿಸಿ ಮಕ್ಕಳನ್ನು ಅಪಹರಿಸುವ ಖಳರಂತೆಯೂ ಚಿತ್ರಿಸುವ ಅರುಣ್ ಕುಮಾರ್, 'ವಜ್ರೇಶ್ವರಿ ಕಂಬೈನ್ಸ್' ಸಂಸ್ಥೆಯ ನೈತಿಕ ವಕೀಲರ ಹುದ್ದೆಯನ್ನು ತಾವೇ ಸೃಷ್ಟಿಸಿ ತಾವೇ ವಹಿಸಿಕೊಂಡು ಬಿಟ್ಟಿದ್ದಾರೆ! 'ಮಡಿಕಳದು' ಅನ್ನೋ ಅಚ್ಚಕನ್ನಡ ಪದಪ್ರಯೋಗವೇ 'ಅಶ್ಲೀಲ'ವಾದರೆ, 'ಹೆಣ್ಣೇ ನಿನಗಾಗಿಯೇ..' ಹಾಡಿಗೋಸ್ಕರ 'ಬಹದ್ದೂರ್ ಗಂಡು' ಸಿನಿಮಾವನ್ನ ಒಂದೆರಡು ಕಿಟ ಜಾಸ್ತಿನೇ ನೋಡಿದ ನಮ್ಮಂಥ ಪೋಲಿ ಪಾಪಿಗಳಿಗೆ ಕರುನಾಡಿನಲ್ಲಿ ನೆಲೆಯೇ ಇಲ್ಲವೇ ಅಕಟಕಟ!


ಹಂಗೆ, ನಾನಿನ್ನೂ 2ನೇ ಕ್ಲಾಸ್ ಓದುತಿದ್ದ ಅಂದ ಕಾಲತ್ತಿಲ್ಲ್ 'ಜೇಡರ ಬಲೆ' ಸಿನಿಮಾ ಬಂದಾಗ ಒಂದು ಇನ್‌ಸ್ಟಾಂಟ್ 'ಪೋಲಿ ನುಡಿ' ಹುಟ್ಟಿಕೊಂಡಿತ್ತು-'ಜೇಡರ ಬಲೆ-ಜಯಂತಿ ಲೆ.......'. ಇಂತಪ್ಪ ಕರುನಾಡೋಳ್ 'ಮಡಿಕಳದು' ಅನ್ನೋ ಪದ ಬಳಸೋದುಂಟೆ! ಯಾವುದು ಪೋಲಿ, ಯಾವುದು ಅಶ್ಲೀಲ ಎಂಬ ಸೂಕ್ಷ್ಮದ ಅರಿವಿಲ್ಲದ ಬರಹವನ್ನು 'ತುಂಟಾಟ' ಪ್ರಕಟವಾಗುತ್ತಿದ್ದ 'ಪತ್ರಿಕೆ'ಯಲ್ಲಿ ಓದಬೇಕಾಯ್ತಲ್ಲ ಕ್ಯಾಪ್ಟನ್- ಅದಕ್ಕೇ ಮತ್ತಷ್ಟೂ ರೇಜಿಗೆ.

- ಕೆ.ಫಣಿರಾಜ್, ಉಡುಪಿ

ಅಪರೂಪದ ಫೋಟೋ



ಗ್ರೂಪ್ ಫೋಟೋ! ಕನ್ನಡ ಚಿತ್ರರಂಗದ ಅತಿರಥ ಮಹಾರಥರಾದ ರವಿಚಂದ್ರನ್ ಶಂಕರ್ ನಾಗ್, ರಾಜ್‌ಕುಮಾರ್, ವಿಷ್ಣುವರ್ಧನ್, ಅಂಬರೀಶ್ ಮತ್ತು ಅನಂತ್‌ನಾಗ್



1999ರ ಜುಲೈ 6ಕ್ಕೆ 'ಲಂಕೇಶ್ ಪತ್ರಿಕೆ' 19 ವರ್ಷಗಳನ್ನು ಮುಗಿಸಿ 20ನೇ ವರ್ಷಕ್ಕೆ ಕಾಲಿಟ್ಟಿತು. ಆಗ ಸೆಂಟ್ರಲ್ ಕಾಲೇಜಿನ ಸೆನೆಟ್ ಹಾಲ್‌ನಲ್ಲಿ ಒಂದು ದೊಡ್ಡ ಕಾರ್ಯಕ್ರಮವನ್ನು ಮಾಡಲು ಲಂಕೇಶರು ನಿರ್ಧರಿಸಿದರು. ಆದರೆ ಅದು ಕೇವಲ ಒಂದು ರಾಜಕೀಯ ಅಥವಾ ಸಾಹಿತ್ಯಕ ಕಾರ್ಯಕ್ರಮವಾಗುವುದು ಲಂಕೇಶರಿಗೆ ಇಷ್ಟವಿರಲಿಲ್ಲ. ಹೇಗೆ ಅವರ ಪತ್ರಿಕೆಯಲ್ಲಿ ರಾಜಕೀಯ, ಸಾಹಿತ್ಯ, ಸಿನಿಮಾ, ಕತೆ, ಕ್ರೀಡೆ ಎಲ್ಲದರ ಬಗ್ಗೆ ಬರೆದು ಪ್ರಕಟಿಸುತ್ತಿದ್ದರೋ ಹಾಗೆಯೇ ಆ ಕಾರ್ಯಕ್ರಮದಲ್ಲಿಯೂ ಪತ್ರಿಕೆಯ ಈ ಎಲ್ಲ ಆಶಯಗಳು ವ್ಯಕ್ತವಾಗಬೇಕೆಂಬುದು ಲಂಕೇಶರ ಆಶೆಯಾಗಿತ್ತು.

ಪತ್ರಿಕೆಯ 20 ನೇ ಹುಟ್ಟುಹಬ್ಬ

ದೆಹಲಿಯಲ್ಲಿ ಈಟಿವಿ ಚಾನೆಲ್‌ನಲ್ಲಿ ಕೆಲಸ ಮಾಡುತ್ತಿದ್ದ ಗೌರಿ ವಿವಿಧ ಕಡೆ ಸುತ್ತಾಡುತ್ತಿದ್ದಳು. ಆದರೆ ಆಕೆ ದೆಹಲಿಯಿಂದ ಎಲ್ಲಿಗೇ ಹೋದರೂ ಮುಂಚಿತವಾಗಿಯೇ ಹೇಳುತ್ತಿದ್ದಳಲ್ಲದೆ, ಆಕೆ ಬೇರೆ ಊರನ್ನು ತಲುಪಿದ ಕೂಡಲೇ ಅಲ್ಲಿನ ಫೋನ್ ನಂಬರ್‌ಅನ್ನು ಕೊಡುತ್ತಿದ್ದಳು. ಎರಡು ಮೂರು ದಿನಕ್ಕೊಮ್ಮೆ ಫೋನ್ ಮಾಡಿ ಅಪ್ಪನ ಆರೋಗ್ಯದ ಬಗ್ಗೆ ವಿಚಾರಿಸಿಕೊಳ್ಳುತ್ತಿದ್ದಳು. ತಿಂಗಳಿಗೊಮ್ಮೆ ಬೆಂಗಳೂರಿಗೆ ಬರುತ್ತಿದ್ದಳು.

ಡಿಸೆಂಬರ್ 13 ನಮ್ಮ ಬೇಬಿಯ ಹುಟ್ಟಿದ ಹಬ್ಬ ಅವತ್ತೇ ತನ್ನ ಮೊದಲ ಚಿತ್ರದ ಪ್ರದರ್ಶನವನ್ನು ಸಂಜೆ ಬಾದಾಮಿ ಹೌಸ್‌ನಲ್ಲಿ ಏರ್ಪಡಿಸಿದ್ದಳು. ಆದರೆ ಲಂಕೇಶರು "ನೀನು ಸಿನಿಮಾವನ್ನು **hopeless** ಆಗಿ ಮಾಡಿರುತ್ತೀಯ. ಆದಕ್ಕೆ ನಾನು ಬೇರೆಯವರ ಜೊತೆ ನೋಡುವುದಿಲ್ಲ, ನನಗೆ ಬೇರೆ ಶೋ ಇಡು" ಎಂದರು. ಆಗ ಬೇಬಿ ಅವತ್ತು ಬೆಳಗ್ಗೆ ತನ್ನ ಅಪ್ಪನಿಗೆಂದು ಒಂದು ಪ್ರತ್ಯೇಕ ಶೋ ಇಟ್ಟುಕೊಂಡಳು. ತಂಗಿಯ ಹುಟ್ಟಿದ ಹಬ್ಬ ಮತ್ತು ಆಕೆಯ ಮೊದಲ ಸಿನಿಮಾದ ಪ್ರದರ್ಶನ ಎಂದು ಗೌರಿ ಕೂಡ ದೆಹಲಿಯಿಂದ ಬಂದಳು.

ಲಂಕೇಶರಿಗೂ ಈ ಸಿನಿಮಾದ ಬಗ್ಗೆ ತುಂಬಾ ಆಶೆ ಮತ್ತು ಆತಂಕ ಇತ್ತು, ಅದರ ಬಗ್ಗೆ ಅವರು ಪತ್ರಿಕೆಯಲ್ಲಿ ಹೀಗೆ ಬರೆದಿದ್ದರು:

"... ನನ್ನ ಎರಡನೆಯ ಮಗಳು ಬೇಬಿಗೆ ನನ್ನನ್ನು ಕಂಡರೆ ಹೆದರಿಕೆ. ಅವಳ ಚಿತ್ರ ನೋಡಿ ನಾನು ಏನೆಂದು ಬಿಡುವೆನೋ ಎಂಬ ಆತಂಕ. ಆದ್ದರಿಂದ ಚಿತ್ರೀಕರಣ, ಎಡಿಟಿಂಗ್, ಡಬ್ಬಿಂಗ್, ಯಾವ ಮಟ್ಟದಲ್ಲೂ ಬೇಬಿ ಒಂದೇ ಒಂದು **frame** ಅನ್ನೂ ನನಗೆ ತೋರಿಸಲಿಲ್ಲ, ಅವಳಿಗೂ ಕ್ಷೋಭೆ. ನನಗೂ ಟೆನ್‌ಶನ್. ನಿನ್ನೆ ರಾತ್ರಿಯೆಲ್ಲ ನಿದ್ರೆ - ಎಚ್ಚರದ ಅಸುಖ. ಬೆಳಗ್ಗೆ ಈ ಚಿತ್ರವನ್ನು ಹೇಗೆ ನೋಡುವುದು ಎಂದು ಆತಂಕಗೊಂಡಿದ್ದೆ....

ನನ್ನ ಮಗಳು ಬೇಬಿ ಚಿಕ್ಕನ ಕಣ್ಣಿನ, ಕೋಮಲ ದೇಹದ, ಮಹಾ ಧೈರ್ಯದ ಹುಡುಗಿ. ಆಕೆಗೆ ಇದ್ದ ಸವಲತ್ತುಗಳು ಹಲವೇ. ಎಲ್ಲರಂತೆ ಕೊಳಚೆ ಪ್ರದೇಶವೊಂದನ್ನು ಶೂಟಿಂಗ್ ಅನುಕೂಲಕ್ಕೆ ತಕ್ಕಂತೆ ಕಟ್ಟಿ ಬಳಸಿಕೊಳ್ಳುವ ಶ್ರೀಮಂತಿಕೆ ಉಳ್ಳವಳಲ್ಲ, ಇದ್ದ ಕೊಳಚೆ ಪ್ರದೇಶದಲ್ಲೇ ಕ್ಯಾಮರಾ ಇಟ್ಟು ಚಿತ್ರೀಕರಿಸುವ ಕಷ್ಟ ಅನುಭವಿಸಿದವಳು...

ಈಗ ನಾನು ಈ ಚಿತ್ರ ಹೇಗಿದೆ ಎಂದು ಹೇಳಿ ಆಕೆಯ ಪ್ರತಿಸ್ಪರ್ಧಿಗಳನ್ನು ದುರ್ಬಲಗೊಳಿಸಲು ಇಷ್ಟಪಡುವುದಿಲ್ಲ..."

****

ಡಿಸೆಂಬರ್ 13 ರ ಬೆಳಗ್ಗೆಯೇ ಲಂಕೇಶರು ತಮ್ಮ ಇಷ್ಟಿಟು ಗೆಳೆಯರಾದ ಡಾ. ಶ್ರೀನಿವಾಸ ಗೌಡ, ಬಸವರಾಜ್ ಅರಸ್, ಮೈಸೂರು ಮಠ, ಪ್ರಸನ್ನ, ರಾಮಚಂದ್ರ ಶರ್ಮ ಮತ್ತು ಮೈಸೂರಿನ ಮಿತ್ರ ಶಿವತೀರ್ಥನ್ ಅವರೊಂದಿಗೆ ಬಾದಾಮಿ ಹೌಸಿಗೆ ಹಾಜರಾದರು.

ಬೇಬಿಗೆ ಹೆದರಿಕೆಯೋ ಹೆದರಿಕೆ. ಅಪ್ಪನಿಗೆ ತನ್ನ ಸಿನಿಮಾ ಇಷ್ಟವಾಗದಿದ್ದರೆ ತನಗೆ ಭವಿಷ್ಯವೇ ಇಲ್ಲ ಎಂಬ ಆತಂಕ ಆಕೆಯನ್ನು ಕಾಡುತ್ತಿತ್ತು. ಸಿನಿಮಾ ಆರಂಭವಾಗುವುದಕ್ಕೆ ಮುನ್ನ "ಮಧ್ಯೆ ಕಾಫಿಗೆ ಬ್ರೇಕ್ ಕೊಡಲಾ?" ಎಂದು ಕೇಳಿದಳು. ಆಗ ಲಂಕೇಶರು "ನನಗೆ ಗೊತ್ತು ನೀನು ಈ ಸಿನಿಮಾವನ್ನು **hopeless** ಆಗಿ ಮಾಡಿರುತ್ತೀಯಾ ಅಂತ. ಸಿನಿಮಾ ಚೆನ್ನಾಗಿಲ್ಲ ಅನ್ನಿಸಿದರೆ ನಾನು ಹೊರಟುಹೋಗುತ್ತೇನೆ. ಅದೇ ಬ್ರೇಕ್" ಎಂದರು.


ಅದನ್ನು ಕೇಳಿ ಬೇಬಿಗೆ ಇನ್ನೂ ಹೆಚ್ಚು ಹೆದರಿಕೆ ಆಯಿತು. ಲಂಕೇಶರು ಸಿನಿಮಾ ನೋಡುವಾಗ ಅವರ ಮುಖದ ಮೇಲೆ ಮೂಡುವ ಭಾವನೆಗಳನ್ನೂ ನೋಡಲಾಗದೆ ಆಕೆ ಸಿನಿಮಾವನ್ನು ಪ್ರೊಜೆಕ್ಟ್ ಮಾಡುವವನ ಜೊತೆ ಆತನ ಕೊಠಡಿಯಲ್ಲಿ ಕುಳಿತಳು.

ಸಿನಿಮಾದ ಇಂಟರ್‌ವೆಲ್ ಸಮಯದಲ್ಲಿ ಬೇಬಿ "ಇಲ್ಲಿಯತನಕ ಹೇಗನ್ನಿಸಿತು?" ಎಂದು ತನ್ನ ಅಪ್ಪನನ್ನು ಕೇಳಿದಳು. ಆಗ ಲಂಕೇಶರು "ಸಿನಿಮಾ ಪೂರ್ತಿ ನೋಡಿ ಹೇಳುತ್ತೇನೆ. ಅದಕ್ಕೂ ಮುಂಚೆ ಕೇಳಬೇಡ" ಎಂದರು. ಬೇಬಿಯ ಚಡಪಡಿಕೆ ಮುಂದುವರೆಯಿತು.

ಆದರೆ ಸಿನಿಮಾ ಮುಗಿದನಂತರ ಲಂಕೇಶರಿಗೆ ತುಂಬಾ ಸಂತೋಷವಾಯಿತು. ತಮ್ಮ ಮಗಳ ಬಗ್ಗೆ ಹೆಮ್ಮೆ ಆಯಿತು. "ಇಷ್ಟು ಒಳ್ಳೆ ಸಿನಿಮಾ ಕನ್ನಡದಲ್ಲಿ ಇತ್ತೀಚೆಗೆ ಬಂದಿಲ್ಲ ಅನ್ನಿಸುತ್ತೆ" ಅಂದರು. ಆಗ ಅಲ್ಲೇ ಇದ್ದ ಛಾಯಾಗ್ರಾಹಕ ರಾಮಚಂದ್ರ ಅವರು "ಇಪ್ಪತ್ತು ವರ್ಷಗಳ ಹಿಂದೆ 'ಪಲ್ಲವಿ' ಎಂಬ ಸಿನಿಮಾ ಬಂದಿತ್ತು" ಎಂದಾಗ ಲಂಕೇಶರು ನಕ್ಕರು. ಅಂದಹಾಗೆ, ಲಂಕೇಶರ ಮೊದಲ ನಿರ್ದೇಶನದ ಚಿತ್ರ 'ಪಲ್ಲವಿ'ಗೂ, ಲಂಕೇಶರ ಮಗಳು ಕವಿತಾಳ ಮೊದಲ ನಿರ್ದೇಶನದ 'ದೇವೀರಿ' ಚಿತ್ರಕ್ಕೂ ಛಾಯಾಗ್ರಾಹಕರಾಗಿದ್ದು ಇದೇ ರಾಮಚಂದ್ರ ಅವರು...

****

ಲಂಕೇಶರು 'ದೇವೀರಿ' ಬಗ್ಗೆ ಅದೆಷ್ಟು ಉತ್ಸಾಹಭರಿತರಾಗಿದ್ದರೆಂದರೆ ಅವರ ಆಫೀಸಿಗೆ ಯಾರೇ ಬಂದರೂ, ಪತ್ರಿಕೆಯ ಆಫೀಸಿನ ಮೇಲಿರುವ ಬೇಬಿಯ ಆಫೀಸಿನಿಂದ ತಮ್ಮ ಮಗಳನ್ನು ಕರೆಸಿ "ಇವರಿಗೆ ನಿನ್ನ ಸಿನಿಮಾ ತೋರಿಸು" ಎನ್ನುತ್ತಿದ್ದರು. ಇದನ್ನು ಕೇಳಿ ಕೇಳಿ ಸಾಕಾದ ಬೇಬಿ ಕೊನೆಗೊಂದು ದಿನ "ಇಷ್ಟೆಲ್ಲ ಯಾಕಪ್ಪಾ ಕಷ್ಟಪಡ್ತೀಯಾ? ರೋಡಿನಲ್ಲಿ ನಿಂತು ಹೋಗೋರು, ಬರೋರು, ಎಲ್ಲರನ್ನೂ ಕರೆದು ಬಿಡು" ಎಂದು ತಮಾಷೆ ಮಾಡಿದಳು. ಆದರೂ ಲಂಕೇಶರು ಸುಮ್ಮನಿರಬೇಕಲ್ಲ, ಜನರನ್ನು ತಮ್ಮ ಮಗಳ ಸಿನಿಮಾಗೆ ಕರೆಯುವ ಹುಚ್ಚನ್ನು ಎಷ್ಟು ಹಚ್ಚಿಕೊಂಡಿದ್ದರೆಂದರೆ ಒಂದು ದಿನ 'ದೇವೀರಿ'ಯ ನಿರ್ಮಾಪಕರಲ್ಲಿ ಒಬ್ಬಳಾದ ಭಾರತಿ ಗೌಡಳನ್ನೇ ಕರೆದು "ನೀನು ತಪ್ಪದೆ ಬೇಬಿಯ ಸಿನಿಮಾವನ್ನು ನೋಡಬೇಕು" ಎಂದು ಕಟ್ಟಪ್ಪಣೆ ಮಾಡಿದರು!



• ಇಂದಿರಾ ಲಂಕೇಶ್

****

'ದೇವೀರಿ' ಸಿನಿಮಾದ ಚಿತ್ರೀಕರಣ ನಡೆಯುತ್ತಿದ್ದಾಗಲೇ 1999ರ ಜುಲೈ 6ಕ್ಕೆ 'ಲಂಕೇಶ್ ಪತ್ರಿಕೆ' 19 ವರ್ಷಗಳನ್ನು ಮುಗಿಸಿ 20 ನೇ ವರ್ಷಕ್ಕೆ ಕಾಲಿಟ್ಟಿತು. ಆಗ ಸೆಂಟ್ರಲ್ ಕಾಲೇಜಿನ ಸೆನೆಟ್ ಹಾಲ್‌ನಲ್ಲಿ ಒಂದು ದೊಡ್ಡ ಕಾರ್ಯಕ್ರಮವನ್ನು ಮಾಡಲು ಲಂಕೇಶರು ನಿರ್ಧರಿಸಿದರು. ಆದರೆ ಅದು ಕೇವಲ ಒಂದು ರಾಜಕೀಯ ಅಥವಾ ಸಾಹಿತ್ಯಕ ಕಾರ್ಯಕ್ರಮವಾಗುವುದು ಲಂಕೇಶರಿಗೆ ಇಷ್ಟವಿರಲಿಲ್ಲ, ಹೇಗೆ ಅವರ ಪತ್ರಿಕೆಯಲ್ಲಿ ರಾಜಕೀಯ, ಸಾಹಿತ್ಯ ಸಿನಿಮಾ, ಕತೆ, ಕ್ರೀಡೆ ಎಲ್ಲದರ ಬಗ್ಗೆ ಬರೆದು ಪ್ರಕಟಿಸುತ್ತಿದ್ದರೋ ಹಾಗೆಯೇ ಆ ಕಾರ್ಯಕ್ರಮದಲ್ಲಿಯೂ ಪತ್ರಿಕೆಯ ಈ ಎಲ್ಲ ಆಶಯಗಳು ವ್ಯಕ್ತವಾಗಬೇಕೆಂಬುದು ಲಂಕೇಶರ ಆಶೆಯಾಗಿತ್ತು, ಆ ಕಾರಣಕ್ಕೇ ಇರಬೇಕು ಪತ್ರಿಕೆಯ 20ನೇ ಹುಟ್ಟುಹಬ್ಬದ ಕಾರ್ಯಕ್ರಮಕ್ಕೆ ಅವರು ಇಟ್ಟ ಹೆಸರು 'ಕರ್ನಾಟಕದ ಕನಸುಗಳು.' ಮಾತ್ರವಲ್ಲ, ಅವತ್ತಿನ ಇಡೀ ಕಾರ್ಯಕ್ರಮವನ್ನು ರಾಜಕೀಯಗೋಷ್ಠಿ, ಸಾಂಸ್ಕೃತಿಕಗೋಷ್ಠಿ, ಕವಿಗೋ[...] ಎಂದು ವಿಂಗಡಿಸಲಾಗಿತ್ತು,

ಅದ್ಯಾಕೋ ಪತ್ರಿಕೆಯ ಈ ಹುಟ್ಟುಹಬ್[...] ಕಾರ್ಯಕ್ರಮಕ್ಕೆ ಜನರು ಬರುತ್ತಾರೋ ಇಲ್ಲವೋ ಎ[...] ಆತಂಕ ಲಂಕೇಶರನ್ನು ಕಾಡಲಾರಂಭಿಸಿತ್ತು, ಆಗ ಅ[...] ಬೇಬಿ ಮತ್ತು ಅಜಿತನಿಗೆ ತಮ್ಮ ಸ್ನೇಹಿತರನ್ನೂ ಕಾ[...]ಕ್ರಮಕ್ಕೆ ಆಹ್ವಾನಿಸಲು ಹೇಳಿದರು. ಇನ್ನು ಪತ್ರಿಕೆ ಬ[...] ಕೂಡ ತಮ್ಮ ಎಲ್ಲ ಮಿತ್ರರನ್ನು ಕರೆದರು.

ಅಂದಿನ ಕಾರ್ಯಕ್ರಮಕ್ಕೆ ವಿವಿಧ ರಾಜಕೀ[...] ಪಕ್ಷಗಳಿಂದ ಸಿ.ಕೆ. ಜಾಫರ್ ಶರೀಫ್, ಜೆ.ಎಚ್.ಪಟೇ[...] ಎಂ.ಪಿ.ಪ್ರಕಾಶ್, ಎ.ಕೆ.ಸುಬ್ಬಯ್ಯ, ವಾಟಾಳ್ ನಾಗರಾ[...] ಎಚ್.ಡಿ.ದೇವೇಗೌಡ, ಬಿ.ಕೆ.ಹರಿಪ್ರಸಾದ್, [...] ಮಲ್ಲಿಕಾರ್ಜುನಯ್ಯ, ಮಲ್ಲಿಕಾರ್ಜುನ ಖ[...] ಸಿ.ಎಚ್.ವಿಜಯಶಂಕರ್, ಆಯನೂರು ಮಂಜುನಾ[...] ಮತ್ತು ಇತರರನ್ನು ಆಹ್ವಾನಿಸಲಾಗಿತ್ತು, ಅವರೆಲ್ಲ[...] ಬಂದು ಪತ್ರಿಕೆಯ ಬಗ್ಗೆ, ರಾಜಕೀಯದ ಬಗ್ಗೆ ಚ[...] ಮಾಡಿದರು.

ಕಾರ್ಯಕ್ರಮದ ಆರಂಭದಲ್ಲಿ ಹಾಡಬೇ[...] ಶಿವಮೊಗ್ಗ ಸುಬ್ಬಣ್ಣ ಅವರು ಗೈರುಹಾಜರಾದರೂ ಅ[...] ಸೊಸೆ ಅರ್ಚನಾ ಉಡುಪ ಸೊಗಸಾಗಿ ಹಾಡಿದ[...] ಸಾಹಿತ್ಯಗೋಷ್ಠಿಯಲ್ಲಿ ಕಿ.ರಂ.ನಾಗರಾಜ, ರಾಮಚ[...] ಶರ್ಮ, ಅಗ್ರಹಾರ ಕೃಷ್ಣಮೂರ್ತಿ, ಕೆ. ರಾಮದಾ[...] ಎಸ್. ಮಂಜುನಾಥ್, ಕೆ.ನ.ಶಿವತೀರ್ಥನ್ ಮತ್ತು ಇತರ[...] ಭಾಗವಹಿಸಿದ್ದರು. ಹಾಗೆಯೇ ಚಿತ್ರರಂಗದಿಂ[...] ಉಮಾಶ್ರೀ, ತಾರಾ, ನಾಗತಿಹಳ್ಳಿ ಚಂದ್ರಶೇಖರ್, [...] ಮನೋಹರ್ ಪ್ರೇಮಾ, ಎನ್.ಎಸ್.ಶಂಕರ್ ಬಂದಿದ್ದ[...]

ನ್ಯಾಯಮೂರ್ತಿಯಾಗಿ ನಿವೃತ್ತಿ ಹೊಂದಿದ್ದ ಮ[...] ಲಂಕೇಶರು ತುಂಬ ಗೌರವಿಸುತ್ತಿದ್ದ ಎನ್.ಡಿ.ವೆಂಕಟೇ[...] ಕೂಡ ಇದ್ದರು. ಹಾಗೆಯೇ ಹಿಂದೊಮ್ಮೆ ಲಂಕೇಶ[...] ಶಿಷ್ಯರಾಗಿದ್ದ ಅನಂತರ ಸಹೋದ್ಯೋಗಿಯಾಗಿದ್ದ ನಗ[...] ಬಾಬಯ್ಯ ಮತ್ತು ಲಂಕೇಶರ ಅಚ್ಚುಮೆಚ್ಚಿನ ವ್ಯಕ್ತಿಗಳ[...] ಒಬ್ಬರಾದ ಹಿರಿಯ ಪತ್ರಕರ್ತ ಗರುಡನಗಿರಿ ನಾಗರಾ[...] ಬಂದಿದ್ದರು.

ಕಾರ್ಯಕ್ರಮ ಎಷ್ಟು ಯಶಸ್ವಿಯಾಗಿ ನಡೆಯಿತೆಂದ[...] ಅವತ್ತು ಸೆನೆಟ್ ಹಾಲಿನಲ್ಲಿ ಸೇರಿದ್ದ ಬಹಳಷ್ಟು ಜನರಿ[...] ಕೂರಲು ಜಾಗವಿರದೆ ತುಂಬಾ ಮಂದಿ ನಿಂತುಕೊಂಡ[...] ಭಾಷಣಗಳನ್ನು, ಕವನಗಳನ್ನು ಆಲಿಸಿದರು...

****

ಲಂಕೇಶರು ತೊಡುತ್ತಿದ್ದ ಬಟ್ಟೆಯಲ್ಲಿ ಬದಲಾವ[...] ಗಳಾಗಿದ್ದವು. ಅವರು ಈಗ ಹಿಂದಿನಂತೆ ಖಾದಿ ಅಥವಾ[...] ಕಟನ್ ಶರ್ಟ್‌ಗಳನ್ನು ಧರಿಸುತ್ತಿರಲಿಲ್ಲ, ಬದಲಾಗಿ ಅವ[...] ಮಕ್ಕಳು ತಂದು ಕೊಡುತ್ತಿ[...] ಡೆನಿಮ್ ಮತ್ತು ಬ್ರಾಂಡೆಡ್[...] ಶರ್ಟ್‌ಗಳನ್ನು ಧರಿಸಲಾರಂಭಿ[...]ದ್ದರು. ಅವರಿಗೆ ಇಷ್ಟವಾಗುವ[...] ಬಟ್ಟೆಯನ್ನು ತಂದು ಕೊಡಲು[...] ನಮ್ಮ ಮೂವರು ಮಕ್ಕಳ ನಡುವ[...] ಪೈಪೋಟಿ ನಡೆಯುತ್ತಿತ್ತು. ಆದ[...] ಲಂಕೇಶರಿಗೆ ಯಾವ ಬ್ರಾಂಡ್[...] ಬಗ್ಗೆಯೂ ಗೊತ್ತಿರುತ್ತಿರಲಿಲ್ಲ, ಬದಲಾಗಿ ಅದು ಆರಾಮಾಗಿದೆಯಾ, ತಮ್ಮ ಪೆನ್[...] ಮತ್ತು ಕರ್ಚೀಫನ್ನು ಇಟ್ಟುಕೊಳ್ಳಲು ಜೇಬು ಇದೆಯೆ[...] ಎಂದು ಮಾತ್ರ ನೋಡುತ್ತಿದ್ದರು.

ಹಾಗೆಯೇ ಅವರು ತೊಡುತ್ತಿದ್ದ ಸ್ವೆಟರ್‌ಗಳ ಬಗ್ಗೆಯೂ ಹೇಳಬೇಕು. ಮಕ್ಕಳು ಅವರಿಗೆ ಬಣ್ಣಬಣ್ಣದ ಸ್ವೆಟರ್‌ಗಳನ್ನು ಕೊಡಿಸುತ್ತಿದ್ದರು. ಅದೂ ದುಬಾರಿ ಮಾಂಟೋ ಕಾರ್ಲೋ ಸ್ವೆಟರ್‌ಗಳು. ಮಕ್ಕಳು ತಂದು ಕೊಟ್ಟ ಸ್ವೆಟರ್‌ಗಳಿಗೆ ಮ್ಯಾಚ್ ಆಗುವಂತಹ ಮಂಕಿ ಕ್ಯಾಪ್‌ಗಳನ್ನು ಲಂಕೇಶರು ತಮ್ಮ ಸಹಾಯಕ ಗಿರಿ ಮೂಲಕ ಖರೀದಿಸುತ್ತಿದ್ದರು. ಪ್ರತಿದಿನ ಸ್ವೆಟರ್ ಮತ್ತು ಮಂಕಿ ಕ್ಯಾಪ್ ಮ್ಯಾಚ್ ಆಗಬೇಕು. ಇಲ್ಲದಿದ್ದರೆ ಅವರು ಮನೆಯಿಂದ ಹೊರಡುತ್ತಿರಲಿಲ್ಲ, ಅವರ ಬಳಿ ಕನಿಷ್ಠ ಮೂವತ್ತು ಸ್ವೆಟರ್‌ಗಳು ಮತ್ತು ವುಲನ್ ಕ್ಯಾಪ್‌ಗಳಿದ್ದವು...

(ಮುಂದುವರೆಯುವುದು)

ಸೂಕಿ, 'ಪ್ರಜಾಸತ್ತೆಯ ಸಖಿ'

ಬಂದೂಕಿನ ನಳಿಕೆಯ
ನೆರಳಲ್ಲಿ ಬದುಕಿಲ್ಲ,
ಆಂಗ್ಲೇಳಿ ಸರಳುಗಳ
ಹಿಂದೆ ಸವೆದವಳು

ಹರೆಯ, ಕನಸು, ಬದುಕ
ಬೆರೆಸಿ ಬರ್ಮಾಕ್ಕೆ,
ಉಣ ಬಡಿಸಿದವಳು.


ಬೆಳಕ ಹುಡುಕಿ ಬುದ್ಧ
ರಾತ್ರಿ ಹೊರಟರೇ,
ನೀನು ಹಗಲಲ್ಲೆ
ಚಡಪಡಿಸಿದವಳು.

ಬಟ್ಟೆ ತೊಟ್ಟು, ಬೆತ್ತಲಾಗಿರುವ
ಜಗಗಳೊಮ್ಮೆ ನೋಡು,
ಶತಮಾನಗಳ ಮುಟ್ಟುವ ಕನಸುಗಳ ನಡುವೆ

ರಕ್ತ ಮಾಂಸ ಕಳೆದ
ಧ್ವನಿ ಇರದ ದೇಹಗಳು.

ವರುಷಗಳು ಕಳೆದು
ದಕ್ಕಿದ ಪ್ರಿಯತಮ
ಬಾಚಿಟ್ಟುಕೋ ಎದೆಯಲಿ,
ಸವೆದ ಹರೆಯ, ಬದುಕು,
ಕನಸ ಅರಳಿಸಲಿ.

• ದಾದಾಪೀರ್, ತರೀಕೆರೆ



..ರುಬರ ಸಭಿಗೆ ಒಕ್ಕಲಿಗರೂ, ಲಿಂಗಾಯಿತ್ರ ದುಡ್ಡು ಕೊಟ್ರಂತೆ!

..ಚಿಕ್ಕಣ್ಣ ದಾವಣಗೆರೆ ಕುರುಬರ ಸಮಾವೇಶಕ್ಕೆ ..ಗಿಬಂದದ್ದು ಕಾಳಮಾವನಿಗೆ ಸಿಟ್ಟು ತರಿಸಿತ್ತು. ..ಂದ.

..ಅಲ್ಲಾ ಕಂಡ್ರ ಚಿಕ್ಕ, ಯರಡದಿನ ಹೋಟ್ಲು ಬಾಗ ..ಕಂಡು ಹೋಗಿದ್ಯಲ್ಲಾ, ನಿನಿಗೇನು ಬಂದಿತ್ಲ" ಎಂದ. ..ಯರಡ ದಿನ ಹೋಟ್ಲು ಬಾಗಲ ತಗದು ಸುರಕಳೊ ..ಮ ಆಟೆ ಆದೆ ತಗೊ. ಮನೆ ಮುಂದಕೆ ಬಸ್ಸು ..ನಿಂತಾಗ ಹೋಗದೆಯಿರಕಾದತೆ?" ಎಂದು ಚಿಕ್ಕ ..ಜಾಯಿಸಿ ಕೊಟ್ಟ.

..ಅಲ್ಲಾ ಯಾವ ಸಭಿಗೂ ಅಂಗೋಯ್ತಿರಲಿಲ್ಲ ಅಲವೆ." ..ಜ್ಞಾತಸ್ತಾಗಿ ಈ ಸಭಿಗೆ ಹೋಗದೆಯಿರಕ್ಕಾದತೆ ..?" ಎಂದ ಉಗ್ರಿ.

..ಅಯಿಂದ ಸಭೆ ಅಂತ ಮಾಡಿದ್ರಲ್ಲಾ ಆ ..ಲ್ಲೊಗಿದ್ದ ಇವುನು? ಎಲ್ಲ ನಾವೆ ಅಲವೆ ..ಗಿದ್ದು?" ಎಂದಳು ಜುಮ್ಮಿ.

..ಅದು ಯಲ್ಲಾ ಕ್ಯಳಜಾತಿ ಸೇರಿಕಂಡು ಮಾಡಿದ್ದ ..ಕಣೆ. ಅದ್ಕೆ ಹೋಗಲಿಲ್ಲ, ಇದು ಪ್ಯೂರ್ ..ಬರ ಸಭೆ ನೋಡು ಅದ್ಕೆ ಹೋಗಿದ್ದ ಅಲವಾ?"

..ಅಂಗಲ್ಲ ಕಂಡ್ರ ಉಗ್ರಿ. ಜನಾಂಗದ ಲೀಡ್ರು ..ಕ್ಕೆ ಬಂದು ಜಾಸ್ತಿ ಜನ ತಗಂಡೋಗೊ ..ಬ್ದರಿ ನನ್ನ ಮ್ಯಾಲೆ ಬಿದ್ದದೆ, ಹೊಂದು ಬರ್ರಿ ..ಅದ್ಕೆ ಹೋಗಿ ಬಂದನಪ್ಪ."

..ಆ ನಿನ್ನ ಜನಾಂಗದ ಲೀಡ್ರಿಗೆ ದುಡ್ಡು ..ದ್ದೊನು ಒಕ್ಕಲಿಗರ ಲೀಡರು ಅನ್ನದು ..ನೊ?"

..ನನಿಗೇನು ಗೊತ್ತಪ್ಪ. ಬಸ್ಸು ಬತ್ತು ಹತ್ತು ..ಹೋಗಿ ಬಂದೆ ಕಣೊ."

..ಒಕ್ಕಲಿಗರ ಲೀಡ್ರು ಯಾರ್‍ಗೆ ದುಡ್ಡು ..ನೊ?"

..ಯಮ್ಮೆಲ್ಲೆ ಬಸ್ಸು, ಟೆಂಪೂಗೆ ದುಡ್ಡು ಕೊಟ್ಟನಂತೆ ..ವ."

..ಅಂಗರೆ ಕುರುಬರ ಸಭಿಗೆ ಒಕ್ಕಲಿಗರು ದುಡ್ಡು ..ಅನ್ನು?"

..ಒಕ್ಕಲಿಗರೆ ಏನೂ ಲಿಂಗಾಯಿತ್ರ ಕೊಟ್ಟಿರತರೆ."

..ಅವುರಿಗೇನು ಬಂದಿತ್ತು ಕೊಡೋ ಅಂತದ್ದೂ?"

..ಕೊಡೊ ಅಂತದ್ದು ಇರೊವತ್ತಿಗೆ ಕೊಟ್ಟಿರದು. ..ಮ್ಮ ಎಮ್ಮೆಲ್ಲೆಗೆ ಹತ್ತು ಸವುರ ಕುರುಬರೋಟು ..ಕೊಟ್ಟ. ಅಂಗೆ ಎಲ್ಲೆಲ್ಲಿ ಕುರುಬ್ರು ಕೈಹಿಡಿದಿದೆ ..ವುರೊ, ಅಲ್ಯಲ್ಲಾ ಬ್ಯಾರೆ ಜಾತಿ ಲೀಡರೂ ಕಾಸು ..ಟ್ಟ ಇವುರ ಕುರುಬರ ಸಭಿಗೆ ಕಳಿಸಿರತರೆ. ಅದ್ಕೆ ದಾವಣ.. ಹಿಂದೆಂದೂ ಬರದಷ್ಟು ಕುರುಬ್ರು ಬಂದಿದ್ರಂತೆ."

..ಊ ಕಂಡ್ರ ಉಗ್ರಿ. ಎಲ್ಲಿ ನೋಡು ಜನ. ಆಟೊಂತರ ..ಬ್ರವುರೆ ಅಂತಾವಾ ನನಿಗೆ ಗೊತ್ತೆಯಿರಲಿಲ್ಲ."

..ಒಂದು ಜಾಗಕ್ಕೆ ಸೇರಿಕಂಡ್ರೆ ಯಲ್ಲಾ ಜಾತಿನೂ ..ಕಾಣ್ತದೆ ಕಣೊ. ಹಿಂಗೆ ಜಾತಿ ಜನ್ಯಲ್ಲ ಸೇರಿಕಂಡು ..ಲ್ಲಿ ಒಗ್ಗಟ್ಟಾಗಿರಬೇಕು ಅನ್ನದಾದ್ರೆ ಜಾತಿ ..ಗೋದವಪ್ಪ?" ಎಂದ ಉಗ್ರಿ.

"ಜಾತಿ ಯಾಕೋಗಬೇಕ್ಲ?" ಎಂದ ಕಾಳಮಾವ.

"ಅದಪ್ಪ ಮಾತು. ರಿಯಲಿ ವಂಡ್ರುಪುಲ್ ಮಾತು ದ್ಯಡಪ್ಪ" ಎಂದು ವಾಟಿಸ್ಸೆ ಬಂದ.

"ನೀನೋಗಿದ್ದೇನ್ಲ ದಾವಣಗೆರೆಗೆ?" ಎಂದಳು ಜುಮ್ಮಿ.

"ಪ್ರೀ ವೆಯಿಕಲ್ ಸಿಕ್ಕಿದ್ರೆ ನಾನು ಯಾವ ಊರುನೂ ಬುಡದಿಲ್ಲ ಕಣಕ್ಕ. ಸಿದರಾಮಯ್ಯನಿಗೂ ಕಾಳದೊಡಪ್ಪನಂಗೆ ಅನ್ನಿಸಿತ್ತೇನೊ. ಅದ್ಕೆ ಅವುನು ಜಾತಿ ಜಾತಿ ನಡುವೆ ಸಮಾನತೆ ಇರಬೇಕು ಅಂದ. ಅಂಗಂದ್ರೇನರ್ಥ? ಈ ಹಾಳು ಜಾತಿ ಹೋಗದಿಲ್ಲ ಅಂತೆ ತಾನೆ? ಜಾತಿ ಹೋಗಲೆಬೇಕು ಅನ್ನದಾದ್ರೆ ಇರದು ಒಂದೇ ಒಂದು ಉಪಾಯ ಮತ್ತು ಪೈನಲ್ ರೂಟ್."



"ಯಾವುದಪ್ಪ ಅದು ರೂಟು?"

"ಯಾರೂ ಸ್ವಜಾತಿಲಿ ಮದುವೆ ಆಗಬಾರ್ದು. ಆಗ ಜಾತಿಗಳೆಲ್ಲಾ ಕೆಟ್ಟೊಯ್ತವೆ."

"ತಿರಗ ಅದ್ನೆ ಹೇಳ್ತನಲ್ಲ ಇವುನು" ಎಂದ ಕಾಳಮಾವ.

"ನೋಡು ದೊಡಪ್ಪ ನಿನಿಗೆ ನಿನ್ನ ಜಾತಿಯಿಂದ ಯಾವ ಅವುಮಾನಾನೂ ಆಗಿಲ್ಲ. ಅದರಿಂದ ಯಲ್ಲಾ ಸವುಲತ್ತೂ ಸಿಕ್ಯದೆ. ಅದ್ಕೆ ನಿನಿಗೆ ಜಾತಿ ಇರಬೇಕು. ಆದ್ರೆ ಕೆಲವುರಿಗೆ ಜಾತಿಯಿಂದ ಅವುಮಾನಾಗ್ಯದೆ. ಅಸ್ಪೃಶ್ಯತೆ ಅನುಭವಿಸ್ಯವುರೆ. ಹೊಡೆತ ತಿಂದವುರೆ. ಅಕಸ್ಮಾತ್ ಮೇಲುಜಾತಿ ಹುಡುಗಿ ಕರಕಂಡು ಊರುಬುಟ್ಟು ಹೋಗ್ಯವುರೆ. ಅಂಥೋರಿಗೆ ಜಾತಿ ಬ್ಯಾಡ. ಜಾತಿಯಿಂದ ಯಾವ ತೊಂದ್ರೆನೂ ಇಲ್ಲಾ, ನಿಮ್ಮ ನಿಮ್ಮ ಜಾತಿ ಆವರಣದಲ್ಲಿ ನೀವು ಅಭಿವೃದ್ಧಿ ಆಗಿ ಅನ್ನದು ಬಿಜೆಪಿಗಳ ಮಾತು. ಯಾಕೆ ಅಂದ್ರೆ, ಜಾತಿ ಹೋದ್ರೆ ಹಿಂದೂ ಧರ್ಮನೆ ಹೋಗಿಬುಡ್ತದೆ ಅಂತ ಅವುರ ಭಯ."

"ಅದಿರ್ಲಿ, ಸಿದರಾಮಯ್ಯ ಇನ್ನೇನೇಳಿದ್ನೊ ಚಿಕ್ಕಣ್ಣ?" ಎಂದ ಉಗ್ರಿ.

"ಅದೆ ಯಲ್ಲಾ ಜಾತಿ ಜೊತೆಲೂ ಚನ್ನಾಗಿರಿ. ನಿಮ್ಮ ಜೊತೆಗೆ ಅವುರ್‍ನ ಸೇರಿಸಿಗಂಡ್ರೆ ನನಿಗೆ ಇದಾಯ್ತದೆ ಅಂದ."

ಬಯಲುಸೀಮೆ ಕಟ್ಟೆಪುರಾಣ

• ಬಿ.ಚಂದ್ರೇಗೌಡ

"ಯಲ್ಲಾ ಜಾತಿದೂ ಇರ್ಲಿ. ನಿಮ್ಮೊರ ಚಿಕ್ಕೇನಳ್ಳಿ ಲವುರಪ್ಪ ಅವುರೇನೊ ಹಂದಿ ತಿಂತರೆ, ಹ್ಯಂಡ ಕುಡಿತರೆ ಅಂತ ಅವುರ ಕಡಿಕೆ ತಿರಿಗ್ಯೂ ನೋಡದಿಲ್ಲ. ಇನ್ನ ಬ್ಯಾರೆ ಜಾತಿ ಜೊತೆ ಹ್ಯಂಗೆ ಹೊಂದಿಕತ್ತಿರೀ?"

"ಮಿಸ್ಟರ್ ಉಗ್ರೀ, ಈ ನಮ್ಮ ಚಿಕ್ಕಣ್ಣನ ಶಪರ್ಡ್ ಕಮ್ಯುನಿಟಿ ಎಷ್ಟು ಸಡವಾಗ್ಯದೆ ಅಂದ್ರೆ, ಅಂತ ಕ್ರಾಂತಿಕಾರಿ ಬಸವಣ್ಣ ಯಲ್ಲಾರ್‍ನ ಮತಾಂತರ ಮಾಡಿದ ನಂತೆ. ಆದ್ರೆ ಈ ಕುರುಬರು ಮಾತ್ರ ಅವುನಿಗೇ ಸವಾಲಾಗಿ ನಿಂತ್ರೇ ವರತು ಲಿಂಗಾಯತರಾಗಕ್ಕೊಗಲಿಲ್ಲ ಗೊತ್ತೆ?"

"ಆಗೋರೇನೊ. ಬಸವಣ್ಣ ಬಾಡ ತಿನ್ನಬ್ಯಾಡಿ ಅಂದನಲ್ಲಾ, ಅದ್ಕೆ ಹೋಗಲಿಲ್ಲ ಕಣೊ. ಕುರಿ ಕಾಯೋರು ಕುರಿ ತಿನ್ನದೆ ಸೊಪ್ಪು ತಿನ್ನಕ್ಕಾದತೇ?"

"ಅದೂ ನಿಜ. ನಿಮ್ಮ ಸ್ವಾಮಿಗಳು ಏನೇಳಿದ್ರೊ ಚಿಕ್ಕಣ್ಣಾ?"

"ಕುರುಬರ ಜಾತಿಲಿ ಯ್ಯಂತ್ಯಂಥೊರೊ ಇದ್ದರಂತೆ. ಆಮ್ಯಾಲೆ ದನಿನ ಸಗಣಿಲಿ ಹುಳ ಇದ್ದವಂತೆ. ಕುರಿ ಹಿಕ್ಕೆಲಿ ಏನೂ ಇರದಿಲವಂತೆ. ಅದ್ಕೆ ಅದು ರುದ್ರಾಕ್ಷಿಗೆ ಸಮನಂತೆ. ಕುರಿ ಚರಮದಿಂದ ಡೊಳ್ಳು ಮಾಡ್ತರಂತೆ. ಆದೆ ದನಿನ ಚರಮದಿಂದ ಯಕ್ಕಡ ಮಾಡ್ತದಂತೆ. ಹಿಂಗೆ ಏನೇನೊ ಅಂದ್ರಪ್ಪ."

"ಅವುರಿಗೇಳು, ಇಂತ ತಲರಟೆನ್ಯಲ್ಲ ಬುಟ್ಟು, ಮದ್ಲು ವೇಷ ಬದಲಿಸಿಕೊ ಅಂತ ಹೇಳು. ಕುರುಬರ ಸ್ವಾಮಿಯಾದೋನು ಮದ್ಲು ಬ್ರಾಹ್ಮಿನ್ ಸ್ವಾಮಿಗಳು ಹಾಕೊ ಡ್ರಸ್ ಹಾಕಬಾರ್ದು. ಬರಿ ಮೈಲಿದ್ದಕೊಂಡು ಒಂದು ಕರಿಕಂಬಳಿ ಹಾಯ್ಕಬೇಕು. ಅಮ್ಯಾಲೆ ರಂಬಾಪುರಿ ರಾಜಕಾರಣಿ ತರ ಕಿರೀಟ ಹಾಕದು ಒಳ್ಳೆದಲ್ಲ, ಹಾಯ್ಕಂಡ್ರೆ ಪೌರಾಣಿಕ ನಾಟಕದ ಸೈಡ್ ರೋಲ್ ತರ ಕಾಣ್ತನೆ. ಅದರ ಬದ್ಲಿಗೆ ರುಮಾಲು ಕಟ್ಟಿಗಳಕ್ಕೇಳು. ಹೇಳ್ತಿಯೇನೊ?"

"ಇಲ್ಲೆಲ್ಲಾರ ಬಂದಾಗ ನೀನೆ ಹೇಳೊ."

"ನಾನು ವರಗಿನವುನಾಯ್ತಿನಿ. ಮಠದ ಭಕ್ತನಾಗಿ ನೀನೇಳಬೇಕು. ಕುರುಬರ ಸ್ವಾಮಿ ಕನಿಷ್ಠ ಕನಕದಾಸನ ಡ್ರಸ್ಸಲಿ ರಬೇಕು. ಅದು ಬಿಟ್ಟು ರಾಮಚಂದ್ರಾಪುರದ ಸುಂದರಾಂಗನ ಡ್ರಸ್ಸಲ್ಲಿರಬಾರ್ದು ಅಂತ ಹೇಳಬೇಕು."

"ಯಲ್ಲಾ ಜಾತಿಸ್ವಾಮಿಗಳು ಒಂದೇ ತರ ಅಲವೇನೊ ಇರದು?"

"ಅದು ನಿಜವೆ ಬುಡೊ ಉಗ್ರಿ. ಜಾತಿ ಯಾವುದಾದ್ರೇನು ರಾಜಕಾರಣಿಗಳ್ಯಲ್ಲ ಒಂದೇ ತರ ಅವುರೆ, ಒಂದೇ ತರ ಮಾತಾಡ್ತರೆ, ಒಂದೇ ತರ ಡ್ರೆಸ್ ಮಾಡ್ತರೆ, ಅವರ ಅಭಿರುಚಿ ಕೂಡ ಒಂದೇ ತರ. ಸಮಾನತೆ ಅಂದ್ರೆ ಇದಪ್ಪ."

"ಯಲ್ಲ ಒಂದೇ ತರ ಆದ್ರೆ ಯಂಗೇ ಅಂತ?"

"ಅದೇ ಈಗ ಬಂದಿರೊ ಸಮಸ್ಯೆ. ಆಗೇನೊ ಕೆಟ್ಟು ಕ್ಯರ ಹಿಡದ ಕಾಂಗ್ರೆಸ್ಸಿನೋರೆದ್ರಿಗೆ ಹೆಗಡೆ, ಪಟೇಲ್ರು, ದ್ಯಾವೇಗೌಡ್ರು ಬ್ಯಾರೆ ತರ ಕಾಣ್ತಿದ್ರು. ಜನ ಅವುಕಾಶ ಕೊಟ್ರು. ಈಗ ಯಲ್ಲಾ ಪಾರ್ಟಿಯೋರು ಒಂದೇ ತರ ಕಾಣ್ತರೆ. ಯಾರ್‍ನ ನಂಬನಾ, ಯಾರ್‍ನ ಬುಡಾನ ತಲಿ ಕೆಟ್ಟೊಯ್ತಾ ಅದೆ ಕಣೊ ಉಗ್ರಿ."

"ಸಿದರಾಮಯ್ಯ ಪರವಾಗಿಲ್ಲ ಅಲವೆ" ಎಂದ ಕಾಳಮಾವ.

"ಅವುನೊಂತರ ನಿಮ್ಮ ದ್ಯಾವೇಗೌಡ್ರ ಬಾಮ್ಯೆದಿದ್ದಂಗೆ ದೊಡಪ್ಪ. ರೇವಣ್ಣ, ಕುಮಾರಣ್ಣ ಅವುನ ಮಾವನ ಮಕ್ಕಳ ತರ ಅವುರೆ. ಯಾಕೆ ಅಂದ್ರೇ ಸಿದ್ಧರಾಮಯ್ಯ ಬೆಳದದ್ದೇ ದೇವೇಗೌಡ್ರ ಗರಡಿಲಿ. ಅದ್ಕೆ ಏನಾರ ಅಗ್ಲಿ ಮುಖ್ಯಮಂತ್ರಿ ಆಗಲೇಬೇಕು ಅಂತ ಹಟಕ್ಕೆ ಬಿದ್ದವುನೆ. ಅವುನ ಕನಸು ನನಸಾಗಬೇಕಾದ್ರೆ, ರೇವಣ್ಣ ಉಪಮುಖ್ಯಮಂತ್ರಿಯಾಗಬೇಕು, ಜೊತೆಗೆ ಪಿಡಬ್ಲೂ ಕಾತೆ, ಇಂಧನ ಕಾತೆ, ಕೆಎಂಎಫ್ ಛೇರ್‌ಮನ್‌ಗಿರಿ ಇವ್ಯಲ್ಲ ಸಿಗಬೇಕು. ಅಂಗಾದ್ರೆ ಸಿದ್ಧರಾಮಯ್ಯ ಹನ್ನೊಂದು ಅಥವಾ ಹದಿನೆಂಟು ತಿಂಗಳು ಚೀಫ್ ಮಿನಿಷ್ಟ್ರ ಮಾಡೊ ಶಕ್ತಿ ದ್ಯಾವೇಗೌಡ್ರಿಗದೆ."

"ಅದ್ಯಾಕೆ ಹನ್ನೊಂದು ತಿಂಗಳು, ಹದಿನೆಂಟು ತಿಂಗಳು ಅಂತಿಯೋ."

"ಅದಕ್ಕೆ ಐತಿಹಾಸಿಕ ಕಾರಣ ಅದೆ ಕಣೊ ಉಗ್ರಿ. ದ್ಯಾವೇಗೌಡ್ರು ಹದಿನೆಂಟು ತಿಂಗಳು ಚೀಫ್ ಮಿನಿಟ್ರಾಗಿದ್ರು. ಹನ್ನೊಂದು ತಿಂಗಳು ಪ್ರೈಮಿನಿಸ್ಟ್ರಾಗಿದ್ರು. ಅತೃಪ್ತ ಆತ್ಮ ಯಾರಿಗೂ ಪೂರ್ಣಾವಧಿ ಕೊಡದಿಲ್ಲ. ಇಂತ ಅತೃಪ್ತ ಆತ್ಮಗಳ ಸಾಲಿಗೆ ಮಾನ್ಯ ಎಡೂರಪ್ಪನೂ ಸೇರಿಬುಟ್ರು. ಅದ್ಕೆ ಇಡೀ ಕರ್ನಾಟಕದಲ್ಲಿ ಕೂಗಾಡಿಕಂಡು ತಿರುಗ್ತಾ ಅವುನೆ. ಇನ್ನೊಂದು ಸ್ವಲ್ಪ ದಿನ ಅಂಗೇ ಕೂಗಿದ್ರೆ ಸದಾನಂದ ಗೌಡ, ನನ್ನ ಕೆಲಸ ಕಾರ್ಯ ಮುಗಿಯಿತು, ನಾನಿನ್ನ ಬರ್ತಿನಿ ಅಂತ ಹೋಯ್ತನೆ. ಆಗ ಎಡೂರಪ್ಪನ ಗಂಟ್ಲು ಇನ್ನು ಚೆಂದಿಯಾಯ್ತದೆ, ಆದರೆ ಕಾಲ ಮುಗದಿರತದೆ. ಸರಿ ಬರ್ಲಾ." ❖

ಉಸಿರು ಕಟ್ಟಿಸುವ ವಾತಾವರಣ

ಉಸಿರು ಕಟ್ಟಿಸುವ ವಾತಾವರಣ..... ನೀವು ಬಲ್ಲಿರಾ? ನಿಮಗೆ ಊಟ, ಬಟ್ಟೆ ಮಾತ್ರ ಮುಖ್ಯವಾಗಿದ್ದರೆ, ..ದೂ ಉಸಿರುಕಟ್ಟಿದ ಅನುಭವ ಆಗದಿದ್ದರೆ ನಿಮ್ಮಲ್ಲಿ ಮನುಷ್ಯನಿಗಿರುವ ಗುಣ ಕಮ್ಮಿ ಇದೆ. ಜೀವಿಸುವ ..ದು ಪ್ರಾಣಿಗಿರುವ ಸೂಕ್ಷ್ಮ ಕೂಡ ನಮಗಿಲ್ಲ. ಮೊನ್ನೆ ಏನಾಯಿತು ನೋಡಿ. ನಾನು ರಾತ್ರಿ ಮನೆಗೆ ಹೋಗುವಷ್ಟರಲ್ಲಿ ..ಜೋರಾಗಿ ಸುರಿಯುತ್ತಿತ್ತು. ನಮ್ಮ ಚೆನ್ನಿ ಎಂಬ ಡೋಬರ್‌ಮನ್ ಮತ್ತು ರಾಮ ..ಮುಧೋಳ್ ನಾಯಿಗಳು ದಿಕ್ಕು ತೋಚದೆ ಕಾಂಪೌಂಡಿನ ಮೂಲೆಯಲ್ಲಿ, ಮನೆಯ ..ಟ್ಟುಗಳಲ್ಲಿ ನಿಲ್ಲಲು ಯತ್ನಿಸುತ್ತಿದ್ದವು. ನಾನು ಹೋದೊಡನೆ ನನ್ನ ಬಳಿ ಬಂದು ನನ್ನೊಂದಿಗೆ ..ಗೆ ಪ್ರವೇಶಿಸಿದವು. ಮನೆಯೊಳಗೆ ಅವುಗಳನ್ನು ಎಲ್ಲಿ ಬಿಡುವುದೆಂದು ಯೋಚಿಸಿ ಇಬ್ಬರನ್ನೂ ..ಲೈಬ್ರರಿಯಲ್ಲಿ ಕೂಡಿಹಾಕಿದೆ. ರಾತ್ರಿ ಗಾಳಿ, ಮಿಂಚು, ಗುಡುಗು, ಮಳೆಯ ಕಿರಿಕಿರಿ ..ದೆ ಬೆಚ್ಚಗೆ ಮಲಗಿದ್ದವು. ನಾನು ಅವುಗಳನ್ನು ಎಂದೂ ಒಂದು ಇಡೀ ರಾತ್ರಿ ಕೂಡಿರಲಿಲ್ಲ. ..ಗ್ಗೆ ನಾಲ್ಕೂವರೆಗೆ ಬಾಗಿಲು ತೆಗೆದೊಡನೆ ಹೊರಗೆ ಓಡಿದವು. ಮರುದಿನ ಹಾಗೇ ಮಳೆ. ..ಮನೆಗೆ ಬಂದರೆ ನನ್ನ ಹತ್ತಿರ ಬರಲಿಲ್ಲ. ಮಳೆ ಜೋರಾದರೂ ತಮ್ಮ ಪುಟ್ಟ ..ಡುಗಳಲ್ಲಿ, ಕಾರಿನ ಕೆಳಗೆ ಅವಿತುಕೊಂಡು ಎಷ್ಟು ಕರೆದರೂ ಬರಲಿಲ್ಲ. ಬೆಳಗ್ಗೆ ನನ್ನನ್ನು ..ಡಿದೊಡನೆ ರಾತ್ರಿಯ ಅವಿಧೇಯತೆಗಾಗಿ ಹೊಡೆಯುತ್ತೇನೆ ಎಂದು ನನ್ನನ್ನ ನೆಕ್ಕಿ ಅಪ್ಪಿ ..ಯ್‌ಗುಡುತ್ತಾ ರಮಿಸತೊಡಗಿದವು. ಅದು ಅವು ಕ್ಷಮೆ ಕೇಳುವ ರೀತಿ.




..ಮೊದಲ ದಿನ ಅವನ್ನು ಲೈಬ್ರರಿಯಲ್ಲಿ ಕೂಡಿದಾಗ ಸ್ವಾತಂತ್ರ್ಯ ಕಳೆದುಕೊಂಡ ಚೆನ್ನಿ ..ನಿಗೆ ಉಸಿರುಕಟ್ಟುವಂತೆ ಆಗಿರುತ್ತದೆ. ಅಸಹಜ ವಾತಾವರಣ. ಎಲ್ಲಿಗೂ ಹೋಗಲಾರದಂಥ ದಿಗ್ಬಂಧನ. ..ಗಲುವಂತಿಲ್ಲ, ಸುಮ್ಮನಿರುವಂತಿಲ್ಲ.

..ಸರ್ವಾಧಿಕಾರಿ ಹಿಟ್ಲರನ ಖಾಸಗಿ ಗುಂಪಿನಲ್ಲಿ ಕೂಡ ಈ ಉಸಿರುಕಟ್ಟುವ ವಾತಾವರಣವಿತ್ತು. ಸ್ಟಾಲಿನ್‌ನ ..ತ್ರಿಮಂಡಲದಲ್ಲಿ, ಇಡೀ ರಷ್ಯಾದಲ್ಲಿ, ಈ ಉಸಿರುಕಟ್ಟುವ ವಾತಾವರಣ ಇತ್ತು. ಅಲ್ಲಿ ಅನ್ನಿಸಿದ್ದನ್ನು ಹೇಳುವಂತಿಲ್ಲ. ..ಧಿಪತಿಗೆ ಏನು ಇಷ್ಟ ಎಂದು ಕಂಡುಕೊಂಡು ಹೇಳಬೇಕು. ಆ ಭಯದ ವಾತಾವರಣ ಉಸಿರುಕಟ್ಟಿಸುತ್ತದೆ.

..ನಾನು ಇದನ್ನು ಮಠಗಳಲ್ಲಿ, ಜಾತಿವಂತರ ಗುಸುಗುಸು ಸಭೆಗಳಲ್ಲಿ, ಭ್ರಷ್ಟರ ನಡುವೆ ನೋಡಿದ್ದೇನೆ. ಎಲ್ಲರೂ ..ಸ್ತಿಗಿರುವ ಭಾವನೆಯಲ್ಲಿಯೇ ಅಸಹಾಯಕತೆ ಇರುತ್ತದೆ. ಎಲ್ಲರೂ ಶಕ್ತಿಯುತ ಸಂಘಟನೆ ರಚಿಸಿಕೊಂಡಿದ್ದೇವೆ ..ಮ ತಿಳಿದಿದ್ದಾಗಲೇ ಎಲ್ಲರಿಗೂ ಅದು ಭ್ರಮೆ ಎಂದು ಗೊತ್ತಿರುತ್ತದೆ.

ನಾನು ಮತ್ತೆಮತ್ತೆ ನೆನೆಯುವ ಈ ಉಸಿರುಕಟ್ಟಿಸುವ ಸ್ಥಿತಿ ಗಂಡನ ಮನೆಗೆ ಒಬ್ಬಳು ಹುಡುಗಿ ಹೋದ ಮೊದಲ ದಿನ ಇರುತ್ತದೆ. ಅವಿಭಕ್ತ ಕುಟುಂಬದ ಹುಡುಗ ಮದುವೆಯಾಗಿದ್ದಾನೆ. ಆತನ ಕೈ ಹಿಡಿದ ಹುಡುಗಿ ಚಿಕ್ಕವಳು. ಗಂಡನ ಮನೆಯ ಅತ್ತೆ, ಮಾವ, ಹಲವರು ಮೈದುನರು, ನಾದಿನಿಯರು, ಅವರ ಮಕ್ಕಳು, ಆಳುಗಳು. ಎಲ್ಲರ ಹೆಸರು ನೆನಪಿರುವುದೂ ಕಷ್ಟ. ಯಾರನ್ನು ಹೇಗೆ ಮಾತಾಡಿಸಬೇಕೆಂಬ ಅನುಭವ ಇಲ್ಲದ ಹುಡುಗಿ. ಗಂಡ ಮಲಗಿ ಎದ್ದುಹೋಗುತ್ತಾನೆ. ಅತ್ತೆಯ ಜಂಬ, ನಾದಿನಿಯರ ಬಿಂಕ, ಮೈದುನರ ಸಂಕೋಚ. ಸುತ್ತ ಓಡಾಡುವ ಮಕ್ಕಳು ಒಂದೇ ತರಹ ಕಾಣುತ್ತಾರೆ. ಅದು ನಿಜಕ್ಕೂ ಭಯಂಕರ ಸ್ಥಿತಿ. ಉಸಿರು ಕಟ್ಟುವ ವಾತಾವರಣ. ಹುಡುಗಿ ಗಟ್ಟಿ ಮನಸ್ಸು ಮಾಡಿ ಬದುಕುತ್ತಾಳೆ. ನಾದಿಯರಲ್ಲೊಬ್ಬಳು ಸ್ನೇಹಮಯಿ ಯಾಗಿರುತ್ತಾಳೆ. ಹೊಸದಾಗಿ ಮದುವೆಯಾದವಳ ಮನಸ್ಸು ಆಕೆಗೆ ಗೊತ್ತು. ಅವಳ ಹತ್ತಿರ ಕೂತು ಮಾತಾಡಿಸುತ್ತಾಳೆ. ಕೈ ಹಿಡಿಯುತ್ತಾಳೆ. ನಕ್ಕಾಗ ಅಪ್ಪಿಕೊಳ್ಳುತ್ತಾಳೆ.



ಕ್ರಮೇಣ ಜಗತ್ತು ಆಕೆಯದಾಗುತ್ತದೆ. ಮಕ್ಕಳಲ್ಲಿ ಒಂದೆರಡು ಅವಳನ್ನು ಹಚ್ಚಿಕೊಳ್ಳುತ್ತವೆ.

ಪ್ರೀತಿಯ ಗಾಳಿ ಬೀಸತೊಡಗುತ್ತದೆ.

ಹುಡುಗಿ ವಿಶ್ವಾಸಗಳಿಸುತ್ತಾಳೆ. ಎಲ್ಲರಿಗೆ ಸೂಚನೆ ಕೊಡುವಂತಾಗುತ್ತಾಳೆ. ತಾನೇ ಕಷ್ಟಪಟ್ಟು ದುಡಿಯುತ್ತಾಳೆ. ತಾನು ತವರಲ್ಲಿ ಕಲಿತ ಹಾಡು ಹಾಡುತ್ತಾಳೆ.

ಸ್ವಾತಂತ್ರ್ಯದ ಗಾಳಿ ಬೀಸತೊಡಗುತ್ತದೆ.

ಉಸಿರಾಡತೊಡಗುತ್ತಾಳೆ.


ಅತ್ತೆಯ ಗುಣ, ಮಾವನ ಇಷ್ಟ ತಿಳಿಯುತ್ತದೆ. ಗಂಡನ ಅಭಿರುಚಿ ಅರ್ಥವಾಗುತ್ತದೆ. ಅವರನ್ನು ತಿದ್ದಬಲ್ಲ ಜಾಣೆಯಾಗುತ್ತಾಳೆ.

ಗಾಳಿ, ಬಿಸಿಲು ಬದುಕಿಗೆ ಬರುತ್ತವೆ.

–ಮೇ 14, 1997

ಬಯಸದೆ ಬಂದ ಭಾಗ್ಯ

ಬೆಳಗ್ಗೆ ಏಳುತ್ತಿದ್ದಂತೆಯೇ ಸಮಸ್ಯೆ ಎದುರಾಯಿತು. ಮನೆಯಲ್ಲಿ ಯಾರೂ ಇರಲಿಲ್ಲ. ನನಗೋ ಎದ್ದ ತಕ್ಷಣ ಕಾಫಿ ಕುಡಿಯುವ ಚಟ. ನಾನೇ ಮಾಡಿಕೊಳ್ಳಬಹುದಿತ್ತು, ಬೇಕಾದ ಪರಿಕರಗಳೂ ಇದ್ದವು. ಆದರೆ ನಾನು ಮಾಡಿದರೆ 'ಬೆಡ್' ಕಾಫಿ 'ಬ್ಯಾಡ್' ಕಾಫಿ ಆಗುವ ಸಂಭವವೇ ಹೆಚ್ಚಿತ್ತು. ಇಂತಹ ಸಮಯದಲ್ಲೇ ನೆರೆ ಚೆನ್ನಾಗಿರಬೇಕು ಅನ್ನಿಸೋದು. ನಮ್ಮ ನೆರಮನೆಯವರು ಕ್ಯಾತೇಗೌಡರು. ಜಾತ್ಯತೀತ ಜನತಾದಳದ ಮುಖಂಡರು. ಮಾತನಾಡಿಸುವ ನೆಪದಲ್ಲಿ ಅವರ ಮನೆಗೆ ನುಗ್ಗಿದೆ. 'ಸಂಸ್ಕಾರ ಸಾ. ಬಲ್ಲಿ ಸಾ ಬಲ್ಲಿ, ಮನೇಲಿ ಯಾರೂ ಇಲ್ಲ ಅಂತ ತಿಳೀತು. ನಾನೇ ಕಾಫಿಗೆ ಕರೆಯಾನ ಅಂತ ಬರಬೇಕು ಅಂತಿದ್ದೆ. ನೀವೇ ಬಂದ್ರಲ್ಲಾ ಒಳ್ಳೆದಾಯಿತು' ಎಂದು ಒಂದೇ ಉಸುರಿಗೆ ಬಾಯಿ ತುಂಬ ಸ್ವಾಗತ ನೀಡಿದರು. ಅವರ ಮನೆಯ ಅಂಗಳದಲ್ಲಿ ಕುಳಿತೆ. ಕಾಫಿ ಬಂದಿತು. ಕುಡಿಯುತ್ತಾ ಗೋಡೆಗೆ ನೇತುಹಾಕಿದ್ದ ಫೋಟೋಗಳತ್ತ ಕಣ್ಣು ಹಾಯಿಸಿದೆ. ಒಂದು ಫೋಟೋ ನೋಡಿ ಆಶ್ಚರ್ಯ ಆಯಿತು. ಅದು ಯಾವುದೂ ಅಂತೀರಿ. ಯಡ್ಯೂರಪ್ಪನವರ ಫೋಟೋ! ಜಾತ್ಯತೀತ ಜನತಾದಳದ ಮುಖಂಡರ ಮನೆಯಲ್ಲಿ ಈ ಫೋಟೋ ಇದೆ ಅಂದರೆ ಮೇಲುಕೋಟೆ ಚೆಲುವನಾರಾಯಣ ಸ್ವಾಮಿ ದೇವಸ್ಥಾನದ ಅಂಗಳದಲ್ಲಿ ಮಾಂಸದ ಅಂಗಡಿ ಇದ್ದಂಗೇಯ! ಅರೆರೆ ಇದೇನಪ್ಪಾ ಇದು. ಇದರ ಸುಳಿವು ಸಿಕ್ಕಿದರೂ ಸಾಕು. ದೊಡ್ಡ ಗೌಡರು, ಸಣ್ಣ ಗೌಡರು ಇಂತೋರ ಬೆಳಿಯೋಕೆ ಬಿಟ್ಟಾರ ಬಿಟ್ಟಾರ. ಅಂತಹದ್ದರಲ್ಲಿ ಎದ್ದು ಕಾಣುವಂತೆ ಈ ಫೋಟೋ ನೇತು ಹಾಕವರಲ್ಲ ಈ ಕ್ಯಾತೇಗೌಡರು. ಅವರಿಬ್ಬರೂ ರಾಜಕೀಯದಲ್ಲಿ ಹಾವು ಕೀರ ಇದ್ದಂಗೆ ಅಲ್ಲವಾ. ಇನ್ನು ಯಡ್ಯೂರಪ್ಪ ನಿಷ್ಠರ ಮನೆಯಲ್ಲಿ ಕುಮಾರಣ್ಣಾರ ಫೋಟೋ ಇದ್ದರೆ ಅದಕೊಂದು ಅರ್ಥವಾದರೂ ಇರುತ್ತಿತ್ತು, ಭಾಜಪ ಅಧಿಕಾರಕ್ಕೆ ತಂದವರೇ ಇವರು ಅನ್ನುವ ಕೃತಜ್ಞತೆಯನ್ನಾದರೂ ತೋರಿಸಿದ ಹಾಗೆ ಆಗುತ್ತಿತ್ತು, ಇಲ್ಲಿ ನೋಡಿದರೆ ಎಲ್ಲಾ ತಿರುಗಾಮುರುಗಾ ಆಗಿದೆ. ಏನಾದರೂ ಜಾತ್ಯತೀತ ಜನತಾದಳ ಅನ್ನುವ ಪಕ್ಷ ಭಾರತೀಯ ಜನತಾ ಪಕ್ಷದೊಂದಿಗೆ ವಿಲೀನ ಆಗಿಹೋಯಿತಾ ಎಂಬ ಗುಮಾನಿ ಬಂತು. ಇರಲಾರದು. ಮನೆಗೆ ಅಧಿಕಾರ ಬರದೆ ಇಂತಹವಕ್ಕೆಲ್ಲ ಆ ಮನೆಯವರು ಒಪ್ಪುವ ಜಾಯಮಾನದವರಲ್ಲ, ಅಧಿಕಾರ ಸಿಕ್ಕಿದರೆ ಅದು ಬೇರೆ ಮಾತು. ಅದು ಸದ್ಯಕ್ಕಂತೂ ಸಿಗುವ ಲಕ್ಷಣ ಕಾಣುತ್ತಿಲ್ಲ. ಹಾಗಾದರೆ ಈ ಕ್ಯಾತೇಗೌಡರೇ ಏನಾದರೂ ನಿಷ್ಠೆ ಬದಲಾಯಿಸಿದರಾ? ತನ್ನ ನಾಯಕರಿಗೇ ಬಿಸಿನೀರು ಬುಟ್ಟರಾ ಅನ್ನುವ ಅನುಮಾನವೂ ಬಂದಿತು. ನನ್ನಲ್ಲಿದ್ದ ಅನುಮಾನಗಳನ್ನೆಲ್ಲ ಅವರ ಮುಂದೆ ಬಿಚ್ಚಿಡಲು-'ಗೌಡರೆ......' ಅಂದೆ.



'ಅದೇನೇಳಿ ಸಾ' ಅಂದ್ರು ಅವರು.

'ಇದೇನು ನಿಮ್ಮ ಮನೆಯಲ್ಲಿ ಈ ಫೋಟೋ' ಅನ್ನುತ್ತಾ ಯಡ್ಯೂರಪ್ಪನವರ ಫೋಟೋ ಕಡೆ ಬೆರಳು ಮಾಡಿದೆ.

'ದೊಡ್ಡೋರು ಸಾ ಅವರು' ಅಂದ್ರು.

'ಅಲ್ಲ ಗೌಡರೆ. ಆದರೂ ಇದು ನಿಮ್ಮಂತಹವರ ಮನೆಯಲ್ಲಿ.....' ಎಂದು ರಾಗ ಎಳೆದೆ.

'ಗುಣಕ್ಕೆ ಮತ್ಸರಾನಾ ಸಾ' ಅಂದ್ರು ಗೌಡರು!

ಅದೇನು ಗುಣ ಕಂಡರೋ ಇವರು. ಅದ ನಾ ಕಾಣೆ. ಅದು ಹಾಳಾಗಲಿ. ಇವರಂತಹವರನ್ನೇ ನಂಬಿರುವ ಕುಮಾರಣ್ಣಾರ ಭವಿಷ್ಯ ಏನು?


'ಹಂಗಾರೆ ಕುಮಾರಣ್ಣಾರ ಕತೆ ಮುಗಿದಂಗೇಯ ಅನ್ನಿ' ಅಂದೆ.

ಗೌಡರ ಮುಖ ಹೇಗಾಯ್ತು ಅಂತೀರಿ? ಜಿದ್ದಾಜಿದ್ದಿ ಚುನಾವಣೆ ನಡೆಯುತ್ತಿರುವ ಸಂದರ್ಭದಲ್ಲಿ ಒಂದು ಪಾರ್ಟಿಯೋರು ಇನ್ನೊಂದು ಪಾರ್ಟಿಯವರಿಗೆ 'ನೀವು ಮಗ್ಗಾಮಲಗೋದು ಗ್ಯಾರಂಟಿ ಕನಾ' ಅಂದಾಗ ಎದುರು ಪಾರ್ಟಿಯವರ ಮುಖ ಆಗುತ್ತಲ್ಲಾ ಹಾಗೇ ಆಯಿತು. ಹುಷಾರಾದೆ.

'ಅಲ್ಲಾ ಕುಮಾರಣ್ಣಾ ಅವರು....' ಅಂತ ಸಂಶಯ ಸೂಚಿಸಿದೆ.

'ಅವರಿಗೇನು ಸಾ. ಇನ್ನೂ ಗಟ್ಟಿಯಾದ್ರು' ಅಂದರು ಗೌಡರು!

'ಗುಣಕ್ಕೆ ಮತ್ಸರ ಇಲ್ಲ' ಅಂತ ಯಡ್ಯೂರಪ್ಪನವರನ್ನ ತಾರೀಫು ಮಾಡ್ತಾರೆ. ಅದೇ ಉಸುರಿನಲ್ಲಿ 'ಕುಮಾರಣ್ಣ



ಎಚ್.ಎಲ್. ಕೇಶವಮೂರ್ತಿ

ಅಣಕ

ಗಟ್ಟಿಯಾದರು' ಅಂತಾ ಹಿಗ್ಗುತ್ತಾರೆ. ಈ ಲಾಜಿಕ್ಕು ಅರ್ಥ... ಆಗಲಿಲ್ಲ, ಅದನ್ನೇ ಅವರಿಗೆ ತಿಳಿಸಿದೆ. ಅವರು ಹೇಳಿ... ಮಾತಿನ ಅರ್ಥ ಹೀಗಿದೆ:


ಯಡ್ಯೂರಪ್ಪನವರು ತಮ್ಮ ದರ್ಬಾರಿನಲ್ಲಿ ಲಿಂಗಾಯ... ಮಠಗಳಿಗೆ ಕೆಮ್ಮಿದ್ದಕ್ಕೆ ಕ್ಯಾಕರಿಸಿದ್ದಕ್ಕೆಲ್ಲ ಓಡಿಹೋಗುತ್ತಿದ್ದರಲ್ಲಾ... ಸರ್ಕಾರದ ಬೊಕ್ಕಸದ ಹಣವನ್ನು ಹರಿಸಿ ಅವರೆಲ್ಲ... ಆಶೀರ್ವಚನ ಪಡೆಯುತ್ತಿದ್ದರಲ್ಲಾ; ಲಿಂಗಾಯತ ಅಧಿಕಾರಿಗ... ಯಡ್ಯೂರಪ್ಪನವರ ಸರ್ಕಾರ ಅಂದರೆ ನಮ್ಮದೇ ಸರ್ಕಾ... ಅಂತ ಮೆರೆಯುತ್ತಿದ್ದರಲ್ಲಾ; ಲಿಂಗಾಯತರ ಮತದಾರ... ನಮ್ಮೋರು ಮುಖ್ಯಮಂತ್ರಿ ಆಗವ್ರೆ ಅನ್ನೋ ಧಿಮಾಕ... ಮೆರೆದಾಡುತ್ತಿದ್ದರಲ್ಲಾ; ಇವರು ಏನು ಬೇಕಾದರೂ ಮಾಡ... ಇವರನ್ನು ಬೀಳಿಸಲೇಬಾರದು ಎಂದು ಶಪಥ ಮಾಡಿದವರಂ... ಹಾರಾಡುತ್ತಿದ್ದರಲ್ಲಾ; ಯಡ್ಯೂರಪ್ಪನವರನ್ನ ಅಧಿಕಾರದಿಂ... ಬೀಳಿಸಿಬಿಟ್ಟಾರು ಅಂತಾವ, ಬೀಳಿಸೇಬಿಟ್ಟಾಗ 'ಅಯ್ಯೊ... ಬೀಳಿಸೇಬಿಟ್ಟರಲ್ಲಪ್ಪಾ' ಅಂತಾವ ಬೊಂಬ್ಡಬಜಾಯಿಸಿಕೊಂಡ... ಎಲ್ಲರೂ ಒಂದಾದರಲ್ಲಾ; ಇದೆಲ್ಲದರ ಪರಿಣಾಮ... ಏನಾಯಿತಂತೆ ಅಂದರೆ.... ಒಕ್ಕಲಿಗರು ಅಂದರೆ ಒಂದ... ತುಂಡು ಬಾಡ ಹೆಚ್ಚಿಗೆ ಹಾಕಿದವರ ಕ... ವಾಲೋಜಾತಿಯವರಲ್ಲಾ. ಆ ಪಕ್ಷ ಈ ಪಕ್ಷ ಎಂದ... ಹರಿದು ಹಂಚಿಹೋಗಿದ್ದರಂತೆ. ಲಿಂಗಾಯತರೆಲ್ಲ ಒಂದಾಗಿ... ಕಂಡು 'ಇವರನ್ನ ಹಿಂಗೇ ಬೆಳಿಯೋಕೆ ಬಿಟ್ಟರೆ ನಮ್ಮೋರ... ಬಾಳಿ ಬದುಕೋಕೆ ಬುಟ್ಟಾರ ಬುಟ್ಟಾರ. ಹುರಿದ... ಉಪ್ಪಿನಕಾಯಿ ಹಾಕ್ಕೊತಾರೆ' ಅಂತಾವ ಒಕ್ಕಲಿಗರೆಲ್ಲ ತಮ... ಸಣ್ಣಪುಟ್ಟ ವೈಷಮ್ಯಗಳನ್ನು ಮರೆತು ಒಟ್ಟಿಗೆ ಆಗಿರುವವರಂತೆ...

ಪಾದುಕಾ ಪುರಾಣ

ದೇವರು ಅಂದರೆ ಸದರ ಆಗಿರುವಂತಿದೆ. ಅದೇನೋ... ಹೇಳ್ತಾರಲ್ಲ ಮಿ ಸದರ ಕೊಟ್ಟದ್ಕೆ ಸೆರಗಿಗೇ ಕೈಹಾ... ಅಂತಾವ. ಹಂಗಾಗಿದೆ ದೇವರ ಕತೇನೂ. ಕದೀತಾ ಕದೀತ... ದೇವರ ಒಡವೇನೆ ಕದೀತಾರೆ ಅಂದರೆ ಏನು ಅರ್ಥ... ಅಂತೀನಿ. ಆ ಪಾಪಂಡಿ ಮುಂಡೇವಕ್ಕೆ ದೇವರುದಿಂದಿರ... ಅನ್ನೊ ಭಯ ಸ್ವಲ್ಪನಾದರೂ ಇರಬೇಡವಾ. ಆ ಭಗವಂತ... ಒಡವೇ ಕದ್ದರೆ ರೌರವ ನರಕ ಕಾಣಬೇಕಾಯ್ತದೆ ಅನ್ನೊ... ಭೀತಿ ಆದರೂ ಇರಬಾರದಾ. ಅದೂ ಇಲ್ಲ, ಸಮಯ...

ಯಡ್ಡಿ ಹೇಳಿಕೆಗಳು ಮನರಂಜನೆ ನೀಡುತ್ತವೆ

ಮಾಜಿ ಮುಖ್ಯಮಂತ್ರಿ, ಯಡಿಯೂರಪ್ಪನವರ ತಿಕ್ಕಲು ಹೇಳಿಕೆಗಳ ಕೆಲವು ಉದಾಹರಣೆಗಳನಷ್ಟೇ ಪತ್ರಿಕೆಯಲ್ಲಿ ನೀಡಲಾಗಿದೆ. ಮೂರು ವರ್ಷಗಳ ಅಧಿಕಾರಾವಧಿಯಲ್ಲಿ ಅವರು ನೀಡಿದ ಇಂತಹ ಅಸಂಖ್ಯ ಹೇಳಿಕೆಗಳ ಬಗ್ಗೆ ಒಂದು ಪಿಎಚ್.ಡಿ ಅಧ್ಯಯನವನ್ನೇ ಮಾಡಬಹುದು.




ವ್ಯಕ್ತಿ ಯಾರೇ ಇರಲಿ, ಒಂದು ಉನ್ನತ ಸ್ಥಾನವನ್ನು ಏರಿದ ಮೇಲೆ ಆ ಸ್ಥಾನಕ್ಕೆ ಘನತೆ ತರುವ ರೀತಿಯಲ್ಲಿ ನಡೆದುಕೊಳ್ಳಬೇಕು; ಮಾತು ಕೃತಿಗಳೂ ಅದಕ್ಕೆ ಪೂರಕವಾಗಿರಬೇಕು. ಆದರೆ ನಮ್ಮ ಯಡಿಯೂರಪ್ಪನವರು ಮುಖ್ಯಮಂತ್ರಿ ಸ್ಥಾನಕ್ಕೆ ಏರಿದ ಬಳಿಕ ಒಂದು ದಿನವ್ರೂ ಆ ಸ್ಥಾನದ ಘನತೆಗೆ ಅನುಗುಣವಾಗಿ ನಡೆದುಕೊಂಡ ಉದಾಹರಣೆ ಸಿಗಲಾರದು. ಅಧಿಕಾರ ಉಳಿಸಿಕೊಳ್ಳುವ ಏಕಮಾತ್ರ ಉದ್ದೇಶದಿಂದ ಬಳ್ಳಾರಿಯಲ್ಲಿ ನಡೆಯುತ್ತಿದ್ದ ಅಕ್ರಮವನ್ನು ಸಹಿಸಿಕೊಂಡು ಕೂತ ಇದೇ ವ್ಯಕ್ತಿ ತಾನು ಅಕ್ರಮ ಗಣಿಗಾರಿಕೆಯನ್ನು ನಿಲ್ಲಿಸಿದ್ದಕ್ಕೆ ನೊಬೆಲ್ ಕೊಡಬೇಕಿತ್ತು, ಪ್ರಧಾನ ಮಂತ್ರಿಗಳೇ ತನ್ನನ್ನು ಸನ್ಮಾನಿಸಬೇಕಿತ್ತು ಎಂದೆಲ್ಲ ಹೇಳಿದ್ದೂ ಇದೆ. 2010ರ ಕೊನೆಯಭಾಗದಲ್ಲಿ ರೆಡ್ಡಿಗಳ ಜತೆ ಬಳ್ಳಾರಿಗೆ ಹೋದ ಇದೇ ಯಡಿಯೂರಪ್ಪನವರು 'ಬಳ್ಳಾರಿಯಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿದೆ ಎಂದು ವಿರೋಧ ಪಕ್ಷಗಳು ಬೊಬ್ಬೆ ಹಾಕುತ್ತಿವೆ. ಇಲ್ಲಿ ಯಾವ ಅಕ್ರಮವೂ ನಡೆಯುತ್ತಿಲ್ಲ, ಅಕ್ರಮ ಗಣಿಗಾರಿಕೆ ನಡೆಯುತ್ತಿದೆ ಎಂದು ಹೇಳುವವರು ಪುರಾವೆ ತೋರಿಸಿ' ಎಂದು ಸವಾಲು ಹಾಕಿದ್ದರು. ಇಂತಹ ತರಹೇವಾರಿ ಹೇಳಿಕೆಗಳ ದಾಖಲಾತಿಗಳು ಸುದ್ದಿವಾಹಿನಿಗಳ ಬಳಿ ಇರಬಹುದು. ಅವನ್ನೆಲ್ಲ ಕ್ರೋಢೀಕರಿಸಿ ಪ್ರಸಾರ ಮಾಡಿದರೆ ಮಾಜಿ ಮುಖ್ಯಮಂತ್ರಿಯ ವಿಕ್ಷಿಪ್ತ ವರ್ತನೆಯ ಪೂರ್ಣ ಚಿತ್ರಣ ಸಿಗಬಹುದು; ಅದ್ಭುತವಾದ ಒಂದು ಮನರಂಜನೆಯೂ ಆಗಬಹುದು. ಆದರೆ ಯಾವ ಸುದ್ದಿವಾಹಿನಿಗೂ ಅಂತಹ ಒಂದು ಆಲೋಚನೆ ಬರದಿರುವುದು ಅಚ್ಚರಿಯೇ ಸರಿ.

- ಶ್ರೀನಿವಾಸ ಕಾರ್ಕಳ, ಮಂಗಳೂರು


ನಮ್ಮಂತೆ ಯೋಚಿಸುವ ದೊಡ್ಡ ಬಳಗವಿದೆ

ಪತ್ರಿಕೆ ಚಿಂತನೆಗೆ ಅರ್ಹವಾದ ಹಲವಾರು ವಿಚಾರಗಳಿಂದ ತುಂಬಿ ಸಮೃದ್ಧವಾಗಿ ಬರುತ್ತಿದೆ. ಕಂಡಹಾಗೆ, ಚಾರ್ವಾಕ, ಕಟ್ಟೆಪುರಾಣ, ಪುಸ್ತಕ ವಿಮರ್ಶೆ ಎಲ್ಲಾ ಓದಿ ಮುಗಿಸಿ ಪ್ರತಿಕ್ರಿಯಿಸುವಷ್ಟರಲ್ಲಿ ಮತ್ತೊಂದು ಸಂಚಿಕೆ ನನ್ನ ಮುಂದಿರುತ್ತದೆ.



ಈ ವಾರದ 'ಕಂಡಹಾಗೆ' ಅಂಕಣದಲ್ಲಿ 'ಬೋಳು ವಾರು ಅವರ ಮುತ್ತುಪ್ಪಾಡಿಯಲ್ಲಿ ಒಂದು ಮಧ್ಯಾಹ್ನ' ಎಂಬ ಲೇಖನ ತುಂಬಾ ಆತ್ಮೀಯವಾಗಿತ್ತು. ಎಲ್ಲರ ಮನಸ್ಸು ಸ್ವಚ್ಛವಾಗಿದ್ದರೆ ನಮ್ಮ ಸುತ್ತಮುತ್ತಲಿನ ಸಮಾಜ ಮತ್ತು ಪರಿಸರ ನಿಜವಾಗಿಯೂ ನೆಮ್ಮದಿಯಿಂದ ಇರಲು ಸಾಧ್ಯ ಎಂಬುದನ್ನು ಈ ಲೇಖನ ತೋರಿತು. ಇತ್ತೀಚಿನ ದಿನಗಳಲ್ಲಿ ಮಾಡಬಾರದ ತಪ್ಪುಗಳನ್ನು ಮಾಡಿದವರನ್ನು ಸಹ ಸಮರ್ಥಿಸಿಕೊಳ್ಳುವ, ಬೆಂಬಲಿಸುವ ಜನರ ಗುಂಪುಗಳನ್ನು ನೋಡಿದರೆ ದಿಗ್ಭ್ರಮೆಯಾಗುತ್ತದೆ. **There is nothing either good or bad, but thinking makes it so** ಎಂಬ ವಿಲಿಯಮ್ ಶೇಕ್ಸ್‌ಪಿಯರ್ ಮಾತು ಮತ್ತೊಮ್ಮೆ ಬರುತ್ತದೆ.

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ ಕಳುಹಿಸಬಹುದು.



ನಮ್ಮಂತೆ ಯೋಚಿಸುವ ದೊಡ್ಡ ಬಳಗವೇ ನಮ್ಮ ಜೊತೆ ಇದೆ ಎನ್ನುವ ಭರವಸೆ ಪತ್ರಿಕೆಯನ್ನು ಓದುವಾಗಲೆಲ್ಲ ಗಟ್ಟಿಯಾಗುತ್ತದೆ. ಇನ್ನೂ ಹೆಚ್ಚು ಸ್ವಚ್ಛ ಮನಸ್ಸುಗಳನ್ನು ಮತ್ತು ಸಮಾಜಮುಖಿ ಚಿಂತನೆಗಳನ್ನು ಹೆಚ್ಚಿಸುವ ನಿಮ್ಮ ಪ್ರಯತ್ನಕ್ಕೆ ಹೆಚ್ಚು ಶಕ್ತಿ ಸಿಗಲಿ.

ಮರೆತಿದ್ದೆ! ಇಂದಿರಮ್ಮ ಅವರ 'ಹುಳಿಮಾವು ಮತ್ತು ನಾನು' ಅಂಕಣ... ತುಂಬಾ ಚೆನ್ನಾಗಿ ಮೂಡಿ ಬರುತ್ತಿದೆ. ಲಂಕೇಶ್ ಅವರ ಇನ್ನೊಂದು ಮುಖದ... ಅನಾವರಣ ಅದ್ಭುತವಾಗಿದೆ.

ಅಂದಹಾಗೆ, ಪುಸ್ತಕ ವಿಮರ್ಶೆಯಲ್ಲಿ ಆ ಪುಸ್ತಕ ಕೊಂಡುಕೊಳ್ಳಲು... ಅನುಕೂಲವಾಗಲು ಪ್ರಕಾಶಕರ/ವಿತರಕರ ಮೊಬೈಲ್ ನಂಬರ... ಪ್ರಕಟಿಸಿದರೆ ಅನುಕೂಲ.

ಸಮೃದ್ಧವಾದ ಪತ್ರಿಕೆಯನ್ನು ಪ್ರತಿ ವಾರ ನೀಡುತ್ತಿರುವ... ನಿಮಗೂ ಮತ್ತು ನಿಮ್ಮ ಬಳಗಕ್ಕೂ ಅಭಿನಂದನೆಗಳು.

-ಡಾ. ಜೆ.ಸಿ. ಶರತ್, ತರೀಕೆ...

ಸೋಗಲಾಡಿಗಳದ್ದೇ ದರ್ಬಾರು

ಕರ್ನಾಟಕದಲ್ಲಿ ಈಗ ಸೋಗಲಾಡಿಗಳದ್ದೇ ದೊಡ... ದರ್ಬಾರು. ಇವರು ಗಡದ್ದಾಗಿ ಮೇಯ್ದು ಅಂಗ-ಭಂಗ ಮಾಡುತ್ತ... ಮತ್ತೆ ರಾಜ್ಯಕ್ಕೆ ವಕ್ಕರಿಸಲು ತಯಾರಿಗೆ ನಿಂತಿದ್ದಾರೆ. ಈ ಅಡಾವುಡಿ ತಂಡಗಳು ರಾಜ್ಯದ ಹುಲ್ಲುಕಡ್ಡಿ ಯನ್ನು ಬಿಡದಂತೆ ತಿಂದಿರುವುದು ಸಾಕಾಗಿ ಲ್ಲದೆ; ಈಗ ಮತ್ತೆ ಹೊಸ ಪಕ್ಷಗಳೊಂದಿಗೆ ಘನಂದಾರಿ ಕೆಲಸಗಳಿಗೆ ಮುಂದಾಗಿರುವುದು ನೋಡಿದರೆ, ನಾಚಿಕೆಗೆಟ್ಟವರ ಹೈವೇಗಳು ಹೇಗಿರುತ್ತವೆ ಎನ್ನುವುದು ಸ್ಪಷ್ಟವಾಗುತ್ತದೆ.

ಡೋಂಗಿ ಪ್ರಗತಿಪರರು, ಹೋರಾಟಗಾರರು ಮೊದಲ ಸಾಲಿನಲ್ಲಿ ನಿಂತು ಒಂದು ಕೈಯಲಿ 'ಜೈ' ಇನ್ನೊಂದು ಕೈಲಿ 'ಧಿಕ್ಕಾರ' ಕೂಗುವುದು ನಡೆದಿರುವಾಗ, ದಿಕ್ಕು ತಪ್ಪಿದ ಹೋರಾಟ ಗಳ ಸುವರ್ಣಕಾಲವಿದು ಅನಿಸುತ್ತದೆ. ಈ ಹಿಂದೆ ಪ್ರೊ. ನಂಜುಂಡಸ್ವಾಮಿ ಅವರು ಶಾಲು ಬೀಸಿದರೆ ಸಾಕು ರೈತಾಪಿ ಜನರಿಂದಿಡಿದು ಕೂಲಿಕಾರ್ಮಿಕರು ಹುಯ್ಯೋ ಎನ್ನುತ್ತಾ ಸರ್ಕಾರಗಳ ವಿರುದ್ಧ ಹೋರಾಟಕ್ಕಿಳಿಯುತ್ತಿದ್ದರು. ಅಂತಹ ಹೋರಾಟಗಳನ್ನು ಈಗ ಎಲ್ಲಿ ಹುಡುಕುವುದು? ಅಂತಹ ನಾಯಕರು ಮತ್ತೆ ಬೆಳೆದು ಬಂದಾರ ಅಥವಾ ನಿಶಕ್ತಿಗೊಂಡಿದ್ದಾರಾ? ಹೋರಾಟಗಳು ಏಕೆ ಮೂಲೆಗೆ ಸೇರಿವೆ? ಅವುಗಳಿಗೆ ಮುಸ್ತಿ ಏನಾದರೂ ಆಗಿದೆಯಾ? ನನ್ನನ್ನು ಯಾವಾಗಲು ಕಾಡುವ ಪ್ರಶ್ನೆ. ರಾಜ್ಯದ ಸಂಘಟನೆಗಳನ್ನು ಒಗ್ಗಟ್ಟಿಗೆ ತೆಗೆದುಕೊಂಡು ಜನ ವಿರೋಧಿ ಸರ್ಕಾರಗಳ ವಿರುದ್ಧ ಸಮರ ಸಾರಬೇಕಾದ ಸಮರ್ಥ ಹೋರಾಟಗಾರರು ಏಕೆ ಮೇಲೆ ಬರಲಿಲ್ಲ ಎನ್ನುವುದು ಇಂದಿಗೂ ಬಿಡಿಸಲಾರದ ಕಗ್ಗಂಟು.

...ದಿ ಅವನ ಒಡವೇನೆ ಎಗರಿಸುತ್ತಾ ಬದ್ದವ್ನೆ.

...ಬಿಳಿಗಿರಿರಂಗನ ಜಾತ್ರೇಲಿ ಹೀಗೆ ಆಗಿದ್ದದಂತೆ. ಅವನು ...ಥ ದೇವ್ರು. ಅವನ ಜಾತ್ರೆ ಅಂದಮೇಲೆ ದೇವರ ...ವ ಇರಬೇಕು ಅಲ್ವಾ. ಅದೂ ಇತ್ತಂತೆ. ಉತ್ಸವದಲ್ಲಿ ...ೋ ದೇವರು ಅಂದ್ರೆ ಗಾಂಧೀಜಿ ವೇಷದಲ್ಲಿ ಬಂದರೆ ...ತ್ತಾ. ಭಕ್ತರು ಅವನನ್ನು ಮೂಸಿಯೋ ನೋಡಲ್ಲ ...ದ್ದರೂ ಸಕಲ ವೇಷಭೂಷಣಗಳೊಂದಿಗೇ ...ಸಿಕೊಳ್ಳಬೇಕು. ಮೈತುಂಬ ಒಡವೆ ಇದ್ದರೇನೆ ಜನರಲ್ಲಿ ...ನ ಮೇಲೆ ಭಕ್ತಿಭಾವನೆ ಮೂಡುವುದು. ಇದ ಆ ...ನೂ ತಿಳ್ಕಂಡಿದ್ದ ಅಂತ ಕಾಣುತ್ತೆ, ಕಳ್ಳರೋ ಕಾಕರೋ ...ತಹವರಾದರೂ ಸರಿಯೆ. ಶ್ರೀಮಂತರಾಗಿದ್ದರಲ್ಲ ಅವರ ...ನ ಒಲಿಸಿ ದಂಡಿಯಾಗಿ ಚಿನ್ನದ ಒಡವೆ ...ಡಿಸಿಕೊಂಡಿದ್ದ. ಅವನ್ನೆಲ್ಲ ತೊಟ್ಟು ಭಕ್ತರಿಗೆ ದರ್ಶನ ... ಭಕ್ತಸಾಗರದಲ್ಲಿ ತೇಲಿಸಿ ಕೃತಾರ್ಥಭಾವನೆ ಮೂಡಿಸಿದ. ...ಉತ್ಸವ ಎಲ್ಲ ಮುಗೀತು. ಭಕ್ತರು ಮನೆಗೆ ಹೋದರು. ...ರಿರಂಗ ಕಾಡಿನಲ್ಲಿ ಇರೋನಲ್ಲವಾ. ಬೆಂಗಳೂರಿನಂತಹ ...ದವಾಸಿಯಾಗಿದ್ದರೆ ಜನ ಜಂಗುಳಿ ಇಲ್ಲದಿದ್ರೇ ಬೇಸರ ...ೋದು. ಕಾಡಿನ ರಂಗನಿಗೆ ಜನರ ಜಾತ್ರೆ ನೋಡಿ ...ಗೆ ಆಗಿತ್ತು, ಅದಕ್ಕೇ ವಿಶ್ರಾಂತಿ ತೆಗೆದುಕೊಳ್ಳಲು ...ಕೋಣೆಗೆ ಬಂದ. ಒಡವೆ ಅನ್ನೋದು ಪ್ರದರ್ಶನಕ್ಕೆ ...ೋದು. ಅವ ಮೈಮೇಲೆ ಹೇರಿಕೊಂಡು ವಿಚಿತ್ರವಾಗಿ ...ನವೇ ಇಲ್ಲದವರ ಹಾಗೆ ಕಾಣುತ್ತಿದ್ದೇನೆ ಅನ್ನಿಸಿರಬೇಕು. ...ನ್ನು ಬಿಚ್ಚಿ ನಿರಾಳ ಆದ. ಬಿಚ್ಚಿದ ಸರಿ. ಅವು ಚಿನ್ನದ ...ವೆಗಳು. ದೇವರವು ಆದರೇನಂತೆ. ಕಳ್ಳರಿಗೆ ಅದೇ ...ಸು ಅನ್ನೋದ ತಿಳ್ಕಂಡಿದ್ದ. ಅದಕ್ಕೆ ಅವ ಭದ್ರವಾಗಿ ...ಲು ನೋಡುತ್ತಾನೆ. ಏನೋ ಅನುಮಾನ ಬಂತು. ... ಧರಿಸಿ, ಈಗ ಕಳಚಿದ್ದ ಪಾದರಕ್ಷೆ ಕಡೆ ಗಮನ ...ಿದ. ಕಾಲಿಗೆ ಹಾಕಿ ನೋಡಿದ. ಅಳತೆ ಸರಿಯಾಗಿಯೇ ...ತ್ತು. ತನ್ನ ಭ್ರಮೆ ಅಂದುಕೊಂಡ. ವ್ಯಥಾ ...ಯಗೊಂಡಿದ್ದಕ್ಕೆ ಬೇಸರ ಆಯಿತು. ಇನ್ನೇನು ಜಮಾ ...ಡಬೇಕು ಅನ್ನುವಾಗ ಮತ್ತೆ ಅನುಮಾನ ಗುಮ್ಮಿ ...ತು. ತಾನು ಧರಿಸಿದ್ದ ಪಾದರಕ್ಷೆಗಳು ಚಿನ್ನದವು. ... ನೋಡಿದರೆ ಚಿನ್ನ ಲೇಪಿತ ತಾಮ್ರದ್ದಾಗಿವೆ! ಇದೇನು ...ಡವೆ? ಹೌದಾದರೆ ಮಾಡಿದ ಪವಾಡ ಪುರುಷ ...ರು? ಇಲ್ಲ ತ್ರೇತಾಯುಗದ ಘಟನೆ ...ರಾವರ್ತನೆಯಾಯಿತೆ? ಆ ಘಟನೆ ಯಾವುದು ಎಂದರೆ ...ಾಮಚಂದ್ರ ಪ್ರಭುವಿನ ಪಾದುಕೆಗಳನ್ನ ಭರತ ...ದುಕೊಂಡು ಹೋಗಿ ಸಿಂಹಾಸನದ ಮೇಲಿರಿಸಿ ...ಜ್ಯಭಾರ ಮಾಡಿದ್ದು; ಭ್ರಾತೃಭಕ್ತಿ ಮೆರೆದದ್ದು. ...ತನಂತೆಯೇ ಭಕ್ತಿಭಾವ ಪರವಶನಾಗಿ ಕಲಿಯುಗದ ಭಕ್ತನಾರೋ ಪೂಜೆಗೈಯ್ಯಲೆಂದು ಚಿನ್ನದ ಪಾದುಕೆಗಳನ್ನು ಕೊಂಡೊಯ್ದಿರಬಹುದೆ? ಇಂತಹ ತೊಳಲಾಟದಲ್ಲಿರುವ ಬಿಳಿಗಿರಿ ರಂಗನಾಥ ಸ್ವಾಮಿ ಇನ್ನೂ ನಾರ್ಮಲ್ ಸ್ಥಿತಿಗೆ ಬಂದಿರಲಾರನೇನೋ ಎಂಬ ಸಂಶಯ ಕೆಲವು ಚಾರ್ವಾಕ ವಂಶಜರಿಗೆ ಕಾಡುತ್ತಿದೆ ಎಂಬುದಕ್ಕೆ ಸಮರ್ಥನೆ ಇನ್ನೂ ಸಿಕ್ಕಿಲ್ಲ....

ಗಣ್ಯಾತಿಗಣ್ಯರು ಅಂದರೆ ಯಾರು?

ಕ್ರಿಕೆಟ್ ಅಂದರೆ ಭಾರತೀಯರ ಧರ್ಮ ಅಂತಾರೆ. ಧರ್ಮ ಅಂದಮೇಲೆ ಒಂದಾದರೂ ದೇವರು ಇರಲೇಬೇಕು. ಇದಕ್ಕೂ ದೇವರು ಇದೆ. ಆ ದೇವತೆಗೆ ರಕ್ತದಾಹ ಇರಬೇಕು. ಬೆಟ್ಟಿಂಗ್‌ನಲ್ಲಿ ಹಣ ಕಟ್ಟಿ 'ಆತ್ಮಾರ್ಪಣೆ' ಮಾಡಿಕೊಂಡರೆ ಆಕೆಗೆ ತೃಪ್ತಿ ಅಂತ ತೋರುತ್ತೆ. ಪೊಲೀಸಿನವರಿಗೂ ದೇವತೆಯ ಮರ್ಮ ತಿಳಿದಿರಬೇಕು. ಅದಕ್ಕೇ ಹೀಗೆ 'ಬಲಿದಾನ' ಮಾಡುವವರನ್ನು ತಡೆಯುವ ಕ್ರಿಯೆ ಕಡೆ ಗಮನಹರಿಸಿದಂತಿಲ್ಲ. ಹಾಗೆಂದು ಅವರು ಕರ್ತವ್ಯ ನಿರ್ಲಕ್ಷಿಸಿದರು ಅನ್ನುವಂತೆಯೂ ಇಲ್ಲ. ಗಣ್ಯಾತಿಗಣ್ಯರು ಅಂತ ಇರುತ್ತಾರಲ್ಲ, ಅಂದರೆ ಅದೇ ವಿಐಪಿ, ವಿವಿಐಪಿಗಳು, ಅಂತಹವರ ಭದ್ರತೆ ಬಗ್ಗೆ ಏನು ಕಾಳಜಿ ವಹಿಸುತ್ತಾರೆ ಅಂತೀರಿ. ಅವರು ಇರುವ ಕಡೆಗೆ ಮನುಷ್ಯರು ಹಾಗಿರಲಿ, ಒಂದು ನೊಣ ಕೂಡ ಹೋಗಬಾರದು ಹಾಗೆ ಕಾವಲಿರುತ್ತಾರೆ!


ಗಣ್ಯಾತಿಗಣ್ಯರು ಅಂದರೆ ಯಾರು ಎಂದು ತಿಳಿಯದಿರುವವರಿಂದ ಕೆಲವು ಸಲ ಯಡವಟ್ಟಾಗಿಬಿಡುತ್ತೆ. ಉದಾಹರಣೆಗೆ ಮುಖ್ಯಮಂತ್ರಿ ಗಣ್ಯಾತಿಗಣ್ಯರು. ಅವರ ಪತ್ನಿಯೂ ಇದೇ ಗುಂಪಿಗೆ ಸೇರುತ್ತಾರಾ ಎಂದರೆ ಹೋಗಿ ಕಣಿ ಕೇಳ್ರಿ ಅನ್ನಬೇಕಾಗುತ್ತೆ ಅಷ್ಟೆ. ಗಂಡ ಅದಾದ ಮೇಲೆ ಹೆಂಡತಿಯೂ ಅದೇ ಎನ್ನುವ ಸಾಮಾನ್ಯ ಜ್ಞಾನ ಇರಬೇಕು. ಅದೂ ಇಲ್ಲದ ಕೆಲವು ಪೊಲೀಸ್ ಪ್ಯಾದೆಗಳಿಂದ ಆಗಬಾರದ ಅನಾಹುತ ಆಗಿಬಿಡುತ್ತೆ.

ಮೊನ್ನೆಮೊನ್ನೆ ಏನಾಯಿತು ಅಂತೀರಿ. ಹೀಗೇ ಕ್ರಿಕೆಟ್ ಪಂದ್ಯ ನಡೆಯುತ್ತಿತ್ತು. ಆ ಆಟದಲ್ಲಿ ಅಭಿರುಚಿ ಇರುತ್ತೋ ಇಲ್ಲವೊ ಅದು ಮುಖ್ಯ ಅಲ್ಲ. ಅಲ್ಲಿ ಹಾಜರಾಗಿದ್ದೆ ಎಂದರೇ ಒಂದು ಗ್ರೇಡು. ಜಾತ್ರೆಗೆ ಹೋಗಿರ್ತೀರಿ. ದೇವರ ಉತ್ಸವ ಬರುತ್ತೆ. ನೋಡುತ್ತೀರಿ. ದೇವರೇ ಕಾಣುವುದಿಲ್ಲ, ಎತ್ತಲಿಂದ ನೋಡಿದರೂ ಪೂಜಾರೀನೆ ಕಾಣಿಸುತ್ತಾನೆ. ಆದರೂ ಜಾತ್ರೆಗೆ ಹೋಗಿದ್ದೆ ಅನ್ನೊ ಸಮಾಧಾನ ಇರುತ್ತಲ್ಲ ಹಾಗೇನೇ ಇಲ್ಲೂನೂ. ಜನಜಾತ್ರೇಲಿ ಕ್ರಿಕೆಟ್ ಆಟ ನೋಡೋಕೆ, ಅನುಭವಿಸೋಕೆ ಆಗದೆ ಇದ್ದರೂ ತರಾವರಿ ವೇಷಭೂಷಣಗಳಿಂದ ರಾರಾಜಿಸುವವರನ್ನ ನೋಡಿ ಕಣ್ಣು ತಂಪು ಮಾಡಿಕೊಳ್ಳುವ ಅವಕಾಶದಿಂದಂತೂ ವಂಚಿತರಾಗೋಲ್ಲ, ಹೇಗಾದರೂ ಇರಲಿ. ಕ್ರಿಕೆಟ್ ಮ್ಯಾಚಿಗೆ ಹೋಗಿದ್ದೇ ಘನತೆಯ ಪ್ರಶ್ನೆ ಆಗಿರುವುದಂತೂ ಸತ್ಯ!

ಅವತ್ತು ಏನಾಯ್ತಂತೆ ಅಂದರೆ ಕ್ರಿಕೆಟ್ ಮ್ಯಾಚು ಮುಗಿಯಿತಂತೆ. ನಂತರ ಆಟಗಾರರು ಹೊರಟುನಿಂತರಂತೆ. ಅವರಿಗೆ ಸೂಕ್ತ ರಕ್ಷಣೆ ನೀಡಬೇಕು ಅಂತ ಪೊಲೀಸಿನವರು ಹರಸಾಹಸ ಮಾಡುತ್ತಿದ್ದರಂತೆ. ಆಟಗಾರರು ನಿರ್ಗಮಿಸುವ ಪ್ರವೇಶದ್ವಾರದ ಹತ್ತಿರ ಇದ್ದ ಪ್ರೇಕ್ಷಕರನ್ನ ಹೊರಗೆ ಕಳುಹಿಸುತ್ತಿದ್ದರಂತೆ. ಒಬ್ಬಾಕೆ ಅಲ್ಲಿ ತನ್ನ ಕಾರಿನ ಬಳಿ ಸ್ನೇಹಿತೆ ಜೊತೆ ನಿಂತಿದ್ದಳಂತೆ. ಅಲ್ಲಿಗೆ ಬಂದ ಎಎಸ್‌ಐ 'ಹೋಗಮ್ಮ ತಾಯಿ' ಅಂದಿರಬೇಕು. 'ಯಾಕೆ ಹೋಗ್ಬೇಕು' ಅಂತ ಮರುಪ್ರಶ್ನೆ ಹಾಕಿರಬೇಕು. 'ಆಟಗಾರರ ರಕ್ಷಣೆಗಾಗಿ' ಅಂದಿರಬೇಕು ಇವ. 'ನಾನು ಯಾರು ಗೊತ್ತ' ಅಂತ ಕೇಳಿರಬೇಕು ಆಕೆ. 'ಯಾರಾದ್ರೆ ನನಗೇನು, ಹೋಗಮ್ಮ ಆಚೆಗೆ' ಅಂದಿರಬೇಕು ಇವ. 'ನಾನು ವೆಂಕಟೇಶ್ ಪ್ರಸಾದ್ ಹೆಂಡತಿ ಗೊತ್ತ' ಅಂದಿರಬೇಕು ಆಕೆ. ಅಂತ ಹೆಸರಿನವರು ಸಾವಿರಾರು ಜನ ಇದಾರೆ. ಇವನೇನು ಕ್ರಿಕೆಟ್ ಪ್ರವೀಣನೆ ಯಾರು ಇವರು ಅಂತ ತಿಳಿದಿರೋಕೆ? 'ಅಯ್ಯೋ ಯಾವ್ಬೋನ ಹೆಂಡತಿಯಾದ್ರೆ ನನಗೇನು? ಹೊರಡಮ್ಮ ಇಲ್ಲಿಂದ' ಅಂದಿರಬೇಕು. ತನ್ನ ಗಂಡ, ಮಾಜಿ ಕ್ರಿಕೆಟ್ ಆಟಗಾರ, ಹಾಲಿ ಬೆಂಗಳೂರು ಟೀಮಿನ ಬೌಲಿಂಗ್ ಕೋಚು! ಅಂತಹವರ ಹೆಸರನ್ನೇ ಕೇಳಿಲ್ಲ ಅನ್ನುವ ಹಾಗೆ ಆಡಿದರೆ... ಅದು ಸಾಲದು ಅಂತ 'ಯಾವ್ಬೋನ' ಎಂದೆಲ್ಲ ಏಕವಚನದಲ್ಲಿ ಸಂಬೋಧಿಸಿದರೆ... ಯಾವ ಹೆಂಡತಿಗೆ ರೇಗಲ್ಲ. ಸುದ್ದಿ ತಿಳಿದ ವೆಂಕಟೇಶ್ ಪ್ರಸಾದ್ ಸ್ಥಳಕ್ಕೆ ಬಂದು ಯರ್ರಾಬಿರ್ರಿ ರೇಗಿದರಂತೆ! ಯಾರ ಮೇಲೆ ಅಂತೀರಿ. ನಿಯಮ ಉಲ್ಲಂಘಿಸಿದ ಹೆಂಡತಿ ಮೇಲಲ್ಲ, ಕಾನೂನು ರಕ್ಷಿಸಲು ಪ್ರಯತ್ನಿಸಿದ ಎಎಸ್‌ಐ ಮೇಲೆ! 'ತಾಕತ್ತಿದ್ದರೆ ಹೊರಗೆ ಕಳುಹಿಸಿ' ಅಂತಾನೂ ಗುಡುಗಿದರಂತೆ ಪ್ರಸಾದು!

ಅದು ಮಾತು ಅಂದರೆ!

ರೀ ಪೊಲೀಸಿನೋರೆ ನಿಮ್ಮ ತಲೆ ಒಳಗೆ ಏನು ತುಂಬಿಕೊಂಡಿದ್ದೀರ್ರಿ? ಕಸ ಕಣ್ರೀ ಕಸ. ಅಲ್ಲಾ ಕ್ರಿಕೆಟಿಗರು ಅಂದರೆ ಏನು, ಅವರ ಹೆಂಡತೀರು ಅಂದ್ರೆ ಸಾಮಾನ್ಯವಾ... ಅಂತೋರ್ನೇ ಹೊರಕ್ಕೆ ಕಳಿಸೋ ತಾಕತ್ತು ಇದೆಯೇನ್ರಿ ನಿಮಗೆ. ಅಮ್ಮಮ್ಮ ಅಂದ್ರೆ 'ಪೇಪರ್' ಗುದ್ದಾಟ. ಅಲ್ಲಿಗೆ ಮುಗೀತಪ್ಪ. ಇಷ್ಟಕ್ಯಾಕ್ರೀ ಬಂಡೆಗೆ ತಲೆ ಚಚ್ಚಿಕೊಳ್ತೀರಿ? ಅದ ತಿಳ್ಕಂಡು ತೆಪ್ಪಗೆ ಬಿದ್ದಿರಬಾರದಾ ಅಂತೀನಿ...



ಯೂ-ಟ್ಯೂಬ್ ಮೇವ ಜಯತೆ!

"ನೀ ಚಾಪೆ ಕೆಳಗೆ ತೂರಿದರೆ, ನಾ ರಂಗೋಲಿ ಕೆಳಗೆ ತೂರುತ್ತೇನೆ" ಎಂಬ ಗಾದೆ ಮಾತನ್ನು ಹಿಂದಿಯ ನಟ ಅಮೀರ್ ಖಾನ್ ನಿರ್ದೇಶಿಸುತ್ತಿರುವ 'ಸತ್ಯಮೇವ ಜಯತೆ' ಟಿ.ವಿ. ಧಾರಾವಾಹಿ ನೆನಪಿಸುತ್ತಿದೆ.

ಈ ಹಿಂದಿ ಧಾರಾವಾಹಿಯನ್ನು ಎಲ್ಲಾ ಪ್ರಾದೇಶಿಕ ಭಾಷೆಗಳಿಗೆ ಡಬ್ ಮಾಡಿ ಅದನ್ನು ಎಲ್ಲಾ ರಾಜ್ಯಗಳ ಪ್ರೇಕ್ಷಕರಿಗೆ ತೋರಿಸಬೇಕೆಂಬುದು ಅಮೀರ್ ಖಾನ್‌ನ ಅಪೇಕ್ಷೆಯಾಗಿತ್ತು. ಇದಕ್ಕೆ ಕಾರಣ ಇದು ಮನರಂಜನೆಯ ಕಾರ್ಯಕ್ರಮವಲ್ಲ ಅಥವಾ ಗೇಮ್ ಶೋ ಕೂಡ ಅಲ್ಲ. ಅದರ ಬದಲಿಗೆ ನಮ್ಮ ಸಮಾಜವನ್ನು ಕಾಡುವ ಅನೇಕ ಜ್ವಲಂತ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಹೊಸ ಸಮಾಜವನ್ನು ಕಟ್ಟಲು ಅಮೀರ್ ಖಾನ್ ಹೊರಟಿರುವುದರಿಂದ.

ಈ ಕಾರ್ಯಕ್ರಮವನ್ನು ಬಹುತೇಕ ಎಲ್ಲಾ ಪ್ರಾದೇಶಿಕ ಭಾಷೆಗಳಲ್ಲಿ ಡಬ್ ಮಾಡಿ ಪ್ರಸಾರಮಾಡಲು ವ್ಯವಸ್ಥೆ ಆಗಿತ್ತು. ಆದರೆ ಕನ್ನಡ ಚಿತ್ರರಂಗದವರು ಡಬ್ಬಿಂಗ್ ವಿರೋಧ ತೋರಿದ್ದರಿಂದ ಇಲ್ಲಿ ಡಬ್ ಮಾಡಿ ಪ್ರಸಾರ ಮಾಡಲು ಅನುಮತಿ ಸಿಗಲಿಲ್ಲ. ಹೀಗಾಗಿ ಕರ್ನಾಟಕದ ಜನತೆ 'ಸತ್ಯಮೇವ ಜಯತೆ' ಕಾರ್ಯಕ್ರಮವನ್ನು ಕನ್ನಡದಲ್ಲಿ ನೋಡುವುದರಿಂದ ವಂಚಿತರಾದರು.

ಆದರೆ ಅಮೀರ್ ಖಾನ್ ಅಭಿಮಾನಿಗಳು ಇದನ್ನು ಕನ್ನಡದಲ್ಲಿ ಡಬ್ ಮಾಡಿ ಯೂ-ಟ್ಯೂಬ್‌ನಲ್ಲಿ ಪ್ರಸಾರ ಮಾಡಿದ್ದಾರೆ. ಅಂದರೆ ಈ ಕಾರ್ಯಕ್ರಮವನ್ನು ಕನ್ನಡದಲ್ಲೇ ನೋಡಬೇಕೆಂಬ ಉತ್ಸಾಹ ಇರುವವರು ಈಗ ಅದನ್ನು ಯೂಟ್ಯೂಬ್‌ನಲ್ಲಿ ವೀಕ್ಷಿಸಬಹುದು. ಬಹುಶಃ ಯುಟ್ಯೂಬ್ ಮೇಲೆ ಹತೋಟಿ ಸಾಧಿಸಲು ಕನ್ನಡ ಚಿತ್ರರಂಗದವರಿಗೆ ಸಾಧ್ಯ ಇಲ್ಲದಿರುವುದರಿಂದ ಇದು ಹೀಗೆಯೇ ಮುಂದುವರಿಯುವ ಸಾಧ್ಯತೆ ಇದೆ. ಅಂದರೆ ಡಬ್ಬಿಂಗ್ ಕಾರ್ಯಕ್ರಮಗಳು ಕನ್ನಡಕ್ಕೆ ಹಿಂಬಾಗಿಲಿನಿಂದ ಬಂದಂತಾಗಿದೆ. ಈ ಬೆಳವಣಿಗೆಯನ್ನು ಅತ್ತ ಕನ್ನಡ ಚಿತ್ರರಂಗದ ಡಬ್ಬಿಂಗ್ ವಿರೋಧಿ ಗುಂಪು ಅತ್ಯಾಶ್ಚರ್ಯದಿಂದ ಗಮನಿಸುತ್ತಿದ್ದರೆ ಇತ್ತ ಡಬ್ಬಿಂಗ್ ಪರ ಗುಂಪು ವಿಜಯೋತ್ಸವ ಆಚರಿಸುವ ಮೂಡಿನಲ್ಲಿದೆ.


'ರಾಧಿಕಾ ಗಂಡ'ನ ಹಾಡು

ಕೋಮಲ್ ನಾಯಕನಾಗಿ ನಟಿಸಿರುವ 'ಗೋವಿಂದಾಯ ನಮಃ' ಚಿತ್ರ ಬಾಕ್ಸ್ ಆಫೀಸ್‌ನಲ್ಲಿ ಹಿಟ್ ಆದನಂತರ ಅವರು ನಟಿಸಿರುವ ಚಿತ್ರಗಳಲ್ಲಿ ಒಂದು ಹೊಸ ಟ್ರೆಂಡ್ ಶುರುವಾದಂತಿದೆ. ಅದೇನೆಂದರೆ ಕೋಮಲ್ ಚಿತ್ರವೆಂದರೆ ಅದರಲ್ಲಿ 'ಸಂದೂಕೆ ಪ್ಯಾರ್‌ಗೆ ಆಗ್ಬುಟ್ಟೈತೆ' ತರಹದ ಹಾಡುಗಳಿರಬೇಕೆಂಬುದು. ಆ ಕಾರಣಕ್ಕೇ ಕೋಮಲ್ ನಟಿಸಿರುವ 'ರಾಧಿಕಾ ಗಂಡ' ಚಿತ್ರಕ್ಕೆ ಸಂಗೀತ ನಿರ್ದೇಶಕ ಮಣಿಕಾಂತ್ ಕದ್ರಿ ಒಂದು ಹೊಸ ಬಗೆಯ ಹಾಡನ್ನು ಸಂಯೋಜಿಸಿದ್ದಾರಂತೆ.



ಎಲ್ಲರಿಗೂ ಗೊತ್ತಿರುವಂತೆ ಕನ್ನಡ ಚಿತ್ರರಂಗದ ಮಾಜಿ ನಟಿ ರಾಧಿಕಾ ಕುಮಾರಸ್ವಾಮಿ ಮಂಗಳೂರಿನ ಬೆಡಗಿ. ಅಂದರೆ ತುಳು ಮಾತನಾಡುವ ಹುಡುಗಿ. ಈ ಹಿನ್ನೆಲೆಯಲ್ಲಿ 'ರಾಧಿಕಾ ಗಂಡ' ಚಿತ್ರದಲ್ಲಿ ತುಳು ಭಾಷೆಯನ್ನು ಒಂದು ಹಾಡಿನಲ್ಲಿ ಬಳಸಲಾಗಿದೆಯಂತೆ. ಇದರಿಂದಾಗಿ ಈ ಚಿತ್ರದ ಕಥೆಗೂ ರಾಧಿಕಾಗೂ ಏನಾದರೂ ಸಂಬಂಧವಿರಬಹುದೇ ಎಂಬ ಸಂಶಯ ಗಾಂಧಿನಗರಿಗರಲ್ಲಿ ಇನ್ನಷ್ಟು ಗಟ್ಟಿಯಾಗುತ್ತಿದೆ. ಅದೇನೇ ಇರಲಿ, 'ಪ್ಯಾರ್‌ಗೆ ಆಗ್ಬುಟ್ಟೈತೆ' ಹಾಡಿಗೂ 'ಗೋವಿಂದಾಯ ನಮಃ' ಚಿತ್ರದ ಕತೆಗೂ ಸಂಬಂಧವಿತ್ತು. ಆದರೆ 'ರಾಧಿಕಾ ಗಂಡ' ಚಿತ್ರದಲ್ಲಿ ಮಣಿಕಾಂತ್ ಕದ್ರಿ ಒಂದು ಹಾಡನ್ನು ಬಲವಂತವಾಗಿ ತುರುಕಿಸಿದ್ದಾರೋ ಅಥವಾ ನಿಜವಾಗಿಯೂ ಅಗತ್ಯ ಇತ್ತೋ ಗೊತ್ತಿಲ್ಲ. ಒಂದಂತೂ ಗೊತ್ತು, ಇನ್ನು ಮುಂದೆ ಕೋಮಲ್ ಅವರ ಸಿನಿಮಾಗಳಲ್ಲಿ ಇಂಥ ಭಾಷಾಮಿಶ್ರಿತ ಹಾಡುಗಳು ಕಾಟವಂತೂ ಇದ್ದೇ ಇರುತ್ತದೆ.

ಕೃಪಾ ತೂಂಬರಿರೀ!



...ಬಳ್ಳಾರಿ ಸುತ್ತಮುತ್ತಲಿನ ...ವಾತಾವರಣವನ್ನೇ ವಿಕಾರಗೊಳಿಸಿದ ...ಮುಲು ಈಗ ತನ್ನನ್ನು ತಾನೇ ...ದುಳಿದ ವರ್ಗದ ನಾಯಕ ...ದು ಹೇಳಿಕೊಳ್ಳುತ್ತಿರುವುದು ...ಪರ್ಯಾಸವೆನಿಸುತ್ತದೆ. ಗಣಿಗೆ, ...ಮಾನ ನಿಲ್ದಾಣಕ್ಕೆ ...ವಂತದಿಂದ ಹೊಟ್ಟೆಗೆ ಹಿಟ್ಟು ...ಕುವ ಭೂಮಿಯನ್ನು ...ದುಕೊಂಡು ಇಂದಿಗೂ ಅಳುತ್ತಿರುವ ಸಾವಿರಾರು ...ಟುಂಬಗಳ ಕಣ್ಣೀರ ಶಾಪ ತಪ್ಪು ಮಾಡಿದವರಿಗೆ ...ಯದೇ ಇರದು. ಮಾಡೋದೆಲ್ಲಾ ಮಾಡಿಬಿಟ್ಟು ...ವಸೆಗಳ ಮಹಾಪೂರ ಹರಿಸುತ್ತ ಪಾದಯಾತ್ರೆ ...ಸುತ್ತಿರುವ ರಾಮುಲುಗೆ ಜನರು ಒಂದು ಪ್ರಶ್ನೆ ...ಕೇಳಬೇಕಿದೆ. "ಗಣಿಗೆ ಬಗೆದ ನೆಲದಲ್ಲಿ ಒಂದು ...ಸಿ ನೆಟ್ಟು ಅಲ್ಲಿ ನೆರಳು ...ಳಿಸು ಆನಂತರ ಇಲ್ಲಿಗೆ ..." ಎಂದು.

- ಹಳ್ಳಿ ಬಸವರಾಜ, ...ಧನೂರು



...ಡಕಾಗೆ ಮತ್ತು ...ಪಾದಕೀಯ ...ಷ್ಟವಾದವು ...ಮೇ 2, 2012ರ ...ಚಿಕೆಯಲ್ಲಿ 'ದೀದಿಯ ...ದಾಗಿರಿ ಮತ್ತು ...ಕೆಗಳ ಚಮಚಾಗಿರಿ' ... ಕಂಡಹಾಗೆ ...ಸದಲ್ಲಿ ಪ್ರಭುತ್ವಗಳು ...ಧ್ಯಮಗಳನ್ನು ಹೇಗೆ ... ಕೆಗ್ಗಿ ...ಕೊಂಡು ತಮ್ಮ ಸೋಗಲಾಡಿತನವನ್ನು ಮುಚ್ಚಿ ಹಾಕಿಕೊಳ್ಳುತ್ತವೆ ಎನ್ನುವುದನ್ನು ನೋಡಿ ಮನಸ್ಸಿಗೆ ಖೇದವಾಯಿತು.

ಪ್ರಜಾತಂತ್ರ ವ್ಯವಸ್ಥೆಯಲ್ಲಿ ಜನರ ಪರವಾಗಿ ಪ್ರಭುತ್ವಕ್ಕೆ ಮೂಗುದಾರ ಹಾಕಿ ತಮ್ಮ ಕೆಲಸ ನಿರ್ವಹಿಸಬೇಕಾದ ಮಾಧ್ಯಮಗಳೆ ಪ್ರಭುತ್ವದ ಅಡಿಯಾಳಾದರೆ ಜನರಿಗೆ ಸತ್ಯಸಂಗತಿಗಳನ್ನು ತಿಳಿಸುವವರು ಯಾರು? ಹಣದಾಸೆಗಾಗಿ ತಮ್ಮ ನೈಜ ಕಳಕಳಿಯನ್ನೇ ಮರೆತು ತಮ್ಮತನವನ್ನೇ ಮಾರಿಕೊಳ್ಳುತ್ತಿರುವ ಪತ್ರಿಕೆಗಳಿಗೆ ಧಿಕ್ಕಾರವಿರಲಿ.

'ಸಂಪಾದಕೀಯ'ದಲ್ಲಿ ಪಾರ್ವತೀಶ ಅವರು 'ಸಮಾಜದ ಕಟ್ಟಕಡೆಯ ವೃತ್ತಿಯವರ ಜೊತೆ ನಿಂತಾಗ' ಲೇಖನ ಓದಿದೆ. ಊರ ಹೇಲು, ಉಚ್ಚೆ ಕಸ ಗುಡಿಸುವವರ ಗೋಳು ಹೇಳತೀರದು. ಆಳುವವರಿಗೆ ಅವರ ಬಗ್ಗೆ ಆಲೋಚನೆಯೇ ಇಲ್ಲ. ವಿದೇಶಿ ಬಂಡವಾಳ ಹೂಡಿಕೆದಾರರನ್ನು ರತ್ನಗಂಬಳಿ ಹಾಸಿ ಆಮಂತ್ರಿಸುವವರಿಗೆ ನಮ್ಮ ಜನ ಆಳುವವರ ಕಣ್ಣಿಗೆ ಕಾಣುವುದೇ ಕಷ್ಟ. ಖಾಸಗಿ ಗುತ್ತಿಗೆದಾರರಿಗೆ ಕಸ ನಿರ್ವಹಣೆಯ ಗುತ್ತಿಗೆ ಕೊಟ್ಟು ಸರ್ಕಾರ ಕೈತೊಳೆದುಕೊಳ್ಳುತ್ತದೆ. ಆದರೆ ಪೌರ ಕಾರ್ಮಿಕರ ಬದುಕಿನ ಗೋಳು ಹೇಳತೀರದು. ಗ್ಲೋವ್ಜ್ ಇಲ್ಲ, ಗಂಬೂಟ್ ಇಲ್ಲ, ಮಾಸ್ಕ್ ಇಲ್ಲ. ಅತ್ತ ಸಾಯಲು ಆಗದ, ಇತ್ತ ಬದುಕಲು ಆಗದಷ್ಟು ವೇತನ ಕೊಟ್ಟು ಅವರನ್ನು ಜೀವಂತ ಇಟ್ಟಿದ್ದಾರೆ. ಇವರ ಪರವಾಗಿ ಎಲ್ಲರೂ ಪ್ರಬಲವಾದ ಧ್ವನಿ ಎತ್ತಿದರೆ ಮಾತ್ರ ಪೌರ ಕಾರ್ಮಿಕರ ಬದುಕಿಗೆ ನೆಮ್ಮದಿ ದೊರೆಯಲು ಸಾಧ್ಯ.

'ವಿಕಲನಿಗೆ ಕೈ ಕೋಳದ ಪರೀಕ್ಷೆ.....' ಎಂಬ ಇಸ್ಮತ್ ಫಜೀರ್‌ರವರ ಪತ್ರ ಉಪಕುಲಪತಿಗಳ ಮನಸ್ಸು ತೆರೆಸಲಿ ಎಂದು ಆಶಿಸುತ್ತೇನೆ.

- ಕಾಲಕಾಲೇಶ್ವರ ಹಾದಿಮನಿ, ಮೈಸೂರು

ಶ್ರೀರಾಮುಲು ಪಾದಯಾತ್ರೆ ಬಗ್ಗೆ ಬರೆದ ಸಂಪಾದಕೀಯ ಚೆನ್ನಾಗಿದೆ. ಕಾಡೇಗೂಡೆ ವಿಭಾಗವನ್ನು ಮತ್ತೆ ಪ್ರಾರಂಭ ಮಾಡಿ.

- ಬಿ. ಬಸವರಾಜು, ಧಾರವಾಡ

ಮೇ 2, 2012ರ ಸಂಚಿಕೆಯಲ್ಲಿ ಪ್ರಕಟಗೊಂಡ ಕಥೆ 'ಮೋಹನದಾಸನೆಂಬ ಮುದುಕನೂ, ಭಾರತವರ್ಷವೂ' ತುಂಬಾ ಇಷ್ಟವಾಯಿತು. ಅತ್ಯಂತ ಸಮಯೋಚಿತವಾಗಿದ್ದ ಈ ಕಥೆಯನ್ನು ಬರೆದ ಕು.ಸಾ. ಮಧುಸೂದನ್ ಅವರಿಗೆ ಅಭಿನಂದನೆಗಳು.

- ಡಾ. ವಾಸುದೇವ್, ಶಿವಮೊಗ್ಗ

ಚಿತ್ರರಂಗದ ಕೆಲವೇ ಮಂದಿಗಾಗಿ ಡಬ್ಬಿಂಗ್‌ಗೆ ಬಹಿಷ್ಕಾರ ಹಾಕುವುದು ತರವಲ್ಲ. ಜಗತ್ತಿನ ಬೇರೆ ಭಾಷೆಯ ಚಿತ್ರಗಳನ್ನು ನಮ್ಮ ಭಾಷೆಯಲ್ಲಿ ನೋಡುವಂತಾಗಲು ಡಬ್ಬಿಂಗ್ ಬೇಕೇ ಬೇಕು. ನಮ್ಮ ನಟರ ಅಭಿಪ್ರಾಯಗಳು ಆರು ಕೋಟಿ ಕನ್ನಡಿಗರ ಅಭಿಪ್ರಾಯವಲ್ಲ.

- ರಾಜಗೋಪಾಲ, ಬೆಂಗಳೂರು

Registered No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 14/- 23-05-2012 RNI No. KARKAN200

ಕಠಾರಿವೀರನ ವಿರುದ್ಧ ಕಳ್ಳತನದ ಆರೋಪ



ಆರಂಭದಿಂದಲೂ ಉಪೇಂದ್ರರ ಸಿನಿಮಾಗಳಿಗೆ ಕಥೆಯ ವಿಚಾರದಲ್ಲಿ ಕಳ್ಳತನದ ಆರೋಪ ಮೆತ್ತಿಕೊಳ್ಳುತ್ತಲೇ ಬಂದಿದೆ.

ಈಗ ನಿರಂಜನ್ ಶೆಟ್ಟಿ ಎಂಬಾತ "'ಕಠಾರಿವೀರ ಸುರಸುಂದರಾಂಗಿ' ಕಥೆ ನನ್ನದು. ನನ್ನ ಕಥೆಯನ್ನು ಕದ್ದು ಸಿನಿಮಾ ಮಾಡಿದ್ದಾರೆ" ಎಂದು ಆರೋಪಿಸಿ ಉಪೇಂದ್ರ ಮತ್ತು ನಿರ್ಮಾಪಕ ಮುನಿರತ್ನರನ್ನು ಕೋರ್ಟ್ ಮೆಟ್ಟಿಲೇರಿಸಿದ್ದಾರೆ. ಉಪೇಂದ್ರರ ಪಾಲಿಗೆ ಇಂಥ ಆರೋಪಗಳು ಸರ್ವೇಸಾಮಾನ್ಯ ಎಂಬಂತಾಗಿದೆ. ಉಪ್ಪಿ ನಿರ್ದೇಶಿಸಿದ್ದ 'ಶ್!' ಬಿಡುಗಡೆಯಾದಾಗ ಅದು ರಿಮೇಕ್ ಎಂಬ ಆರೋಪ ಕೇಳಿಬಂದಿತ್ತು, ನಂತರ ಶಿವರಾಜ್ ಕುಮಾರ್ ನಾಯಕರಾಗಿದ್ದ 'ಓಂ' ಚಿತ್ರದ ಕಥೆ ಉಪೇಂದ್ರರದ್ದಲ್ಲ, ಅದು ತಾನು ಬರೆದ ಕಥೆ ಎಂದು ಪತ್ರಕರ್ತರೊಬ್ಬರು ಬಾಯಿಬಡಿದು ಕೊಂಡಿದ್ದರು. ಅದಾಗಿ ಭರ್ತಿ ಹತ್ತು ವರ್ಷಗಳ ನಂತರ ಉಪ್ಪಿ ನಿರ್ದೇಶಿಸಿದ್ದ 'ಸೂಪರ್' ಚಿತ್ರದ ಕಥೆ ತನ್ನದು ಎಂದು 'ಪರೋಲ್' ಚಿತ್ರದ ನಿರ್ದೇಶಕ ರಾಜಶೇಖರ್ ಹೇಳಿಕೊಂಡು ತಿರುಗಾಡಿದರು. ಸದ್ಯ ನಿರಂಜನ್ ಶೆಟ್ಟಿ ಆರೋಪಿಸುತ್ತಿರುವುದು ಏನೆಂದರೆ ಸುಮಾರು ಎಂಟು ವರ್ಷಗಳ ಹಿಂದೆ ಸಂಗೀತ ನಿರ್ದೇಶಕ ವಿ. ಮನೋಹರ್ ಅವರ ಮೂಲಕ ಉಪೇಂದ್ರರನ್ನು ಸಂಪರ್ಕಿಸಿ 'ದೇವೇಂದ್ರ ವರ್ಸಸ್ ಉಪೇಂದ್ರ' ಎಂಬ ಕಥೆಯೊಂದನ್ನು ಹೇಳಿಬಂದಿದ್ದರಂತೆ. "ಇಷ್ಟು ವರ್ಷಗಳ ನಂತರ ಅದೇ ಕಥೆಯನ್ನು ನನ್ನ ಅನುಮತಿ ಪಡೆಯದೆ 'ಕಠಾರಿವೀರ ಸುರಸುಂದರಾಂಗಿ' ಎಂಬ ಚಿತ್ರ ಮಾಡಲಾಗಿದೆ" ಎನ್ನುವುದು ನಿರಂಜನ್ ಶೆಟ್ಟಿಯ ವಾದ.

ಅದು ನಿಜವಾಗಿದ್ದರೆ ಚಿತ್ರ ಬಿಡುಗಡೆಯ ಹಂತ ತಲುಪುವ ವರೆಗೆ ಯಾಕೆ ಸೈಲೆಂಟಾಗಿದ್ದರಿ? ಎಂದರೆ, ಈ ಮಹಾತ್ಮ "ಇತ್ತೀಚಿನ ಇದು ನನ್ನ ಕಥೆ ಎಂದು ಗೊತ್ತಿರಲಿಲ್ಲ, ಟಿವಿ ಕಾರ್ಯಕ್ರಮಗಳು ಮತ್ತು ಪ್ರೊಮೋಗಳನ್ನು ನೋಡಿದ ನಂತರ ನನ್ನ ಗಮನಕ್ಕೆ ಬಂತು" ಎಂದು ಹೇಳುತ್ತಿದ್ದಾರೆ. ಆದರೆ ನಿಜಕ್ಕೂ ಉಪೇಂದ್ರ ಕಥೆ ಕದ್ದರೋ? ಅಥವಾ ಪ್ರಚಾರ ಮತ್ತು ಕೈ ಖರ್ಚಿಗೆ ನಿರಂಜನ್ ಎಂಬಾತ ವರಾತ ತೆಗೆದಿದ್ದಾನೋ ಗೊತ್ತಿಲ್ಲ.

ಮುನಿರತ್ನ ಬರೆದ ಕಥೆಯಾ?



ಹಿಂದೆ 'ಕಂಬಾಲಪಳ್ಳಿ' ಎಂಬ ಚಿತ್ರದ ಕಥೆ ನಿರ್ಮಾಪಕ ಮುನಿರತ್ನರ ಹೆಸರಿನಲ್ಲಿತ್ತಾದ್ದರಿಂದ ಆ ಚಿತ್ರಕ್ಕೆ ಬಂದ ರಾಜ್ಯ ಪ್ರಶಸ್ತಿಯನ್ನೂ ಮುನಿ ಸ್ವೀಕರಿಸುವಂತಾಗಿತ್ತು. ಈ ಬಾರಿಯೂ 'ಕಠಾರಿವೀರ ಸುರಸುಂದರಂಗಿ' ಚಿತ್ರದ ಕಥೆಯ ಕ್ರೆಡಿಟ್ ಮುನಿರತ್ನ ಅವರದ್ದಾಗಿದೆ. ಆದರೆ ಮುನಿರತ್ನ ಕೂತು ಕತೆ ಬರೆಯುವ ಪೈಕಿಯಲ್ಲ ಎನ್ನುವುದು ಇಡೀ ಗಾಂಧಿನಗರಕ್ಕೇ ಗೊತ್ತಿರುವ ವಿಚಾರ. ಆದರೆ ಉಪ್ಪಿ ಮಾತ್ರ ಇದನ್ನು ಒಪ್ಪಿಕೊಳ್ಳುತ್ತಿಲ್ಲ. "ಕಥೆ ಬರೆದಿರುವುದು ಮುನಿರತ್ನ, ನನ್ನದೇನಿದ್ದರೂ ಚಿತ್ರಕಥೆ ಮಾತ್ರ. ನಿರಂಜನ ಶೆಟ್ಟಿ ಎಂಬ ನಿರ್ದೇಶಕರ ಬಗ್ಗೆ ನನಗೇನೂ ಗೊತ್ತಿಲ್ಲ, ಅವರು ಕಥೆ ಹೇಳಲು ಬಂದಿದ್ದೂ ನನಗೆ ನೆನಪಿಲ್ಲ. ಸಾಕಷ್ಟು ಮಂದಿ ನನ್ನನ್ನು ಭೇಟಿ ಮಾಡುತ್ತಾರೆ. ನನ್ನ ಪ್ರಕಾರ ಪ್ರಚಾರಕ್ಕಾಗಿ ಹೀಗೆ ಮಾಡುತ್ತಿರಬಹುದು" ಎಂದು ಹೇಳಿ ಸುಮ್ಮನಾಗಿದ್ದಾರೆ. ಇನ್ನಾದರೂ ಹೊಸ ಕಥೆಗಾರರು ಸಿಕ್ಕಸಿಕ್ಕ ಸ್ಟಾರ್‌ಗಳಿಗೆ ಮತ್ತು ಡೈರೆಕ್ಟರುಗಳಿಗೆ ಆರಂಭದಿಂದ ಅಂತ್ಯದವರೆಗೆ ಕಥೆಯನ್ನು ಡೀಟೇಲಾಗಿ ಹೇಳುವ ಮುನ್ನ ಯೋಚಿಸುವುದು ಉತ್ತಮ. ಇಲ್ಲದಿದ್ದರೆ ನಿರಂಜನ್ ಶೆಟ್ಟಿ ತರಹ ಸಿನಿಮಾ ಬಿಡುಗಡೆ ಹೊತ್ತಿಗೆ ಬಾಯಿ ಬಡಿದುಕೊಳ್ಳಬೇಕಾಗುತ್ತದೆ!

ಮುಂದಿನ ವಾರ ಬೆಂಗಳೂರಿಗರು ಸ್ವರ್ಗಲೋಕ ಮತ್ತು ಯಮಲೋಕವನ್ನು ನೋಡಬೇಕೆಂದರೆ ನೇರವಾಗಿ ನರ್ತಕಿ ಥಿಯೇಟರ್‌ಗೆ ಬರಬೇಕು.

ಏಕೆಂದರೆ ಮುನಿ ನಿರ್ಮಾಣದ ಬಹು ಅದ್ದೂರಿಯ ಮತ್ತು ಅಷ್ಟೇ ವಿವಾದಾತ್ಮಕ 'ಕಠಾರಿವೀರ ಸುರಸುಂದರಾಂಗಿ' ಚಿತ್ರಕ್ಕೆ ಹೈದರಾಬಾದ್‌ನಲ್ಲಿ ಹಾಕಿದ್ದ ಸ್ವರ್ಗ ಮತ್ತು ಯಮಲೋಕದ ಸೆಟ್‌ಗಳನ್ನು ಮುನಿ, ನರ್ತಕಿ ಚಿತ್ರ ಮಂದಿರದ ಮುಂದೆ ಹಾಕಿಸಲಿದ್ದಾರೆ. ಆ ಮೂಲಕ ತಮ್ಮ ಚಿತ್ರಕ್ಕೆ ಪ್ರೇಕ್ಷಕರನ್ನು ಆಕರ್ಷಿಸುವ ಹೊಸ ತಂತ್ರಕ್ಕೆ ಮುನಿ ಕೈ ಹಾಕಿದ್ದಾರೆ.

ಕಳೆದ ಎರಡು ಮೂರು ವಾರಗಳಿಂದ ಟಿ.ವಿ. ಚಾನೆಲ್‌ಗಳಲ್ಲಿ ನಿರಂತರವಾಗಿ ಕಾಣಿಸಿಕೊಳ್ಳುತ್ತಿರುವ ಈ ಚಿತ್ರದ ನಾಯಕ ಉಪೇಂದ್ರ ಮತ್ತು ನಾಯಕಿ ರಮ್ಯಾ ಈಗಾಗಲೇ ಇದಕ್ಕೆ ಪ್ರತ್ಯೇಕವಾಗಿ ಭಾರಿ ಪ್ರಚಾರವನ್ನು ಗಿಟ್ಟಿಸಿದ್ದಾರೆ. ಈಗ ಇಂತಹ ಸೆಟ್ ಅನ್ನು ಹಾಕುವ ಮೂಲಕವೂ ಮುನಿ ಮತ್ತೆ ಪ್ರತ್ಯೇಕ ಪ್ರಚಾರ ಪಡೆಯಲಿದ್ದಾರೆ.

ನಾವೂ ಕೂಡ ಇಲ್ಲಿ ಪ್ರತ್ಯೇಕ ಪ್ರಚಾರ ಕೊಡುತ್ತಿರುವಂತೆ!



ದೂದ್ ಪೇಡಾ ಜೊತೆ ರಮ್ಯಾ!

ಡಿಂಪಲ್ ಸ್ಟಾರ್ ದಿಗಂತ್ ಮತ್ತು ರಮ್ಯಾ ಕೊನೆಗೂ ನಾಯಕ ನಾಯಕಿಯಾಗಿ ಬೆಳ್ಳಿತೆರೆಯಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಇವರಿಬ್ಬರನ್ನು ಒಟ್ಟುಮಾಡಿರುವುದು ತೆಲುಗಿನ ನಿರ್ದೇಶಕ ಕೂಡ್ಲು ರಾಮಕೃಷ್ಣ

ದಿಗಂತ್ ಮತ್ತು ರಮ್ಯಾ ಜೊತೆಯಾಗಿ ನಟಿಸಲು ಒಪ್ಪಿಕೊಂಡಿರುವುದು ಈಗ ಬಹಳ ದೊಡ್ಡ ಸುದ್ದಿಯಾಗಿದೆ. ಇವರಿಬ್ಬರೂ ಅಂತಹ ಮಹಾನ್ ನಟನಟಿಯಲ್ಲದಿದ್ದರೂ ಇವರ ಮಿಲನಕ್ಕೆ ಹತ್ತು ಹಲವು ಅರ್ಥಗಳು ಸಿಗುತ್ತಿವೆ.

ದಿಗಂತ್ ಮತ್ತು ಐಂದ್ರಿತಾ ರೈ ಬಹಳ ಕ್ಲೋಸ್ ಫ್ರೆಂಡ್ಸ್ ಎಂಬುದು ಬರೀ ಚಿತ್ರೋದ್ಯಮಕ್ಕೆ ಮಾತ್ರವಲ್ಲ, ಇಡೀ ಕರ್ನಾಟಕಕ್ಕೆ ಗೊತ್ತಿರುವ ವಿಷಯ. ಅದೇರೀತಿ ಐಂದ್ರಿತಾ ಮತ್ತು ರಮ್ಯಾರಿಗೆ ಒಬ್ಬರಿಗೊಬ್ಬರು ಆಗುವುದಿಲ್ಲ ಎಂಬುದು ಎಲ್ಲರಿಗೂ ಗೊತ್ತು. ಈ ಹಿನ್ನೆಲೆಯಲ್ಲಿ ರಮ್ಯಾ ತನ್ನ ಸಂಪ್ರದಾಯಕ ವೈರಿಯಾದ ಐಂದ್ರಿತಾಳ ಬಾಯ್ ಫ್ರೆಂಡ್ ಜೊತೆ ನಟಿಸುತ್ತಿರುವುದಕ್ಕೆ ವಿಶೇಷ ಅರ್ಥ ಬರಲಾರಂಭಿಸಿದೆ.

ಇತ್ತೀಚೆಗೆ ದಿಗಂತ್ ಯಾವುದೇ ಸಭೆಸಮಾರಂಭಗಳಿಗೆ ಹೋದರೂ ಆತನ ಬೆಂಗಾವಲಾಗಿ ಐಂದ್ರಿತಾ ಹೋಗುತ್ತಾಳೆ. ಅದಕ್ಕೆ ಕಾರಣ ಯಾವುದೇ ಕಾರಣಕ್ಕೂ ತನ್ನ ಸುಂದರ ಬಾಯ್ ಫ್ರೆಂಡ್ 'ಹಾದಿ ತಪ್ಪಿ' ಬೇರೆಯವಳ ಪಾಲಾಗಬಾರದೆಂಬ ಎಚ್ಚರಿಕೆ. ಈಗ ಪ್ರಶ್ನೆ ಇಷ್ಟೆ: ರಮ್ಯಾ ಜೊತೆ ದಿಗಂತ್ ನಟಿಸುವಾಗಲೂ ಐಂದ್ರಿತಾ ಸೆಟ್ಟಿಗೆ ಹೋಗಿ ಆತನ ಮೇಲೆ ನಿಗಾ ಇಡುತ್ತಾಳಾ ಎಂಬುದು!

'ಶ್ರೇಯಾ' ಬಂದಳು 'ಚಂದ್ರ'ನ ಜೊತೆಗೆ



ತಮಿಳು ಚಿತ್ರರಂಗದ ಸುಂದರಿ ಶ್ರೇಯಾ ಶರಣ್ ಕನ್ನಡ ಸಿನಿಮಾದಲ್ಲಿ ನಟಿಸುತ್ತಿದ್ದಾಳೆ. ಈಕೆ ನಟಿಸುತ್ತಿರುವ ಚಿತ್ರದ ಹೆಸರು 'ಚಂದ್ರ'. ನೆನಪಿರಲಿ ಪ್ರೇಮ್ ಈಕೆಯೊಂದಿಗೆ ನಾಯಕನಾಗಿ ಕಾಣಿಸಿಕೊಳ್ಳಲಿದ್ದಾನೆ. ತಮಿಳು ಮತ್ತು ಕನ್ನಡ ಭಾಷೆಯಲ್ಲಿ ಏಕಕಾಲದಲ್ಲಿ ತಯಾರಾಗುತ್ತಿರುವ ಈ ಚಿತ್ರದ ನಿರ್ಮಾಣ ಮತ್ತು ನಿರ್ದೇಶನದ ಜವಾಬ್ದಾರಿಯನ್ನು ರೂಪ ಅಯ್ಯರ್ ನಿರ್ವಹಿಸಲಿದ್ದಾರೆ.

ಅಂದಹಾಗೆ ಈ ದುಬಾರಿ ಶ್ರೇಯಾಳನ್ನು ಕನ್ನಡಕ್ಕೆ ಕರೆತರಲು ಬಹಳಷ್ಟು ಜನ ಶ್ರಮಿಸಿದ್ದರು. ಆದರೆ ಯಾರೂ ಯಶಸ್ವಿಯಾಗಿರಲಿಲ್ಲ. ತಮಿಳು ಮತ್ತು ತೆಲುಗು ಚಿತ್ರರಂಗದ ಬಹುತೇಕ ಎಲ್ಲಾ ದೊಡ್ಡ ನಾಯಕನಟರ ಜೊತೆ ನಟಿಸಿರುವ ಶ್ರೇಯಾ ಅತ್ಯಂತ ದುಬಾರಿ ನಟಿ ಮಾತ್ರವಲ್ಲ ಹೆಚ್ಚು ಬೇಡಿಕೆಯನ್ನು ಹೊಂದಿರುವ ನಟಿ ಕೂಡ. ಇಂತಹ ನಟಿಯನ್ನು ಕನ್ನಡ ಚಿತ್ರರಂಗದ ದೊಡ್ಡ ದೊಡ್ಡ ನಿರ್ಮಾಪಕ ಮತ್ತು ನಿರ್ದೇಶಕರೇ ಕರೆತರುವಲ್ಲಿ ವಿಫಲರಾಗಿದ್ದಾಗ, ಈ ರೂಪ ಅಯ್ಯರ್ ಎಂಬ ಅಮಾಮಿಕಳು ಹೇಗೆ ಯಶಸ್ವಿಯಾದಳು ಎಂಬುದರ ಹಿಂದೆ ಒಂದು ಕುತೂಹಲಕರ ಸಂಗತಿ ಅಡಗಿದೆ.

ವಾಸ್ತವವಾಗಿ ಶ್ರೇಯಾಳನ್ನು ಕನ್ನಡಕ್ಕೆ ತಂದಿರುವ ಕೀರ್ತಿ ಪರೋಕ್ಷವಾಗಿ ಕನ್ನಡದ ಮತ್ತೊಬ್ಬ ಮಹಾನ್ ನಟಿ ರಮ್ಯಳಿಗೆ ಸಲ್ಲಬೇಕು. ಅದು ಹೇಗೆಂದರೆ 'ಚಂದ್ರ' ಚಿತ್ರಕ್ಕೆ ಆರಂಭದಲ್ಲಿ ನಾಯಕಿಯಾಗಿ ಬುಕ್ ಆಗಿದ್ದೇ ರಮ್ಯ. ಈ ಚಿತ್ರದಕಥೆ ಕೇಳಿ ಇಷ್ಟಪಟ್ಟಿದ್ದ ರಮ್ಯಳಿಗೆ ನಿರ್ದೇಶಕಿ ರೂಪ ಅಯ್ಯರ್ ಅಡ್ವಾನ್ಸ್ ಕೂಡ ಕೊಟ್ಟಿದ್ದರು. ಆದರೆ ಇದ್ದಕ್ಕಿದ್ದಂತೆ ಒಂದು ದಿನ ರಮ್ಯ "ಈ ಚಿತ್ರಕ್ಕೆ ನಾಯಕನಾಗಿ ಪ್ರೇಮ್ ಬೇಡ. ಬೇರೆ ಯಾರನ್ನಾದರೂ ಹಾಕಿದರೆ ಮಾತ್ರ ನಾನು ನಟಿಸುತ್ತೇನೆ" ಎಂದು ಕಂಡೀಷನ್ ಹಾಕಿದರಂತೆ. ಆದರೆ ಈ ಕಂಡಿಷನ್‌ಗೆ ರೂಪ ಒಪ್ಪಲಿಲ್ಲ. ಅಷ್ಟೇ ಅಲ್ಲ, ರಮ್ಯಾ ಮೇಲೆ ಸೇಡು ತೀರಿಸಿಕೊಳ್ಳುವ ಏಕೈಕ ಉದ್ದೇಶದಿಂದ ರಮ್ಯಾಳಿಗಿಂತ ದುಬಾರಿ ಸಂಭಾವನೆ ನೀಡಿ ಶ್ರೇಯಾಳನ್ನು ಕರೆತಂದಿದ್ದಾರೆ. ಅಂತೂ ರಮ್ಯಾ ಮತ್ತು ರೂಪ ಅಯ್ಯರ್ ನಡುವಿನ ಕೋಳಿ ಜಗಳದಿಂದಾಗಿ ಸುಂದರಿ ಶ್ರೇಯಾ ಕನ್ನಡ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡುತ್ತಿರುವುದು ಮಜಬೂತಾಗಿದೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail : lankesh70@rediffmail.com